
ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 37
ಸೆಪ್ಟಂಬರ್ 15, 2013 ಪುಟ 16 ರೂ. 10/-





ಕಾಂಗ್ರೆಸ್ : ಅಧಿಕಾರದ ಹಂಚಿಕೆಗೆ ಕದನ ಕುತೂಹಲ?





ಯಾಸಿನ್ ಭಟ್ಕಳ್ ಬಂಧನ

'ಖಾಸಗೀಕರಣ ಕೈಬಿಡಿ- ಅಕ್ಷರ ದಾಸೋಹ ನೌಕರರನ್ನು ಖಾಯಂಗೊಳಿಸಿ' 3ನೇ ರಾಜ್ಯ ಸಮ್ಮೇಳನದ ಒಕ್ಕೊರಲ ಆಗ್ರಹ

ಕೋಲಾರ : ಹೆಂಡತಿ, ಮಗುವಿನ ಕಗ್ಗೊಲೆ : ಹಂತಕನ ಬಂಧನಕ್ಕೆ ಪೊಲೀಸರಿಗೇಕೆ ಮುಲಾಜು?



ಜನಶಕ್ತಿ
ಕನ್ನಡ ವಾರಪತ್ರಿಕೆ

ಯುರೋಪಿಯನ್ ಆರ್ಥಿಕತೆಯಲ್ಲಿಗಂಭೀರ ಬಿಕ್ಕಟ್ಟು

ಯುರೋಪ್ ಖಂಡದ ದೇಶಗಳು ಕೂಡಿ 'ಯುರೋ ವಲಯ' ಅಥವಾ 'ಯುರೋ ಜೋನ್' ರಚಿಸಿಕೊಂಡ ಸಂದರ್ಭವೇನು ? ಅಂದು ಜನರ ಕಣ್ಣ ಮುಂದೆ ಹಾರಿಬಿಟ್ಟ ಕನಸ ಗುಳ್ಳೆಗಳು ಇಂದು ಏನಾಗಿವೆ. ? ಯಾಕೆ ಹೀಗಾಗಿದೆ ? ಓದಿ.




ಎಂ. ರತ್ನಾಕರ ಶೆಣೈ. ಭಾಗ-4

ಕನಸ ಲಹರಿಯಲ್ಲಿ ತೇಲಿಬಂದ 'ಯುರೋ ಒಕ್ಕೂಟ'

ಯುರೋಪಿಯನ್ ಸಮುದಾಯ ಮತ್ತು ಯುರೋವಲಯ ಮೂಡಿ ಬಂದ ಕಾಲಘಟ್ಟವನ್ನು ನಾವು ಸ್ವಲ್ಪ ಗಮನಿಸಬೇಕು. 1989ರಲ್ಲಿ ಸೋವಿಯತ್ ಒಕ್ಕೂಟ ಪತನಗೊಂಡ ನಂತರ ಸಮಾಜವಾದಕ್ಕೆ ದೊಡ್ಡ ಹಿನ್ನಡೆಯಾಯಿತು. ಯುರೋಪಿನ ಸಮಾಜವಾದೀ ರಾಷ್ಟ್ರಗಳೆಲ್ಲಾ ರಾತ್ರೆ ಕಳೆದು ಬೆಳಗಾಗುವಷ್ಟರಲ್ಲಿ ಬಂಡವಾಳಶಾಹಿ ಆರ್ಥಿಕತೆಯನ್ನು ಅಪ್ಪಿಕೊಂಡವು. "ಸಮಾಜವಾದ ಸತ್ತಿದೆ, ಬಂಡವಾಳಿಶಾಹಿಯೊಂದೇ ದಾರಿ" ಎಂಬ ಅಬ್ಬರದ ಯಿಯಿಪ್ರಚಾರ ಜಗತ್ತಿನಾದ್ಯಂತ ವ್ಯಾಪಿಸಿತು. ಅದೇ ಸಮಯದಲ್ಲಿ ಬಂಡವಾಳಶಾಹಿ ಆರ್ಥಿಕ ಚೌಕಟ್ಟಿನ ಮುಂಚೂಣಿ ಪಾತ್ರವನ್ನು ವಹಿಸಿಕೊಂಡ ಹಣಕಾಸು ಬಂಡವಾಳ ಜಗತ್ತಿನೆಲ್ಲೆಡೆ ತನ್ನ ಆಧಿಪತ್ಯವನ್ನು ಮೆರೆಯಲು ಆರಂಭಿಸಿತ್ತು. ನವ ಉದಾರೀಕರಣದ ನೀತಿಗಳಿಗೆ ದೇಶಗಳು ಶರಣಾಗುತ್ತಿದ್ದವು. ಷೇರು ಮಾರುಕಟ್ಟೆಗಳು ವಿಜೃಂಭಿಸುತ್ತಾ ಎಲ್ಲೆಡೆ ಹಣದ ಹೊಳೆಯನ್ನೇ ಹರಿಯಬಿಟ್ಟಿದ್ದವು. ಸ್ಥಿರಾಸ್ತಿ ವ್ಯವಹಾರ (Real Estate Business) ಬಹಳವಾದ ಏರುಗತಿಗೆ ಕಾಲಿಟ್ಟಿತ್ತು. ಶ್ರೀಮಂತರ ಉಪಭೋಗದ ಕಾರು ಇತ್ಯಾದಿ ವೈಭವದ ಹಾಗೂ ವಿಲಾಸೀ ಸರಕುಗಳು ಮಾರುಕಟ್ಟೆಗಳನ್ನು ಪ್ರವಾಹೋಪಾದಿಯಲ್ಲಿ ಆಕ್ರಮಿಸಿಕೊಂಡಿದ್ದವು. ಬೆಳವಣಿಗೆ, ಅಭಿವೃದ್ಧಿಯೆಂದರೆ ಇದೇ ಎಂಬ ಹುಸಿಭ್ರಮೆ ಎಲ್ಲರನ್ನೂ ಆವರಿಸಿಕೊಳ್ಳುತ್ತಿತ್ತು. ಜನಸಮೂಹದಲ್ಲಿನ ಕಡಿಮೆ ಸಂಖ್ಯೆಯ ಒಂದು ವಿಭಾಗದ ಮಂದಿ ಸಾಮಾನ್ಯಸ್ತರದ ಬದುಕಿನಿಂದ ಶ್ರೀಮಂತ ಲೋಲುಪತೆಯ ಜೀವನಕ್ಕೆ ಬದಲಾಗಿದ್ದರು. ಆಳುವಜನ ಅಂತಹ ನಿದರ್ಶನಗಳನ್ನೇ ಎತ್ತಿ ತೋರಿಸಿ "ಈ ಜೀವನ ನಿಮ್ಮ ಪಾಲಿಗೂ ಲಭ್ಯವಾಗಲಿದೆ" ಎಂದು ಹರಿಯಬಿಟ್ಟ ಕನಸಿನ ಲಹರಿಯಲ್ಲಿಯೇ ಸಾಮಾನ್ಯ ಜನವಿಭಾಗ ತೇಲತೊಡಗಿತ್ತು.

ಹಣಕಾಸು ಬಂಡವಾಳದ ದೊಡ್ಡ ಕೇಂದ್ರವಾಗಿರುವ ಅಮೇರಿಕಾ ತನ್ನ ಸಾಮ್ರಾಜ್ಯಶಾಹಿ ಧೋರಣೆಗಳನ್ನು ಈ ಕಾಲ ಘಟ್ಟದಲ್ಲೇ ಜಗತ್ತಿನೆಲ್ಲೆಲ್ಲಾ ಲಂಗುಲಗಾಮಿಲ್ಲದೆ ಹರಿಯಬಿಡಲು ಆರಂಭಿಸಿತ್ತು. ಆರ್ಥಿಕ ಕ್ಷೇತ್ರದಲ್ಲಿನ ತನ್ನ ಯಜಮಾನಿಕೆಯನ್ನು ರಾಜಕೀಯ ವಲಯಕ್ಕೂ ವಿಸ್ತರಿಸುವ ಹವಣಿಕೆಯಲ್ಲಿ ಅದು ತನ್ನ ಅತ್ಯಂತ ಅಮಾನವೀಯ ಕರಾಳರೂಪವನ್ನು ಇರಾಕ್ ಮೇಲೆ ಆಕ್ರಮಣ ನಡೆಸುವ ಮೂಲಕ ತೋರಿಸಿಕೊಟ್ಟಿತು.ತನ್ನಲಾಭಪಿಪಾಸುತನಕ್ಕಾಗಿ ಲಕ್ಷಾಂತರ ಅಮಾಯಕ ಇರಾಕಿ ಪ್ರಜೆಗಳನ್ನು ಬಲಿ ತೆಗೆದುಕೊಂಡ ಬಂಡವಾಳಶಾಹಿಯ ಈ ಬರ್ಬರ ವಿಜೃಂಭಣೆಯ ಕಾಲಾವಧಿಯಲ್ಲೇ ಮತ್ತು ಅದರ ಒಂದು ಭಾಗವಾಗಿಯೇ ಯುರೋಪಿಯನ್ ಸಮುದಾಯ ಮತ್ತು ಯುರೋವಲಯ ತಮ್ಮ ನೆಲೆಗಳನ್ನುಭದ್ರಗೊಳಿಸಲು, ವಿಸ್ತಾರಗೊಳಿಸಲು ಮತ್ತು ಆ ಮೂಲಕ ಮತ್ತಷ್ಟು ಬಲಿಷ್ಟವಾಗಲು ಪ್ರಯತ್ನಿಸಿದ್ದು.

ಆದರೆ ಈ ವಿಜೃಂಭಣೆಯ ಭರಾಟೆಗೆ ಮಂಕು ಬಡಿಯಲು, ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದರ ನೀತಿಗಳ ನಿಜಹೂರಣ ಬಯಲಾಗಲು ಬಹಳ ಸಮಯವೇನೂ ಬೇಕಾಗಲಿಲ್ಲ. ಅಮೇರಿಕಾದ ದೈತ್ಯ ಬ್ಯಾಂಕಿಂಗ್‌ಸಂಸ್ಥೆ ಲೆಹಮಾನ್ ಬ್ರದರ್ಸ್ ಕುಸಿಯುವುದರೊಂದಿಗೆ ಆರಂಭವಾದ ಬಿಕ್ಕಟ್ಟುಯುರೋಪನ್ನೂ ಆವರಿಸಿಕೊಂಡಿತು. ಅದರ ಮುನ್ಸೂಚನೆಯೆಂಬಂತೆ ಅದಾಗಲೇ ಬ್ರಿಟನ್ನಿನ ನಾರ್ದರ್ನ್‌ರಾಕ್ ಬ್ಯಾಂಕು ದಿವಾಳಿಯಾಗಿತ್ತು.



ಬಿಕ್ಕಟ್ಟಿನ ಪರಿಣಾಮವಾಗಿ ಕಳೆದ ಐದು ವರ್ಷಗಳಿಂದ ಯುರೋಪಿಯನ್ ಸಮುದಾಯ ಸತತವಾದ ಕುಸಿತಕ್ಕೆ ಒಳಗಾಗಿದೆ. ಐಎಂಎಫ್ ತನ್ನ ವರದಿಯಲ್ಲಿ ಯುರೋವಲಯದ ಆರ್ಥಿಕತೆ ಈ ವರ್ಷ ಶೇ 0.2 ರಷ್ಟು ಕುಸಿಯಲಿದೆ ಎಂದು ಜನವರಿ ತಿಂಗಳಲ್ಲಿ ಅಂದಾಜು ಮಾಡಿತ್ತು. ನಂತರ ಏಪ್ರಿಲ್‌ನಲ್ಲಿ ಕುಸಿತದ ಪ್ರಮಾಣ ಶೇ. 0.4 ರಷ್ಟಾಗಲಿದೆ ಎಂದು ಹೇಳಿತ್ತು. ಇದೀಗ ಕುಸಿತ ಶೇ 0.6 ರಷ್ಟಾಗಲಿದೆ ಎಂದು ಹೇಳುತ್ತಿದೆ. ಇಟಲಿ ದೇಶವೊಂದೇ ಶೇ 1.8 ರಷ್ಟು (ಮೊದಲ ಶೇ 1.5 ಎಂದು ಹೇಳಲಾಗಿತ್ತು) ಕುಸಿತ ಅನುಭವಿಸಲಿದೆ ಎಂದಾಗ ಮತ್ತು ಗ್ರೀಸ್ ಇತ್ಯಾದಿ ದೇಶಗಳ ಕುಸಿತದ ಪ್ರಮಾಣ ಬಹಳವೇ ಜಾಸ್ತಿ ಇರುವಾಗ, ಐಎಂಎಫ್‌ನ ಈ ಅಂದಾಜು ಕೂಡಾ ವಾಸ್ತವಕ್ಕೆ ಸ್ವಲ್ಪ ದೂರವೇ ಇದೆ ಎಂದು ಸುಲಭವಾಗಿಯೇ ಊಹಿಸಬಹುದು.

"ಯುರೋಪಿನ ಬಿಕ್ಕಟ್ಟು ಈಗ ಮುಗಿದ ಅಧ್ಯಾಯ" ಎಂದು ಫ್ರಾನ್ಸಿನ ಅ ಧ್ಯಕ್ಷ ಫ್ರಾಂಕೊಯಿಸ್ ಹಾಲೆಂಡೆ ತಮ್ಮ ಜೂನ್ ತಿಂಗಳ ಜಪಾನ್ ಭೇಟಿಯ ಸಂದರ್ಭದಲ್ಲಿ ಕೊಚ್ಚಿಕೊಂಡಿದ್ದರು. ಅದಾದ ಕೆಲವೇ ದಿನಗಳಲ್ಲಿ ಐಎಂಎಫ್‌ನ ಈ ಪರಿಷ್ಕೃತ ಅಂದಾಜು ವರದಿಯಾಗಿರುವುದು, ಪರಿಸ್ಥಿತಿ ಎಷ್ಟೊಂದು ಗಂಭೀರವಾಗಿದೆ ಮತ್ತು ಆಳುವ ಜನ ಎಷ್ಟೊಂದು ಅಮಾನವೀಯ ನಿಷ್ಕಾಳಜಿಯಲ್ಲಿ ಇದ್ದಾರೆ ಎಂಬುದನ್ನು ನಿಚ್ಚಳವಾಗಿ ತೋರಿಸುತ್ತದೆ.

ಯುರೋಪಿಯನ್ ಸಮುದಾಯದ ದೇಶಗಳಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ಇಡೀ ಸಮುದಾಯದಲ್ಲಿ ನಿರುದ್ಯೋಗದ ಪ್ರಮಾಣ ಸುಮಾರು ಶೇ. 13 ರಷ್ಟಿದೆ. 16 ರಿಂದ 25 ವರ್ಷದೊಳಗಿನ ಯುವಜನತೆಯನ್ನಂತೂ ಈ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ಅವರ ನಿರುದ್ಯೋಗದ ಪ್ರಮಾಣ ಯುರೋಪಿಯನ್ ಸಮುದಾಯದಲ್ಲಿ ಶೇ. 23.6 ರಷ್ಟಿದ್ದರೆ, ಯುರೋವಲಯದಲ್ಲಿ ಶೇ. 24.6 ರಷ್ಟಿದೆ. ಗ್ರೀಸ್(ಶೇ.64.2) ಹಾಗೂ ಸ್ಪೇನ್(ಶೇ.55.5) ಗಳಲ್ಲಿ ಅರ್ಧಕ್ಕೂ ಹೆಚ್ಚುಭಾಗ ಯುವಜನತೆ ಉದ್ಯೋಗದಿಂದ ವಂಚಿತವಾಗಿದೆ. ಇಟಲಿ (ಶೇ.38.7), ಪೋರ್ಚುಗಲ್(ಶೇ.38.6), ಸ್ಲೊವೇಕಿಯಾ(ಶೇ.35.9), ಐರ್ಲ್ಯಾಂಡ್(ಶೇ.30.8), ಸೈಪ್ರಸ್(ಶೇ.28.4), ಹಾಗೂ ಫ್ರಾನ್ಸ್(ಶೇ.26.9)ಗಳಲ್ಲಿ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ.

ಇಷ್ಟೊಂದು ಭಾರಿ ಪ್ರಮಾಣದ ನಿರುದ್ಯೋಗ ಹೇಳಲಾಗದಷ್ಟು ಸಾಮಾಜಿಕ ಅನಿಷ್ಟಗಳಿಗೆ ಕಾರಣವಾಗುತ್ತಿದೆ. ಇತ್ತೀಚೆಗೊಂದು ವ್ಯಂಗಚಿತ್ರ ಪ್ರಕಟವಾಯಿತು. ನಿರುದ್ಯೋಗಿ ಯುವಕನೊಬ್ಬ ತನ್ನ ಸ್ನೇಹಿತೆಗೆ ಹೇಳುತ್ತಾನೆ – "ನಾನು ನನ್ನ ಹೆತ್ತವರ ಮನೆಗೆ ಹೋಗಿ ಇರಬೇಕೆಂದು ಬಯಸಿದ್ದೆ. ಆದರೆ ಅವರು ಈಗಾಗಲೇ ಅಜ್ಜನ ಮನೆಗೆ ಹೋಗಿ ನೆಲೆಸಿದ್ದಾರೆ!" ಯುರೋಪಿನ ಸಂಸ್ಕೃತಿಯಲ್ಲಿ ಬೆಳೆದ ಮಕ್ಕಳು ಹೆತ್ತವರ ಬಳಿ ಇರುವುದು ಇಲ್ಲವೇ ಇಲ್ಲ ಎಂಬಷ್ಟು ಕಡಿಮೆ. ಯಾವುದೋ ಒಂದು ಉದ್ಯೋಗದಲ್ಲಿದ್ದು ಸ್ವತಂತ್ರವಾಗಿ ಬಾಳುವುದೇ ಪರಿಪಾಟ. ಆದರೆ ತೀವ್ರ ನಿರುದ್ಯೋಗದ ಸಮಸ್ಯೆಯಿಂದಾಗಿ ಮಕ್ಕಳು ಪುನಃ ಹೆತ್ತವರ ಬಳಿಗೆ ಹೋಗಲಾರಂಭಿಸಿದ್ದಾರೆ. ಬಿಕ್ಕಟ್ಟಿನ ಪರಿಣಾಮಗಳಿಂದ ಹೆತ್ತವರೂ ಹೊರತಾಗಿಲ್ಲ. ತಮ್ಮ ಉಳಿತಾಯದ ಹಣವನ್ನು ಬ್ಯಾಂಕ್‌ಗಳಲ್ಲಿ ಅಥವಾ ಷೇರುಮಾರುಕಟ್ಟೆಯಲ್ಲಿ ತೊಡಗಿಸಿ ಅದರ ಮೂಲಕ ಬರುವ ಆದಾಯ ಮತ್ತು ಪಿಂಚಣಿ ಹಣದಲ್ಲಿ ಜೀವನ ಸಾಗಿಸುತ್ತಿದ್ದವರಿಗೆ ಇಂದು ಬ್ಯಾಂಕ್‌ಗಳ ಹಾಗೂ ಷೇರು ಮಾರುಕಟ್ಟೆಯ ಕುಸಿತದಿಂದಾಗಿ ಆದಾಯದ ಮೂಲಗಳು ಕ್ಷೀಣಗೊಂಡಿದ್ದು ಬದುಕು ಸಾಗಿಸುವುದೇ ದುಸ್ತರವಾಗುತ್ತಿದೆ. ಸಾಲದ್ದಕ್ಕೆ ಸರ್ಕಾರಗಳು ಪಿಂಚಣಿಯಲ್ಲಿ ಕಡಿತ ಮಾಡಿರುವುದು ಬೇರೆ. ಇದರಿಂದಾಗಿ ತಮ್ಮ ಬಳಿ ಬಂದಿರುವ ಮಕ್ಕಳನ್ನು ನೋಡಿಕೊಳ್ಳುವ ಆರ್ಥಿಕ ಶಕ್ತಿ ಅವರಿಗಿಲ್ಲ. ಜನತೆ ಎದುರಿಸುತ್ತಿರುವ ಸಾಮಾಜಿಕ ತಲ್ಲಣಗಳಿಗೆ ಇದೊಂದು ಉದಾಹರಣೆ ಮಾತ್ರ.

ಅಷ್ಟಕ್ಕೂ ನಿರುದ್ಯೋಗದ ಪ್ರಮಾಣದ ಬಗೆಗಿನ ಈ ಅಂಕಿಅಂಶಗಳು ಸಮಸ್ಯೆಯ ನೈಜಚಿತ್ರಣ ನೀಡುವುದಿಲ್ಲ. ಉದಾಹರಣೆಗೆ ವಲಸೆಯ ಅಂಶವನ್ನು ಅವು ಮರೆಮಾಚುತ್ತವೆ. ಪೂರ್ವ ಯುರೋಪಿನ ರಾಷ್ಟ್ರಗಳಿಂದ, ಅರಾಜಕತೆಯ ಗೂಡಾಗಿರುವ ಕೊಲ್ಲಿ ರಾಷ್ಟ್ರಗಳು ಮತ್ತು ಮಧ್ಯಏಷ್ಯಾದ ಪ್ರದೇಶಗಳಿಂದ, ದಿವಾಳಿಯೆದ್ದಿರುವ ಆಫ್ರಿಕಾದ ಕಡುಬಡವ ದೇಶಗಳಿಂದ ಲಕ್ಷಾಂತರ ಜನ, ಅದರಲ್ಲೂ ಪ್ರಮುಖವಾಗಿ ಯುವಜನತೆ, ಯುರೋಪಿನ ಬೆಲ್ಜಿಯಂ, ಫ್ರಾನ್ಸ್, ಜರ್ಮನಿ, ಬ್ರಿಟನ್, ಸ್ಪೇನ್, ಇಟಲಿ ಮುಂತಾದ ದೇಶಗಳಿಗೆ ಹಿಂಡು ಹಿಂಡಾಗಿ ವಲಸೆ ಬರುತ್ತಿದ್ದ ಕಾಲವೊಂದಿತು. ಆರ್ಥಿಕತೆಯು ವಿಸ್ತಾರಗೊಳ್ಳುತ್ತಿದ್ದ ಮ[illegible] ಅಭಿವೃದ್ಧಿಯ ದರ ಏರುಗತಿಯಲ್ಲಿದ್ದ ಆ ಸಂದರ್ಭದಲ್ಲಿ ಹೊಟ್ಟೆಪಾಡಿಗಾಗಿ ಬರುವ ಇಂತಹ ವಲಸೆಕೋರ ಶ್ರಮಿಕರ ಅಗತ್ಯವೂ ಈ ದೇಶಗಳಿಗಿತ್ತು. ಬಹಳ ಕಡಿಮೆ ಕೂಲಿಯಲ್ಲಿ ಮತ್ತು ಯಾವುದೇ ಸೌಲಭ್ಯಗಳಿಲ್ಲದೆ ಇಂತಹ ವಲಸೆಕೋರರು ದುಡಿಯಲು ತಯಾರಾಗಿದ್ದರು. ಆದರೆ ಆರ್ಥಿಕ ಬಿಕ್ಕಟ್ಟು ಈ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಿದೆ. ವಲಸೆ ಈಗ ಯುರೋಪಿಯನ್ ಸಮುದಾಯದಿಂದಲೇ ಪ್ರಾರಂಭವಾಗಿದೆ. ಯುವಕರು, ಅದರಲ್ಲೂ ವಿದ್ಯಾವಂತ ಜನವಿಭಾಗ ಇಂದು ಉದ್ಯೋಗವನ್ನು ಅರಸಿಕೊಂಡು ದೂರದ ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್ ಮತ್ತಿತರ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಕೆಲವರು ನೆರೆಯ ಜರ್ಮನಿ, ಫ್ರಾನ್ಸ್‌ಗಳಿಗೂ ಹೋಗುತ್ತಿದ್ದರು. ಆದರೆ ಇತ್ತೀಚೆಗೆ ಫ್ರಾನ್ಸ್ ಕೂಡ ನಿರುದ್ಯೋಗದ ವಿಷಚಕ್ರದ ಸಿಲುಕಿ ಕೊಂಡಿರುವುದರಿಂದ ಇಂತಹ ಅವಕಾಶಗಳು ದುರ್ಲಭವಾಗಿವೆ. ಅಲ್ಲದೆ ಜರ್ಮನಿಗೆ ಹೋದವರೇಲ್ಲ ಒಂದು ವರ್ಷದ ಒಳಗಡೆಯೇ ಹಿಂತಿರುಗಿಬರುತ್ತಿದ್ದಾರೆ. 2012ರ ಮೊದಲ 4 ತಿಂಗಳಲ್ಲೇ ಐರ್ಲ್ಯಾಂಡಿನ 87,000 ವಿದ್ಯಾವಂತ ನಿರುದ್ಯೋಗಿಗಳು ವಲಸೆ ಹೋಗಿದ್ದಾರೆ. 2012ರಲ್ಲೇ ಸಹಸ್ರಾರು ಸಂಖ್ಯೆಯಲ್ಲಿ ಪೋರ್ಚುಗಲ್ ನಿರುದ್ಯೋಗಿಗಳು ದೂರದ ಅಂಗೋಲಾ, ಮೊಝಾಂಬಿಕ್ ಮುಂತಾದ ಆಫ್ರಿಕಾದ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. 45000 ಇಟಾಲಿಯನ್ನರು, 37,000 ಸ್ಪೇನಿಯಾರ್ಡರು, 35,000 ಗ್ರೀಕರು ಉದ್ಯೋಗವನ್ನರಸಿ ದೇಶ ಬಿಟ್ಟಿದ್ದಾರೆ ಎಂದು ಬಿಬಿಸಿ ವರದಿಗಳು ಹೇಳುತ್ತವೆ. ಈ ವರದಿಗಳು ಕೂಡಾ ವಲಸೆಯ ಸಂಪೂರ್ಣ ಚಿತ್ರಣ ನೀಡುವುದಿಲ್ಲ. ವಾಸ್ತವದಲ್ಲಿ ಈ ಸಂಖ್ಯೆ ಇನ್ನೂ ಜಾಸ್ತಿ ಇದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಭಯೋತ್ಪಾದನೆಯನ್ನು ಅಂತ್ಯಗೊಳಿಸಲು ಸಾಧ್ಯವೆ ?

ಹಲವು ವಿಧ್ವಂಸಕ ಕೃತ್ಯಗಳಲ್ಲಿ ಭಾಗವಹಿಸಿ ನೂರಾರು ಸಾವು ನೋವುಗಳಿಗೆ ಕಾರಣನಾಗಿದ್ದ ಎನ್ನಲಾದ ಯಾಸಿನ್ ಭಟ್ಕಳ ಮತ್ತು ಆತನ ಒಬ್ಬ ಸಹಚರ ಈಗ ಎನ್‌ಐಎ ಪೊಲೀಸರ ವಶದಲ್ಲಿದ್ದು ಆತನನ್ನು ತೀವ್ರವಾದ ವಿಚಾರಣೆಗೆ ಒಳಪಡಿಸಲಾಗಿದೆ ಎನ್ನಲಾಗುತ್ತಿದೆ. ಈತನ ಹಾಗೇ ಭಯೋತ್ಪಾದನೆಯ ಆರೋಪದ ಮೇಲೆ ಬಂಧಿಸಲ್ಪಟ್ಟವರು ದೇಶದ ವಿವಿಧ ಜೈಲುಗಳಲ್ಲಿದ್ದು ವಿಚಾರಣೆಯನ್ನು ಎದುರಿಸುತ್ತಿದ್ದಾರೆ. ಅವರಲ್ಲಿ ಹಿಂದೂಗಳೂ ಇದ್ದಾರೆ. ಮುಸಲ್ಮಾನರೂ ಇದ್ದಾರೆ. ಇತರೆ ಧರ್ಮಿಯರೂ ಇದ್ದಾರೆ.

ಭಯೋತ್ಪಾದಕ ಎಂಬ ಹಣೆಪಟ್ಟಿ ಕಟ್ಟಲ್ಪಟ್ಟವರೆಲ್ಲರೂ ನಿಜವಾಗಿ ಭಯೋತ್ಪಾದಕರಾಗಿರಲಿಕ್ಕಿಲ್ಲ. ಬಂಧಿತರಾಗಿ ಜೈಲಿನಲ್ಲಿ ಇರುವವರಲ್ಲಿ ಅನೇಕ ಮಂದಿ ನಿರಪರಾಧಿಗಳೇ ಇರಬಹುದು. ಪೊಲೀಸರು ಶಂಕಿತ ವ್ಯಕ್ತಿಗಳನ್ನೂ ಬಂಧಿಸುತ್ತಾರೆ. ಬಂಧಿತರ ಬಾಯ್ಬಿಡಿಸುವ ಕ್ರಮಗಳಿಂದ ದೊರೆಯುವ ಮಾಹಿತಿಗಳ ಆಧಾರದಲ್ಲಿಯೂ ಪೊಲೀಸರು ಜನರನ್ನು ಬಂಧಿಸುತ್ತಾರೆ. ಕೆಲವೊಮ್ಮೆ ಪೊಲೀಸರು ತಮ್ಮ ವಿಫಲತೆಯನ್ನು ಮುಚ್ಚಿಹಾಕಲು ಅಮಾಯಕರನ್ನೂ ಬಂಧಿಸಿ ದಂಡಿಸುತ್ತಾರೆ. ಅನೇಕ ಸಲ ನಕಲಿ ಎನ್‌ಕೌಂಟರ್‌ಗಳಲ್ಲಿ ಅವರನ್ನು ಸಾಯಿಸಿ ಭಯೋತ್ಪಾದಕರನ್ನು ನಿರ್ನಾಮ ಮಾಡಿದ್ದೇವೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸುತ್ತಾರೆ.

ಸರಿಯಾದ ತನಿಖೆ ನಡೆದರೆ ಅಪರಾಧಿಗಳನ್ನು ಪತ್ತೆಹಚ್ಚಲು ಸಾಧ್ಯವಿದೆ. ಅಪರಾಧಿಗಳೆಂದು ಸಾಭೀತಾದವರಿಗೆ ಶಿಕ್ಷೆಯಾಗುತ್ತದೆ. ಶಿಕ್ಷೆ ಆಗಲೇಬೇಕು. ನಿಜವಾದ ಭಯೋತ್ಪಾದಕರಿಗೆ ಯಾವುದೇ ರಿಯಾಯ್ತಿ ತೋರಬಾರದು. ಆದರೆ ಹಾಗೆ ಶಿಕ್ಷೆಗೆ ಒಳಗಾಗುವವರಲ್ಲಿ, ತಾವು ನಿರಪರಾಧಿಗಳೆಂದು ಸಾಬೀತುಪಡಿಸಲಾಗದೆ, ಅಪರಾಧಿಗಳೆಂದು ಪರಿಗಣಿಸಲ್ಪಟ್ಟು ಶಿಕ್ಷೆ ಅನುಭವಿಸುವರೂ ಇರುತ್ತಾರೆ. ಇಂತಹ ಅಮಾನುಷ ಪ್ರಸಂಗಗಳನ್ನು ತಡೆಯಲು ನಮ್ಮ ವ್ಯವಸ್ಥೆಯಲ್ಲಿ ಮಾರ್ಗಗಳಿಲ್ಲ ಮಾತ್ರವಲ್ಲ ಕನಿಷ್ಠ ಕಾಳಜಿಯೂ ಇಲ್ಲ. ಎಂತಹ ಅಮಾನವೀಯ ಸಮಾಜ ನಮ್ಮದು!

ಭಯೋತ್ಪಾದನೆ ಎಂಬ ಈ ಪಿಡುಗು ಇಂದು ಸಮಾಜದ ಎಲ್ಲ ವಿಭಾಗಗಳನ್ನು ಘಾಸಿಗೊಳಿಸಿದೆ. ಶಾಲೆಗೆ ಹೋದ ಮಕ್ಕಳು ಸುರಕ್ಷಿತವಾಗಿ ಮನೆಗೆ ಮರಳುವ ಗ್ಯಾರಂಟಿಯಿಲ್ಲ. ರೈಲು ಹತ್ತಿದವರು ಸುರಕ್ಷಿತವಾಗಿ ಇಳಿಯುತ್ತಾರೆ ಎಂಬ ಗ್ಯಾರಂಟಿ ಇಲ್ಲ. ಪೂಜೆ ಸಲ್ಲಿಸಲು ದೇವಸ್ಥಾನಕ್ಕೆ ತೆರಳಿದವರು, ನಮಾಜ್ ಮಾಡಲು ಮಸೀದಿಗೆ ಹೋದವರು, ಪ್ರಾರ್ಥನೆಗಾಗಿ ಚರ್ಚ್ ಮೆಟ್ಟಿಲು ಹತ್ತಿದವರು ವಾಪಸ್ ಬರುತ್ತಾರೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ.


ಹಾಗಾದರೆ ಭಯೋತ್ಪಾದನೆ ಎಂಬ ಈ ಪಿಡುಗಿಗೆ ಅಂತ್ಯವಿಲ್ಲವೆ? ಎಲ್ಲರೂ ಈ ಪ್ರಶ್ನೆಯನ್ನು ಹೃದಯಂತರಾಳದಿಂದ ಕೇಳಬೇಕಾಗಿದೆ. ಮತ್ತೆ ಮತ್ತೆ ಕೇಳಬೇಕಾಗಿದೆ. ಉತ್ತರ ಸಿಗುವವರೆಗೂ ಕೇಳುತ್ತಾ ಇರಬೇಕಾಗಿದೆ.

ಲಾಭಕೋರತನವೇ ಭಯೋತ್ಪಾದನೆಯ ಮೂಲವಾಗಿದೆ. ಬಲಾಢ್ಯನು ಬಲಹೀನನನ್ನು ಬೆದರಿಸಿ ಕಿತ್ತುಕೊಳ್ಳುತ್ತಾನೆ. ಇಂದು ಭಯೋತ್ಪಾದನೆ ವ್ಯಕ್ತಿಗತವಾಗಿಲ್ಲ. ಅದಕ್ಕೊಂದು ಸಾಂಸ್ಥಿಕ ರೂಪ ಬಂದಿದೆ. ಬಲಾಢ್ಯ ದೇಶ ಬಲಹೀನ ದೇಶವನ್ನು ಬೆದರಿಸಿ, ಲೂಟಿ ಮಾಡುತ್ತದೆ ಬಲಾಢ್ಯ ಅಮೇರಿಕಾ ತೈಲ ಸಮೃದ್ಧ ಅರಬ್ ರಾಷ್ಟ್ರಗಳನ್ನು ಒಂದರ ನಂತರ ಒಂದರಂತೆ ಯುದ್ಧದ ಬೆದರಿಕೆಯೊಡ್ಡಿ ಮಣಿಸುತ್ತಿದ್ದು ತನ್ನ ತೈಲ ಲೂಟಿಗೆ ದಾರಿಯನ್ನು ಸುಗುಮಗೊಳಿಸುತ್ತಿದೆ. ತನ್ನ ತಾಳಕ್ಕೆ ತಕ್ಕಂತೆ ಕುಣಿಯಲು ಒಪ್ಪದ ಅರಬ್ ರಾಷ್ಟ್ರಗಳಲ್ಲಿ ಅಮೇರಿಕ ಪ್ರಜಾಪ್ರಭುತ್ವ ಸ್ಥಾಪನೆಯ ಸೋಗುಹಾಕಿಕೊಂಡು ಆ ದೇಶಗಳಲ್ಲಿ ಮೂಲಭೂತವಾದಿ, ಜನಾಂಗೀಯವಾದಿ ಬಂಡುಕೋರರಿಗೆ ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ. ಅಮೇರಿಕದ ಆಕ್ರಮಣಕಾರಿ ಮಧ್ಯಪ್ರವೇಶದಿಂದಾಗಿ ಅಫಘಾನಿಸ್ತಾನ, ಇರಾಕ್, ಲಿಬಿಯಾ ಮತ್ತು ಮುಖ್ಯವಾಗಿ ಪಾಲೆಸ್ತೀನ್ ದೇಶಗಳಲ್ಲಿ ಲಕ್ಷಾಂತರ ಅಮಾಯಕ ಮುಸಲ್ಮಾನರ ಹತ್ಯೆಯಾಗಿದೆ. ಈಗ ಸಿರಿಯಾದ ಮೇಲೆ ದಾಳಿ ಮಾಡುವ ಸಿದ್ಧತೆ ನಡೆಸಿದೆ. ಭಾರತವೂ ಸೇರಿದಂತೆ ವಿಶ್ವದೆಲ್ಲೆಡೆ ಇಂದು ಮುಸ್ಲಿಂ ಯುವಕರು ಭಯೋತ್ಪಾದಕ ಸಂಘಟನೆಗಳಿಗೆ ಆಕರ್ಷಿತರಾಗುತ್ತಿದ್ದರೆ, ಅದಕ್ಕೆ ಇರುವುದೊಂದೇ ಕಾರಣ, ಅರಬ್ ರಾಷ್ಟ್ರಗಳಲ್ಲಿ ಇಂದು ಅಮೇರಿಕ ಹರಿಸುತ್ತಿರುವ ಅಮಾಯಕ ಮುಸಲ್ಮಾನರ ರಕ್ತಕ್ಕೆ ಸೇಡು! ಅಮೇರಿಕದ ಆಕ್ರಮಣಕಾರಿ ನೀತಿ ಬದಲಾಗದೆ ಭಯೋತ್ಪಾದನೆ ಕೊನೆಗೊಳ್ಳಲು ಸಾಧ್ಯವೆ?

ಭಾರತದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆಗೆ ಹಿಂದು ಕೋಮುವಾದ ಪ್ರಮುಖ ಕಾರಣವಾಗಿದೆ. ಮುಸಲ್ಮಾನರು ಪರಕೀಯರು, ಅವರು ಈ ದೇಶದ ಸಮಾನ ಹಕ್ಕುದಾರರಲ್ಲ ಎಂಬ ಅತಾರ್ಕಿಕ ವಾದವನ್ನು ಹುಟ್ಟುಹಾಕಿ ಅವರ ಮೇಲೆ ದ್ವೇಷ ಸಾಧಿಸುವ ಸಂಘಟನೆಗಳು ಇರುವ ತನಕ ದೇಶದಲ್ಲಿ ಭಯೋತ್ಪಾದನೆಯನ್ನು ಅಂತ್ಯಗೊಳಿಸಲು ಸಾಧ್ಯವಿಲ್ಲ. ದೇಶದ ವಿಭಜನೆಯೊಂದಿಗೆ ಆದ ರಕ್ತಪಾತ, ಅವರ ಶ್ರದ್ಧಾ ಕೇಂದ್ರವಾಗಿದ್ದ ಬಾಬರಿ ಮಸೀದಿ ನಾಶ, ಗುಜರಾತ್‌ನಲ್ಲಿ ಮೋದಿ ಪ್ರಾಯೋಜಿತ ಜನಾಂಗೀಯ ಹತ್ಯಾಕಾಂಡ ಮುಂತಾದ ಆಘಾತಗಳಿಗೆ ಒಳಗಾಗಿ, ಕೆಲವು ಯುವಕರು ಸೇಡಿಗಾಗಿ ಪರಿತಪಿಸುತ್ತಿರುವುದನ್ನು ದೇಶ ಅರ್ಥಮಾಡಿಕೊಳ್ಳಬೇಕು. ಭಯೋತ್ಪಾದಕರ ದಾರಿಯನ್ನು ತುಳಿಯುವುದು ಅವರಿಗೂ ಕ್ಷೇಮಕರವಲ್ಲ, ದೇಶಕ್ಕೂ. ದೇಶದ ಬಹುಸಂಖ್ಯಾತ ಹಿಂದುಗಳ ಜವಾಬ್ದಾರಿ ಹಿರಿದಾದುದು. ದೇಶದಲ್ಲಿ ಕೋಮು ಸಾಮರಸ್ಯದತ್ತ ಮೊದಲ ದೊಡ್ಡ ಹೆಜ್ಜೆಯನ್ನು ಇಡಲು ದೇಶದ ಹಿಂದುಗಳೇ ಮುಂದಾಗಬೇಕು. ಹಿಂದೂ ರಾಷ್ಟ್ರ, ಹಿಂದೂ ಓಟ್ ಬ್ಯಾಂಕ್ ಎಂಬ ಸಂಕುಚಿತ ಧ್ಯೇಯೋದ್ದೇಶಗಳನ್ನು ಕೈಬಿಡದೆ ದೇಶದಲ್ಲಿ ಶಾಂತಿ, ಸಾಮರಸ್ಯ ನೆಲೆಸಲಾರದು.

ಕಾಂಗ್ರೆಸ್ : ಅಧಿಕಾರದ ಹಂಚಿಕೆಗೆ ಕದನ ಕುತೂಹಲ?

ವಿರೋಧ ಪಕ್ಷಗಳೆರಡರ ನಡುವೆ ಹೊಂದಾಣಿಕೆ ಇದ್ದಾಗಲೂ ಜೆಡಿ ಎಸ್‌ನಿಂದ ಎರಡು ಲೋಕಸಭಾ ಸ್ಥಾನಗಳನ್ನು, ಬಿಜೆಪಿಯ ಎರಡು ವಿಧಾನ ಪರಿಷತ್ ಸ್ಥಾನಗಳನ್ನು ಗೆದ್ದ ಕಾಂಗ್ರೆಸ್ ಪಕ್ಷ ತನಗೆ ಸರಿ ಸಮಾನರಾರಿಹರು ಎಂದು ಬೀಗುವುದನ್ನು ನಾವು ಕಂಡಾಗಿದೆ. ಜನತೆಯ ಬದುಕಿಗೆ ಭದ್ರತೆ ಸಿಗದಿದ್ದರೂ, ಜನ ಮಾತ್ರ ಕಾಂಗ್ರೆಸ್‌ಗೆ ಅಧಿಕಾರದ ಭದ್ರತೆಯನ್ನು ತಂದು ಕೊಟ್ಟಿದ್ದಂತೂ ನಿಜ. ಈ ಹುರುಪಿನಲ್ಲೇ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ರಾಜ್ಯದಿಂದ ಹದಿನೆಂಟು ಸಂಸದರನ್ನು ಗೆಲ್ಲಿಸಿಕೊಳ್ಳುವ ವಿಶ್ವಾಸ ವ್ಯಕ್ತಪಡಿಸಿದ್ದರೆ ಕೇಂದ್ರದ ಹೈಕಮಾಂಡ್ 25 ಸ್ಥಾನಗಳನ್ನು ಪಡೆಯಲು ತಂತ್ರ ರೂಪಿಸತೊಡಗಿದೆ ಎನ್ನಲಾಗಿದೆ. ಅದಕ್ಕಾಗಿ ರಾಹುಲ ಗಾಂಧಿ ಹೊಸ ಸೂತ್ರಗಳನ್ನು ಹೊಸೆಯುತ್ತಿದ್ದರೆ, ಇಲ್ಲಿ ವಲಸೆ ಕಾಂಗ್ರೆಸ್ಸಿಗರಿಗೇ ಮಂತ್ರಿ ಸ್ಥಾನಗಳನ್ನು, ಲಾಭದಾಯಕ ಖಾತೆಗಳನ್ನು ಕೊಟ್ಟಾಗಿದೆ, ಮೂಲ ಕಾಂಗ್ರೆಸ್ಸಿಗರಾಗಿರುವ ತಮಗೇಕಿಲ್ಲ ಎಂದು ಕೆಲವರು ಯುದ್ಧಕ್ಕೆ ಕತ್ತಿ ಮಸೆಯುತ್ತಿರುವ ಸುದ್ದಿಯಿದೆ!



ಗೆದ್ದಾಯ್ತಲ್ಲಾ, ಹುದ್ದೆ ಕೊಡಿ!

ಆದರೆ ಈ ಗೆಲುವುಗಳಲ್ಲಿ ತಮ್ಮ ಪಾಲಿದೆಯೆಂದೂ, ಪಡೆದಿರುವ ಅಧಿಕಾರದ ಪಾಲು ತಮ್ಮದಾಗಬೇಕೆಂದು ಅದಕ್ಕಾಗಿ ತುದಿಗಾಲ ಮೇಲೆ ಕಾದಿರುವ ಹಲವು ಹಿರಿಯ ನಾಯಕರು ಒಂದು ಸುತ್ತಿನ ದೆಹಲಿ 'ಇಂಗಿತ ಯಾತ್ರೆ'ಯನ್ನು ಮುಗಿಸಿ ಮತ್ತೊಂದು 'ದಂಡ ಯಾತ್ರೆ'ಗೆ ಸನ್ನದ್ಧರಾಗುತ್ತಿದ್ದಾರೆ. ಒಟ್ಟು ಮುಖ್ಯಮಂತ್ರಿ ಸೇರಿ 32 ಸದಸ್ಯರ ಮಂತ್ರಿಮಂಡಲದಲ್ಲಿ 28 ಭರ್ತಿ ಮಾಡಲಾಗಿದ್ದು ಇನ್ನು ನಾಲ್ಕು ಸಚಿವರ ಸ್ಥಾನಗಳು ಖಾಲಿಯಿವೆ. ಮಂಡಲಿಗಳಿಗೆ ನೇಮಕಾತಿ ಬಾಕಿಯಿದೆ. ಸಚಿವ ಸ್ಥಾನಕ್ಕೆ ತಮ್ಮನ್ನೇ ನೇಮಕ ಮಾಡಬೇಕು, ಲಾಭದಾಯಕ ಹುದ್ದೆ ನೀಡಬೇಕೆಂಬುದು ಕಾದಿರುವವರ ಆಗ್ರಹ. ಅದರಲ್ಲೂ ಕಳಂಕಿತರ ಹಣೆಪಟ್ಟಿ ಹೊತ್ತು ಸಂಪುಟದಿಂದ ಹೊರಗುಳಿಸಲಾದ ಡಿ.ಕೆ.ಶಿವಕುಮಾರ್, ಆರ್. ರೋಶನ್‌ಬೇಗ್, ರಮೇಶ್‌ಕುಮಾರ್, ಸೋತ ಪರಮೇಶ್ವರ್ ಮುಂತಾದವರ ಒತ್ತಡವೇನೂ ಕಡಿಮೆಯಿಲ್ಲ. ವಿಶೇಷವಾಗಿ ಮೊನ್ನೆಯ ಎಂ.ಪಿ. ಚುನಾವಣೆಯಲ್ಲಿ ತನ್ನ ತಮ್ಮನನ್ನೇ ಅಭ್ಯರ್ಥಿಯಾಗಿ ನಿಲ್ಲಿಸಿಕೊಂಡು, ಹೆಚ್ಚಿನ ಅಂತರದಿಂದ ಗೆಲ್ಲಿಸಿಕೊಳ್ಳುವ ಮೂಲಕ (ದೇವೇಗೌಡರ ಎದುರಿನಲ್ಲಿ) 'ತಮ್ಮ ಸಾಮರ್ಥ್ಯವೇನೆಂದು ತೋರಿಸಿಯಾಗಿದೆ ಇನ್ನೇಕೆ ತಡ'ವೆಂದು ಡಿ.ಕೆ.ಶಿ ಬಹಿರಂಗ ಗೊಣಗಾಟದಿಂದ ಒತ್ತಡವನ್ನು ಸೃಷ್ಟಿಸಿದ್ದಾರೆ. ಹಾಗೇ ಪರಮೇಶ್ವರ್‌ರವರೂ ಸಹ.

ಈ ಹಿನ್ನೆಲೆಯಲ್ಲಿ ಸುಮ್ಮನಿದ್ದರೆ ಸುಖವಿಲ್ಲವೆಂದು ಬಗೆದಿರುವ ಇಂತಹ ನಾಯಕರ ಗುಂಪು ಮುಂದಿನ ವಾರದಲ್ಲಿ ಕಾರ್ಯಾಚರಣೆಗೆ ಇಳಿಯುವ ಸೂಚನೆ ನೀಡಿದೆ. ಎಲ್ಲರೂ, 'ಎಲ್ಲವೂ ಹೈಕಮಾಂಡ್‌ನ ತೀರ್ಮಾನಕ್ಕೆ ಬಿಟ್ಟಿದ್ದು' ಎಂದು ಹೇಳಿದರೂ ಅದು ಸಿದ್ಧರಾಮಯ್ಯನವರನ್ನೇ ಹೆಚ್ಚು ಗುರಿಯಾಗಿಸುವುದರಲ್ಲಿ ಅನುಮಾನವಿಲ್ಲ. ಇದು ಕಾಂಗ್ರೆಸ್‌ನಲ್ಲಿಯ ಒಡಕು, ಭಿನ್ನಮತೀಯ ಚಟುವಟಿಕೆಗಳನ್ನು ಇನ್ನಷ್ಟು ಬಲಗೊಳಿಸಲಿದೆ.

ಕೇಂದ್ರದ ಪ್ರಣಾಳಿಕೆ ಸಮಿತಿಯಿಂದ ಹಿರಿಯ ಮುಖಂಡರಾದ ಜನಾರ್ಧನ ಪೂಜಾರಿ, ಎಚ್. ಕೆ. ಪಾಟೀಲರನ್ನು ಕೊನೆಘಳಿಗೆಯಲ್ಲಿ ಕೈಬಿಟ್ಟಿರುವುದು ತೀವ್ರ ಅತೃಪ್ತಿಗೆ ಕಾರಣವಾಗಿದೆ.ಅದಕ್ಕೆ ಗುಂಪುಗಾರಿಕೆಯ ಕೈಮೇಲಾಟವೇ ಕಾರಣ ಎಂಬುದು ಎದ್ದು ಕಾಣುತ್ತಿದೆ ಎಂದು ಕಾಂಗ್ರೆಸ್ಸಿನವರೇ ಆರೋಪಿಸುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಇದೆಲ್ಲವೂ ಇದ್ದದ್ದೇ ಎನ್ನುವವರೂ ಇದ್ದಾರೆ.

ಕರಗುತ್ತಿರುವ ನಿರೀಕ್ಷೆಗಳು

ಈಗಿನ ಮುಖ್ಯಮಂತ್ರಿಗಳು ತಮ್ಮ ನೂರು ದಿನಗಳು, ಕೊಟ್ಟ ನೂರಾರು ಭರವಸೆಗಳ ಬಗ್ಗೆ, ಸಾಧನೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಇದು ಹಿಂದಿನ ಬಿಜೆಪಿ ಸರಕಾರ ತಮ್ಮ ಹುಸಿ ಸಾಧನೆಗಳ ಪ್ರಚಾರದ ಡೋಲು ಬಾರಿಸಿಕೊಳ್ಳುತ್ತಿದ್ದಂತಹ ಪ್ರಹಸನದ ನಕಲು ಅಷ್ಟೇ. ಈಗಾಗಲೇ ರಾಜ್ಯದಲ್ಲಿ ಅತೀವೃಷ್ಟಿ, ಅನಾವೃಷ್ಟಿ, ಬರಗಾಲ ಕಾಡತೊಡಗಿವೆ. ಬಿಜೆಪಿ ದುರಾಡಳಿತದಿಂದ ಹಳಿ ತಪ್ಪಿರುವ ಆಡಳಿತವಿನ್ನೂ ಸರಿದಾರಿಗೆ ಬಂದೇ ಇಲ್ಲ. ಅದು ಅಷ್ಟು ಸುಲಭದ ಕೆಲಸವೂ ಅಲ್ಲವೆಂಬುದು ಮುಖ್ಯಮಂತ್ರಿಯಾದಿಯಾಗಿ ಯಾರೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಕೇವಲ ವಿಧಾನಸೌಧದಲ್ಲಿ ಹಾಕುವ ಗುಟುರುಗಳು ಮಾಧ್ಯಮಗಳಲ್ಲಿ ನಿರ್ಲಕ್ಷಿಸಬಹುದಾದ ಸುದ್ದಿಯಾಗಬಹುದೇ ಹೊರತು ಅದಕ್ಕೆ ಕವಡೆ ಕಿಮತ್ತಿನ ಫಲಿತಾಂಶ ಸಿಕ್ಕಿರುವುದನ್ನು ಜನರಂತೂ ಕಂಡಿಲ್ಲ.

ಈ ನಡುವೆಯೇ ಸಿದ್ಧರಾಮಯ್ಯನವರು ಚೀನಾಕ್ಕೆ ಹೊರಡಲಿದ್ದಾರೆ. ಪ್ರವಾಸದಿಂದ ವಾಪಾಸಾಗುವುದರೊಳಗೆ ಕುಸ್ತಿ ಕಣ ರೆಡಿ. ಅಧಿಕಾರದಾಹದ ಬಡಿದಾಟ, ಭ್ರಷ್ಟಾಚಾರ-ಹಗರಣ, ಅರಾಜಕತೆ ಕಂಡಿದ್ದ ಜನತೆಗೆ ಕಾಂಗ್ರೆಸ್ ಏನನ್ನು ಕೊಡಲಿದೆ ಎಂಬುದು ನೂರಾರು ದಿನಗಳಾದರೂ ಉಳಿದೇ ಇರುವ ಪ್ರಶ್ನೆಯಾಗಿದೆ.

* * *

ತಿದ್ದುಪಡಿಗಳ ವಾಪಾಸೊಂದೇ ಸಾಲದು

ಹಿಂದಿನ ಬಿಜೆಪಿ ಸರಕಾರ ಕ್ರೂರ ತಿದ್ದಪಡಿಗಳ ಮೂಲಕ ತರಲು ಹೊರಟಿದ್ದ ಜಾನುವಾರು ಹತ್ಯೆ ನಿಷೇಧ ಕಾಯ್ದೆ2012ನ್ನು ಹಿಂತೆಗೆದುಕೊಳ್ಳಲು ರಾಜ್ಯದ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್

ಪುಟ 4 ಕ್ಕೆ

ಭ್ರಷ್ಟಾಚಾರದ ಕೂಪವಾಗಿರುವ ಬೊಮ್ಮಸಂದ್ರ ಇಎಸ್‌ಐ ಆಸ್ಪತ್ರೆ :ಕಾರ್ಮಿಕರ ಪ್ರತಿಭಟನೆ

ಜಾಗತಿಕ ಬಂಡವಾಳದಾರರ ಕೇಂದ್ರವಾಗುತ್ತಿರುವ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ ಒಳಗೊಂಡ ಆನೇಕಲ್ ತಾಲ್ಲೂಕಿನಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದರೂ ಕಾರ್ಮಿಕರ ವೈದ್ಯಕೀಯ ಅಗತ್ಯಗಳಿಗಾಗಿ–ಇಎಸ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇಲ್ಲ. ಕೈಗಾರಿಕಾ ಪ್ರದೇಶಗಳಲ್ಲಿರುವ ಇಎಸ್‌ಐ ಪ್ರಾಥಮಿಕ ಆರೋಗ್ಯ ಚಿಕಿತ್ಸಾಲಯ ಕೇಂದ್ರಗಳಲ್ಲಿ ದಿನನಿತ್ಯ ಕಾರ್ಮಿಕರಿಂದ ಸುಲಿಗೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಬೊಮ್ಮಸಂದ್ರ ಇಎಸ್‌ಐ ಕೇಂದ್ರದಲ್ಲಿ ಮಿತಿ ಮೀರಿದ ಭ್ರಷ್ಟಾಚಾರ ವಿರೋಧಿಸಿ ಸಿಐಟಿಯು ಆನೇಕಲ್ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ನೂರಾರು ಕಾರ್ಮಿಕರು ಬೊಮ್ಮಸಂದ್ರ ಇಎಸ್‌ಐ ಪ್ರಾಥಮಿಕ ಚಿಕಿತ್ಸಾಲಯ ಕೇಂದ್ರಕ್ಕೆ ಮುತ್ತಿಗೆ ಹಾಕಿ ಧರಣಿ ನಡೆಸಿದರು.

ಭ್ರಷ್ಟರ ಕೂಪ:

ಸಿಐಟಿಯು ವತಿಯಿಂದ ಕೈಗಾರಿಕಾ ಪ್ರದೇಶಗಳಲ್ಲಿ ಪ್ರಚಾರ ನಡೆಸಿದಾಗ ಅನ್ಯ ಕಾರ್ಮಿಕ ಸಂಘಟನೆಗಳು, ಸ್ಥಳೀಯ ಮುಖಂಡರು, ಸ್ಥಳೀಯ ರಾಜಕಾರಣಿಗಳು ಪ್ರತಿಭಟನೆ ನಡೆಸದಂತೆ ದಂಬಾಲು ಬಿದ್ದರು. ಈ ಪ್ರಮಾಣದ ಪ್ರಭಾವ ಬೆಳೆಸಿಕೊಂಡಿರುವ ಬೊಮ್ಮಸಂದ್ರ ಇಎಸ್‌ಐ ಆಸ್ಪತ್ರೆಯ ಸಿಬ್ಬಂದಿ ಯಾವ ಪ್ರಮಾಣದ ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ಊಹಿಸಿಕೊಳ್ಳಬಹುದು.

ಕಾರ್ಮಿಕರು ಹೆಚ್ಚಿನ ಚಿಕಿತ್ಸೆಗೆ ಇಎಸ್‌ಐ ವ್ಯಾಪ್ತಿಯ ಆಸ್ಪತ್ರೆಗಳಿಗೆ ಬರೆಸಿಕೊಳ್ಳಬೇಕಾದರೆ, ಖಾಸಗಿ ಆಸ್ಪತ್ರೆಗೆ ನೀಡಲು ಬಿಡುಗಡೆ ಪತ್ರ ಪಡೆಯಬೇಕಾದರೆ ಚಿಕಿತ್ಸೆ ವೆಚ್ಚದ ಶೇಕಡವಾರು ಹಣ ನೀಡಲೇಬೇಕು. ಆ



ರೀತಿ ನೀಡಿಲ್ಲವೆಂದರೆ ಧಮಕಿ ಹಾಕುತ್ತಾರೆ. ಇಎಸ್‌ಐ ರಜೆ ಪಡೆಯಲು, ರಜೆ ವಾಪಸ್ಸು ಪತ್ರ ಪಡೆಯಲು, ರಜೆ ಸಂಬಳ ಪಡೆಯಲು ಕಾರ್ಮಿಕರ ಅಲೆದಾಟ ತಪ್ಪಿದ್ದಲ್ಲ. ಇನ್ನು ಇದಕ್ಕಾಗಿಯೇ ಮಧ್ಯವರ್ತಿಗಳ ದಂಡೇ ಅಲ್ಲಿರುತ್ತದೆ. ಕಾರ್ಮಿಕರು ಸಹ ಇಂತಹ ಭ್ರಷ್ಟಾಚಾರಕ್ಕೆ ಪೂರಕವಾಗಿ ಇಎಸ್‌ಐ ಸೌಲಭ್ಯಗಳ ದುರ್ಬಳಕೆ ಮಾಡುವುದನ್ನು ನಿಲ್ಲಿಸಬೇಕು.

ಇಎಸ್‌ಐ ಆಸ್ಪತ್ರೆಗಳು ಕಾರ್ಮಿಕರ ಆಸ್ಪತ್ರೆಗಳಾಗಲಿ:

ಕಾರ್ಮಿಕರು ನಡೆಸಿದ ಸಮರಶೀಲ ಹೋರಾಟಗಳ ಫಲವಾಗಿ 1948ರಲ್ಲಿ ಇಎಸ್‌ಐ ಕಾಯ್ದೆ ಜಾರಿಗೆ ಬಂದಿದೆ. ಕೇಂದ್ರ ಆಡಳಿತಾತ್ಮಕ ವಿಚಾರಗಳ ಕುರಿತು, ರಾಜ್ಯ ಸರ್ಕಾರ ಕಾರ್ಮಿಕರ ಆರೋಗ್ಯ ಸಂರಕ್ಷಣೆ–ಯ ನಿರ್ವಹಣೆ ಮಾಡುತ್ತಿವೆ. ಕಡಿಮೆ ವೇತನ ಪಡೆಯುವ ಅಂ–ದರೆ ಈಗ 15 ಸಾವಿರ ವೇತನ ಮಿತಿಯ ಕಾರ್ಮಿಕರಿಗಾಗಿ ಇರುವ ಇಎಸ್‌ಐ ಸೌಲಭ್ಯಕ್ಕೆ ಕಾರ್ಮಿಕರು ತಮ್ಮ ವೇತನದಲ್ಲಿ ನೀಡುವ ಪಾಲಿಗಿಂತ ಎರಡು ಪಟ್ಟು ಅಧಿಕ ಹಣ ಮಾಲೀಕರು ಪಾವತಿ ಮಾಡಬೇಕಾಗಿದೆ. ಆ ರೀತಿ ಪಾವತಿ ಮಾಡದ ಮಾಲೀಕರ ವಿರುದ್ದ ಕ್ರಮ ಜರುಗಿಸಲು ಇಎಸ್‌ಐ ಇಲಾಖೆಗೆ ಅಧಿಕಾರವಿದೆ. ಈಗ ಕಾರ್ಮಿಕರಿಂದ ಕಾರ್ಮಿಕರಿಗಾಗಿ ಇರುವ ಇಎಸ್‌ಐ ಆಸ್ಪತ್ರೆಗಳಲ್ಲಿ ಕಾರ್ಮಿಕರನ್ನು ಹೊರಗಿನವರಂತೆ ನೋಡಲಾಗುತ್ತಿದೆ. ಕಾರ್ಮಿಕರ ಹಣದಿಂದ ನಡೆಯುವ ಇಎಸ್‌ಐ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದೇವೆ ಎಂಬ ಸೌಜನ್ಯವಿಲ್ಲದ ಸಿಬ್ಬಂದಿ ಬೊಮ್ಮಸಂದ್ರ ಆಸ್ಪತ್ರೆಯಲ್ಲಿದ್ದಾರೆ. ಆ ನಿಟ್ಟಿನಲ್ಲಿ ಇಎಸ್‌ಐ ಆಸ್ಪತ್ರೆಗಳು ಕಾರ್ಮಿಕರ ಆಸ್ಪತ್ರೆಗಳಾಗಲು ಇಎಸ್‌ಐ ಇಲಾಖೆ ಕ್ರಮವಹಿಸಬೇಕಾಗಿದೆ. ಇಂತಹ ಆಸ್ಪತ್ರೆಗಳಲ್ಲಿ ಅಗತ್ಯಕ್ಕೆ ತಕ್ಕಂತೆ ವೈದ್ಯರು, ಸ್ವಚ್ಚತೆ, ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಇಎಸ್‌ಐ ಯೋಜನೆಯನ್ನು ಎಲ್ಲ ಕಾರ್ಮಿರಿಗೂ ವಿಸ್ತರಿಸಿ ಇಎಸ್‌ಐ ನ್ನು ಬಲಪಡಿಸಲು ಕಾರ್ಮಿಕರು ಮತ್ತಷ್ಟು ಹೋರಾಟಗಳಿಗೆ ಮುಂದಾಗಬೇಕಾಗಿದೆ.

ಅಧಿಕಾರಿಗಳ ಭರವಸೆ: ಪ್ರಾರಂಭದಲ್ಲಿ ಮನವಿ ಪತ್ರ ಸ್ವೀಕರಿಸಲು ಹಿಂದೇಟು ಹಾಕಿದ ಇಎಸ್‌ಐ ಅಧಿಕಾರಿಗಳು ಕಾರ್ಮಿಕರ ಪ್ರತಿರೋಧ ಎದುರಿಸಬೇಕಾಯಿತು. ಕೊನೆಗೂ ಪ್ರತಿಭಟನೆಗೆ ಮಣಿದ ಇಎಸ್‌ಐ ಕೇಂದ್ರಿಯ ಪ್ರಾದೇಶಿಕ ನಿರ್ದೇಶಕರಾದ ಡಾ॥ ಶ್ರೀನಿವಾಸ್ ಮತ್ತು ರಾಜ್ಯ ಇಎಸ್‌ಐ ವಿಭಾಗ ಉಪನಿರ್ದೇಶಕರಾದ ಡಾ॥ ವನಜಾಕ್ಷಿ ಮನವಿ ಪತ್ರ ಸ್ವೀಕರಿಸಿ ಕಾರ್ಮಿಕರಿಂದ ಹಣ ವಸೂಲಿ ಮಾಡುವ ಸಿಬ್ಬಂದಿಗಳ ವಿರುದ್ದ ಕ್ರಮಕೈಗೊಳ್ಳಲಾಗುತ್ತದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಾಗಿ ರಾಮಕೃಷ್ಣಪುರ ಸಮೀಪದಲ್ಲಿರುವ ಸುಮಾರು 5 ಎಕರೆ ಪ್ರದೇಶವನ್ನು ಗುರ್ತಿಸಲಾಗಿದೆ. ಶೀಘ್ರವಾಗಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಕಾರ್ಮಿಕರ ಬೇಡಿಕೆಗಳ ಕುರಿತು ಸಿಐಟಿಯು ಮುಖಂಡರನ್ನು ಒಳಗೊಂಡ ಅಧಿಕಾರಿಗಳ ಸಭೆ ಕರೆಯಲಾಗುವುದೆಂದು ಭರವಸೆಯನ್ನು ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿ.ಜಿ.ಕೆ.ನಾಯರ್, ಜಿಲ್ಲಾ ಉಪಾಧ್ಯಕ್ಷರಾದ ಕೆ.ಪ್ರಕಾಶ್, ತಾಲ್ಲೂಕು ಪ್ರಧಾನ ಕಾರ್ಯದರ್ಶಿ, ಬಿ.ಎನ್. ಮಂಜುನಾಥ್, ತಾಲ್ಲೂಕು ಅಧ್ಯಕ್ಷರಾದ ಮಹದೇಶ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಐಟಿಯು ತಾಲ್ಲೂಕು ಖಜಾಂಚಿ ಚಂದ್ರಶೇಖರ್, ಸಂಘಟನಾ ಕಾರ್ಯದರ್ಶಿ ಹನುಮಂತಪ್ಪ, ಮುಖಂಡರಾದ ವಿಶ್ವನಾಥ್, ಸರ್ಪಭೂಷಣ್, ರುದ್ರಯ್ಯ ನಿಂಬರಗಿಮಠ್, ಪರಶುರಾಮ್, ಡಿವೈಎಫ್‌ಐ ಮುಖಂಡರಾದ ಮಧುರಾಜು, ಸುರೇಶ್, ಚಂದ್ರಪ್ಪ ಮುಂತಾದವರು ಭಾಗವಹಿಸಿದ್ದರು.

ವರದಿ : ಬಿ.ಎನ್. ಮಂಜುನಾಥ್

ಈ ವಾರ

ಪುಟ 3 ರಿಂದ

ಸರಕಾರದ ಸಚಿವ ಸಂಪುಟದ ತೀರ್ಮಾನ ಸ್ವಾಗತಾರ್ಹವಾಗಿದೆ.

ಅದಾಗಲೇ ಜಾರಿಯಲ್ಲಿದ್ದ 1964ರ ಕಾಯ್ದೆಗೆ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಅತ್ಯವಸರದಲ್ಲಿ 2010ರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿತು. ಅದೂ ಸಾಕಾಗಲಿಲ್ಲವೆಂದು 2012ರಲ್ಲಿ ಮತ್ತಷ್ಟೂ ತಿದ್ದುಪಡಿಗಳಿಂದ ನಾಗರೀಕರನ್ನು ದಂಡಿಸಲು ಹೊರಟಿತು. ಕಾನೂನು ಬದ್ಧವಾಗಿಯೇ ಗೋಸಂರಕ್ಷಣೆ ಹೆಸರಿನಲ್ಲಿ ರಾಜ್ಯದಲ್ಲಿ ನಿತ್ಯವೂ ನರಮೇಧ ನಡೆಯುವಂತಹ ಸನ್ನಿವೇಶದ ಸೃಷ್ಟಿಯ ಭೂಮಿಕೆ ಇದಾಗಿತ್ತು. ರೈತರ, ಅಲ್ಪಸಂಖ್ಯಾತರ, ದಲಿತರ ಮತ್ತು ಕೋಮುಸೌಹಾರ್ದತೆಗೆ ಮಾರಕವಾಗುವ ಇಂತಹ ಕ್ರೂರ ಕಾನೂನಿನ ವಿರುದ್ಧ ರಾಜ್ಯದಾದ್ಯಂತ ಜನತೆ ತೀವ್ರವಾಗಿ ಪ್ರತಿಭಟಿಸಿದರೂ ವಿಧಾನಸಭೆಯಲ್ಲಿ ವಿರೋಧವನ್ನು ಲಕ್ಷಿಸದೇ ಏಕಪಕ್ಷೀಯವಾಗಿ ಅಂಗೀಕರಿಸಿ ರಾಜ್ಯಪಾಲರ, ಬಳಿಕ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಲಾಗಿತ್ತು. ಇದರಲ್ಲಿನ ಹಲವಾರು ದೋಷಗಳನ್ನು, ಅಪಾಯಗಳನ್ನು ಲಕ್ಷಿಸಿ ಅವರು ಬದಲಾಯಿಸಲು ಹಿಂತಿರುಗಿಸಿದ್ದರು. ಬಳಿಕ ತಿದ್ದಪಡಿಗಳ ಶಾಸ್ತ್ರದೊಂದಿಗೆ ಮರು ಅಂಗೀಕಾರಕ್ಕೆ ಸಲ್ಲಿಸಲಾಗಿತ್ತು. ಹೀಗಾಗಿ ಅದು ನೆತ್ತಿ ಮೇಲೆ ತೂಗು ಕತ್ತಿಯಾಗಿಯೇ ನೇತಾಡುತ್ತಿತ್ತು. ಈಗಿನ ಸರಕಾರದ ನಿರ್ಧಾರದಿಂದ ಕೊಂಚ ಉಸಿರು ಬಿಡಬಹುದೇನೋ!.

ಆದರೆ! ಈಗಲೂ ಗೋರಕ್ಷಣೆಯ ಹೆಸರಿನಲ್ಲಿ ಧಾಳಿಗಳು ನಿಂತೇ ಹೋಗುತ್ತವೆ ಎಂಬುದಾಗಲೀ, ರೈತರಿಗೆ, ಜಾನುವಾರು ಮಾರಾಟಗಾರರರಿಗೆ, ವ್ಯಾಪಾರೀ ಕಸುಬುದಾರರಿಗೆ, ಮಾಂಸವನ್ನು ಆಹಾರವಾಗಿ ಸ್ವೀಕರಿಸುವವರಿಗೆ ನಿರುಮ್ಮಳ ಸನ್ನಿವೇಶವೇ ಸೃಷ್ಟಿಯಾಗಿದೆ ಎಂದು ಭಾವಿಸಲು ಸಾಧ್ಯವೇ ಎಂದರೆ ಖಂಡಿತಕ್ಕೂ ಇಲ್ಲವೇ ಇಲ್ಲ ಎಂದೇ ಹೇಳಬೇಕಾಗುತ್ತದೆ. ಈಗ ಜಾರಿಯಲ್ಲಿದೆಯೆಂದು ಹೇಳಲಾದ ಹಿಂದಿನ 1964ರ ಕಾನೂನು ಸಹ ಗೋ ಸಾಗಾಣಿ–ಕೆ, ಒಂದು ವಯೋಮಾನದ ದನಗಳನ್ನು ಮಾಂಸಾಹಾರವಾಗಿ ಬಳಸುವುದಕ್ಕೆ ಆಕ್ಷೇಪವೆತ್ತುತ್ತದೆ, ಅಪರಾಧವೆಂದು ಪರಿಗಣಿಸುತ್ತದೆ. ಶಿಕ್ಷೆಯ ಪ್ರಮಾಣ ತಿದ್ದಪಡಿಯಂತೆ ಇಲ್ಲವಾದರೂ ಶಿಕ್ಷಾರ್ಹ ಅಪರಾಧವೆಂದು ಸಾರುತ್ತದೆ. ಗೋವು ಹೆಸರಿನಲ್ಲಿ ಸಂಘಪರಿವಾರ ನಡೆಸುತ್ತಿದ್ದ ದಾಂಧಲೆ, ಹಿಂಸಾತ್ಮಕ ಧಾಳಿಗಳು ಈಗಲೂ ನಿರಾಂತಕವಾಗಿ ಮುಂದುವರಿದಿವೆ. ಇದೇ ಕಾಂಗ್ರೆಸ್‌ನ ಸರಕಾರದ ಪೋಲೀಸರೇ ಬಜರಂಗದಳದವರೊಟ್ಟಿಗೆ ನಿಂತು ದನ ಹಿಡಿದು, ವ್ಯಾಪಾರಿಗಳನ್ನು, ಮಾಲೀಕರನ್ನು ಬಡಿದು, ಕೇಸು ಜಡಿದು ಅವನ್ನು ವಶ ಪಡಿಸಿಕೊಂಡು ಗಯಾಬ್ ಮಾಡಲಾಗುತ್ತಿದೆ. ಹೀಗೆ ಏನೂ ಕಷ್ಟ ಪಡದೇ ಫಲ ಉಣ್ಣುವವರು ಬರುತ್ತಾರೆ. ಇದು ನಿರಾಂತಕವಾಗಿ ನಡೆಯುವ ದಂಧೆ! ಮುಂದೆಯೂ ಈ ಹೆಸರಿನಲ್ಲಿಯೇ ಗಲಭೆಗಳು ಹೊತ್ತಿ ಉರಿಯುವುದು ಅಸಾಧ್ಯವೇನಲ್ಲ.

ಸರಕಾರದ ನಿರ್ಧಾರವನ್ನು ವಿರೋಧಿಸಿ ರಾಜ್ಯದಾದ್ಯಂತ ಪ್ರತಿಭಟನೆಗಳನ್ನು ಬಿಜೆಪಿಯು ಸಂಘಟಿಸಿತ್ತು. ಸಂಘಟಿಸುತ್ತಲಿದೆ. ವಿಚಿತ್ರವೆಂದರೆ ನಿತ್ಯವೂ ಕರಾವಳಿಯುದ್ದಕ್ಕೂ ಅರಾಜಕತೆ, ಹಿಂಸೆ ಹುಟ್ಟಿಸುವ ಇವರೇ ತಿದ್ದುಪಡಿ ಕಾಯ್ದೆ ಹಿಂಪಡೆದದ್ದೇ ಅಲ್ಲಿ ಅರಾಜಕತೆ ಸೃಷ್ಟಿಗೊಳ್ಳಲು ಕಾರಣವೆಂದು ಬೊಬ್ಬೆಯಿಡುತ್ತಿರುವುದು ಹಾಸ್ಯಾಸ್ಪದ! ಮುಗ್ದ ಗೋವನ್ನು ರಾಮನಂತೆ ಬಿಜೆಪಿಯು ತನ್ನ ರಾಜಕೀಯ ಅಧಿಕಾರದ ಸಾಧನೆಗೆ ಮೆಟ್ಟಿಲು ಮಾಡಿಕೊಂಡಿರುವಾಗ ಅವೆಲ್ಲಾ ನಿಲ್ಲುವುದಾದರೂ ಹೇಗೆ?

ಆದ್ದರಿಂದ ಈ ದೆಸೆಯಲ್ಲಿ ಸರಕಾರ ತನ್ನ ಕೆಲಸ ಮುಗಿಯಿತೆಂದು ಭಾವಿಸುವುದು ಸಹ ಜಾಣ ಕುರುಡುತನವಾಗುವುದು. ಓಟಿನ ಲೆಕ್ಕಚಾರದಲ್ಲೇ ಮುಳುಗಿರುವ ಕಾಂಗ್ರೆಸ್ ಸಹ ತಾನು ಅಲ್ಪಸಂಖ್ಯಾತರ ಪರವಿದ್ದೇನೆಂದು ಮಾತ್ರ ತೋರಿಸುವುದರಲ್ಲಿ ಆಸಕ್ತರಾಗುವುದು ಅನಾಹುತವನ್ನು ತಪ್ಪಿಸದು. ಹಾಗಾಗಿ ರಾಜ್ಯ ಸರಕಾರವು ಕೇರಳದಂತಹ ರಾಜ್ಯ ಒಳಗೊಂಡು ಇತರೆ ಕೆಲ ರಾಜ್ಯಗಳಲ್ಲಿ ತಂದಂತಹ ಪ್ರಗತಿಪರ ಕಾಯ್ದೆಯ ಸ್ವರೂಪವನ್ನು ಆಧರಿಸಿ ಕಾಯ್ದೆ ರೂಪಿಸಲು ಮುಂದಾಗಲಿ.

ಆದ್ದರಿಂದ ಕೋಮುವಾದಿಗಳನ್ನು ಬಗ್ಗುಬಡಿಯುವಲ್ಲಿ, ಜನತೆಗೆ ರಕ್ಷಣೆ ಕೊಡುವಲ್ಲಿ, ಕೋಮುಸೌಹಾರ್ದತೆ ಕಾಪಾಡುವಲ್ಲಿ ಸರಕಾರದ ಹೆಚ್ಚಿನ ಕಾಳಜಿ ಮುತುವರ್ಜಿ ಅಗತ್ಯ. ಕೇವಲ ಸರಕಾರ ಮಾತ್ರವಲ್ಲ, ನಮ್ಮ ನಾಡಿನ ಜನತೆಯ ಎಚ್ಚರವೂ ಸಹ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯಾಸಿನ್ ಭಟ್ಕಳ್ ಬಂಧನ


ನಿತ್ಯಾನಂದಸ್ವಾಮಿ.

ಇಂಡಿಯನ್ ಮುಜಾಹಿದ್ದೀನ್ ಎಂಬ ಭಯೋತ್ಪಾದಕ ಸಂಘಟನೆಯ ಸಂಸ್ಥಾಪಕರಲ್ಲೊಬ್ಬನೆಂದು ಬಿಂಬಿತವಾಗಿರುವ ಯಾಸಿನ್ ಭಟ್ಕಳ್‌ನನ್ನು ಮತ್ತು ಆತನ ಸಹಚರ ಅಸಾದುಲ್ಲಾ ಅಖ್ತರ್ ಎಂಬಾತನನ್ನು ರಾಷ್ಟ್ರೀಯ ತನಿಖಾದಳ(ಎನ್.ಐ.ಎ)ದ ಪೊಲೀಸರು ಸೆರೆಹಿಡಿದಿರುವುದು ದೇಶದಲ್ಲಿ ಶಾಂತಿ, ಕೋಮು ಸಾಮರಸ್ಯ ಬಯಸುವ ಎಲ್ಲರಿಗೂ ಸಮಾಧಾನ ತಂದಿದೆ. ಭಯೋತ್ಪಾದಕರು ಸೇಡಿಗಾಗಿ ಪರಿತಪಿಸುವವರಾಗಿರುತ್ತಾರೆ. ಭಯೋತ್ಪಾದಕರಿಗೆ ಜಾತಿ, ಧರ್ಮ ಎಂಬುದಿಲ್ಲ. ಸೇಡು ತೀರಿಸಿಕೊಳ್ಳುವ ಭರದಲ್ಲಿ ಅವರು ಅಮಾಯಕರನ್ನು ಹತ್ಯೆಮಾಡುತ್ತಾರೆ. ಅವರ ಈ ಅರ್ಥರಹಿತ ಆತುರದಲ್ಲಿ ಅವರು ಅನೇಕ ಬಾರಿ ತಮ್ಮ ಸ್ವಂತ ಜಾತಿ, ಮತಕ್ಕೆ ಸೇರಿದವರ ಬರ್ಬರ ಹತ್ಯೆಗೂ ಕಾರಣರಾಗುತ್ತಾರೆ.

ಯಾಸಿನ್ ಭಟ್ಕಳ್ ಅಲಿಯಾಸ್ ಮೊಹಮದ್ ಅಹಮ್ಮದ್ ಸಿದ್ದಿಬಪ್ಪ ಬೆಂಗಳೂರು ಸೇರಿದಂತೆ ದೇಶದ ಅನೇಕ ನಗರಗಳಲ್ಲಿ ನಡೆದ 40ಕ್ಕೂ ಹೆಚ್ಚು ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿರುವ ಆರೋಪವನ್ನು ಹೊತ್ತಿದ್ದಾನೆ. ಈತನ ನೇತೃತ್ವದಲ್ಲಿ ನಡೆದ ಬಾಂಬ್ ಸ್ಫೋಟಗಳಲ್ಲಿ ಅನೇಕ ಜನ ಅಮಾಯಕರು ಸಾವನ್ನಪ್ಪಿದ್ದು ನೂರಾರು ಜನ ಗಾಯಗೊಂಡಿದ್ದಾರೆ ಎನ್ನಲಾಗಿದೆ. ಕಳೆದ ಐದಾರು ವರ್ಷಗಳಿಂದ ಭದ್ರತಾ ಸಂಸ್ಥೆಗಳ ಕಣ್ತಪ್ಪಿಸಿ ಓಡಾಡಿಕೊಂಡಿದ್ದ ಈತನನ್ನು ಕೊನೆಗೂ ಬಂಧಿಸಲು ಸಾಧ್ಯವಾಗಿರುವುದು ಸ್ವಾಗತಾರ್ಹವಾಗಿದೆ.

ಕಾನೂನು ಪ್ರಕ್ರಿಯೆ ನಡೆಯಲಿ :

ಆರೋಪಗಳು ನ್ಯಾಯಾಲಯದಲ್ಲಿ ಸಾಬೀತಾಗುವವರೆಗೂ ಪ್ರತಿಯೊಬ್ಬ ಆರೋಪಿ ಕೇವಲ ಆರೋಪಿ ಮಾತ್ರ, ಯಾಸಿನ್ ವಿಷಯದಲ್ಲೂ ಎಲ್ಲರೂ ಅದನ್ನೇ ನಿರೀಕ್ಷಿಸುತ್ತಾರೆ. ಆತನ ತಂದೆ ಜರಾರಾ ಸಿದ್ದಿಬಪ್ಪ ಇದೇ ಮಾತುಗಳನ್ನು ಆಡಿದ್ದಾರೆ ಎನ್ನಲಾಗಿದೆ. "ನನ್ನ ಮಗ ನಿರಪರಾಧಿ. ನಮಗೆ ಕಾನೂನು ಪ್ರಕ್ರಿಯೆ ಮೇಲೆ ಸಂಪೂರ್ಣ ವಿಶ್ವಾಸವಿದೆ. ಅವನು ತಪ್ಪು ಮಾಡಿದ್ದರೆ, ಖಂಡಿತ ಶಿಕ್ಷೆಯಾಗಲಿ"



ಎಂದಿದ್ದಾರೆ ಅವರು.

ನ್ಯಾಯಾಲಯ ಯಾಸಿನ್ ಮತ್ತು ಅಸಾದುಲ್ಲಾರನ್ನು ತನಿಖೆಗಾಗಿ ರಾಷ್ಟ್ರೀಯ ತನಿಖಾ ಸಂಸ್ಥೆಯ ವಶಕ್ಕೆ ನೀಡಿದೆ. ನಂತರ ವಿಚಾರಣೆ ನ್ಯಾಯಾಲಯದಲ್ಲಿ ನಡೆಯಲಿದೆ. ಯಾವುದೇ ಹಸ್ತಕ್ಷೇಪವಿಲ್ಲದೆ ವಿಚಾರಣೆ ನಿಷ್ಪಕ್ಷಪಾತವಾಗಿ ನಡೆಯಬೇಕೆಂದು ಇಡೀ ದೇಶವೇ ಹಾತೊರೆಯುವಂತಾಗಿದೆ. ಮಾಧ್ಯಮಗಳೂ ಅನಗತ್ಯ ಆತುರ ತೋರುವ ಅಗತ್ಯವಿಲ್ಲ. ಯಾಸಿನ್‌ನ ತಂದೆ ಜರಾರಾ ಸಿದ್ದಿಬಪ್ಪ ಆತಂಕ ವ್ಯಕ್ತಪಡಿಸಿದಂತೆ ಮಾಧ್ಯಮಗಳು ತನಿಖೆ ನಡೆಸುವುದಾಗಲಿ, ತೀರ್ಪು ನೀಡುವುದಾಗಲಿ ಮಾಡಬೇಕಾಗಿಲ್ಲ. ಕಾನೂನು ತನ್ನ ದಾರಿಯನ್ನು ಅನುಸರಿಸಲು ಬಿಡುವುದೇ ಎಲ್ಲರ ಜವಾಬ್ದಾರಿ.

ತನಿಖಾ ಸಂಸ್ಥೆಗಳಾದರೂ ಇಂತಹ ಅತಿ ಸೂಕ್ಷ್ಮ ಪ್ರಕರಣಗಳಲ್ಲಿ ತಮಗೆ ದೊರೆಯುವ ಮಾಹಿತಿಗಳನ್ನು ಪ್ರಕಟಿಸುವ ಮೂಲಕ ಸಾರ್ವಜನಿಕರ ದಾರಿ ತಪ್ಪಿಸುವುದೂ ಸಹ ಸರಿಯಲ್ಲ. ಅನೇಕ ಪ್ರಕರಣಗಳಲ್ಲಿ ಬೇಕಾಗಿರುವ ಒಬ್ಬ ಆರೋಪಿಯನ್ನು ಬಂಧಿಸಿದ ತಕ್ಷಣ ಆತನ ಬಾಯಿಯಿಂದ ಹಲವಾರು ಮಾಹಿತಿಗಳನ್ನು ಬಹಿರಂಗ ಪಡಿಸುವುದು ತನಿಖಾ ಸಂಸ್ಥೆಯ ಬಗ್ಗೆಯೇ ಹಲವು ಅನುಮಾನಗಳನ್ನು ಹುಟ್ಟುಹಾಕುತ್ತದೆ ಮತ್ತು ತನಿಖಾ ಸಂಸ್ಥೆಯ ಮೇಲೆ ಜನರ ವಿಶ್ವಾಸ ಕುಸಿಯುತ್ತದೆ. ಇಂತಹ ಮಾಹಿತಿಗಳ ಪ್ರಕಟಣೆಯಿಂದ ಹೊರಗಿರುವ ಇತರ ಆರೋಪಿಗಳಿಗೆ ಎಚ್ಚರಿಸಿದಂತಾಗಿ ತಪ್ಪಿಸಿಕೊಳ್ಳಲು ಅವಕಾಶ ಒದಗಿಸಿದಂತಾಗುತ್ತದೆ.

ಯಾಸೀನ್ ಹುಟ್ಟಿನಿಂದ ಭಯೋತ್ಪಾದಕನಲ್ಲ :

ಯಾಸೀನ್ ಭಟ್ಕಳ್ ಭಯೋತ್ಪಾದಕ ಕೃತ್ಯಗಳಲ್ಲಿ ಭಾಗವಹಿಸಿದ್ದು ನಿಜವೇ ಅಥವ ಸುಳ್ಳೇ ಎಂಬುದನ್ನು ನ್ಯಾಯಾಲಯ ನಿರ್ಧರಿಸಲಿದೆ. ಆತ ಒಬ್ಬ ಭಯೋತ್ಪಾದಕ ಎಂದು ಸಾಬೀತಾದರೂ ಆತ ಹುಟ್ಟಿನಿಂದಲೇ ಭಯೋತ್ಪಾದಕನಾಗಿರಲು ಸಾಧ್ಯವಿಲ್ಲ. ಆತನನ್ನು ಚಿಕ್ಕಂದಿನಿಂದಲೂ ನೋಡಿದ ಆತನ ಊರಿನ ಜನ, ಆತನಿಗೆ ಶಾಲೆಯಲ್ಲಿ ಪಾಠ ಹೇಳಿದ ಶಿಕ್ಷಕರು, ಆತನೊಂದಿಗೆ ಒಡನಾಟವಿದ್ದವರು ಹೇಳುವ ಪ್ರಕಾರ ಆತ ಒಬ್ಬ ಒಳ್ಳೆಯ ಹುಡುಗನಾಗಿದ್ದ. ಇಂದು ಆತನೊಬ್ಬ ಭಯೋತ್ಪಾದಕನಾಗಿದ್ದಾನೆ ಎಂಬುದು ಅವರು ನಂಬದವರಾಗಿದ್ದಾರೆ.


ಭಯೋತ್ಪಾದಕರೇ ಇರಲಿ, ಕೊಲೆಗಡುಕರೇ ಇರಲಿ, ಅಥವ ಅತ್ಯಾಚಾರಿಗಳೇ ಇರಲಿ, ಅವರು ಹುಟ್ಟಿನಿಂದ ಹಾಗೆ ಇರುವುದಿಲ್ಲ. ಈ ಸಮಾಜ, ಅವರ ಸುತ್ತಲಿನ ಪರಿಸ್ಥಿತಿ ಅವರನ್ನು ಹಾಗೆ ರೂಪಿಸುತ್ತದೆ. ಭಯೋತ್ಪಾದನೆಯ ಬೇರುಗಳು ಈ ಸಮಾಜದಲ್ಲೇ ಇವೆ. ಕೆಲವು ಭಯೋತ್ಪಾದಕರನ್ನು ಶಿಕ್ಷಿಸುವುದರಿಂದ ಭಯೋತ್ಪಾದನೆ ಅಂತ್ಯಗೊಳ್ಳುವುದಿಲ್ಲ. ಭಯೋತ್ಪಾದನೆಯ ಮೂಲವನ್ನು ಗುರುತಿಸಬೇಕಾಗಿದೆ. ಯಾವ ಪರಿಸ್ಥಿತಿ ಭಯೋತ್ಪಾದಕರನ್ನು ಉತ್ಪತ್ತಿ ಮಾಡುತ್ತದೋ ಆ ಪರಿಸ್ಥಿತಿಯನ್ನು ಬದಲಾಯಿಸುವುದು ಹೇಗೆ ಎಂಬುದನ್ನು ಕಂಡುಕೊಳ್ಳಬೇಕಾಗಿದೆ.

ರಾಜ್ಯ ಸರ್ಕಾರ ಎಚ್ಚರವಹಿಸಬೇಕು :

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡ ಕೋಮುವಾದಿ ಶಕ್ತಿಗಳು ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಹೆಡೆ ಎತ್ತಲಾರಂಭಿಸಿವೆ. ಗೋಹತ್ಯೆ ನಿಷೇದ ಕಾಯ್ದೆ ಹೆಸರಿನಲ್ಲಿ ಗಲಭೆಗಳನ್ನು ಹುಟ್ಟುಹಾಕಲು ಹೊಂಚು ಹಾಕುತ್ತಿವೆ. ಬಾಬಾ ಬುಡಾನ್ ಗಿರಿಯಲ್ಲಿ ಮತ್ತೇ ಗಲಾಟೆ ಮಾಡಲು ಸಿದ್ಧತೆ ನಡೆಸುತ್ತಿವೆ. ಗಣೇಶೋತ್ಸವವನ್ನು ಬಳಸಿಕೊಂಡು ಕೋಮು ದಳ್ಳುರಿ ಹೊತ್ತಿಸಲು ಮತ್ತೆ ಪ್ರಯತ್ನಮಾಡಲಿವೆ. ಕರಾವಳಿ ಜಿಲ್ಲೆಗಳಲ್ಲಿ ಮತ್ತೊಮ್ಮೆ ತಮ್ಮ ಹಿಡಿತವನ್ನು ಮರುಸ್ಥಾಪಿಸಲು ತೀರ್ಮಾನ ಮಾಡಿಕೊಂಡಿವೆ. ಯಾಸಿನ್ ಭಟ್ಕಳ ಪ್ರಕರಣದ ದುರ್ಲಾಭ ಪಡೆಯಲು ಅವರು ಹಿಂಜರಿಯಲಾರರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹೆಚ್ಚಿನ ಜವಾಬ್ದಾರಿಯಿಂದ ಪರಿಸ್ಥಿತಿಯನ್ನು ನಿಭಾಯಿಸಬೇಕಾಗಿದೆ. ಕೋಮುವಾದಿ ಶಕ್ತಿಗಳನ್ನು ದಮನಮಾಡಲು ಸರ್ಕಾರ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು. ಇಂತಹ ದುಷ್ಟ ಶಕ್ತಿಗಳ ಬಗ್ಗೆ ಮೃದು ಧೋರಣೆ ಅನುಸರಿಸುವುದು ಸರ್ಕಾರವನ್ನು ಮಾತ್ರವಲ್ಲ ರಾಜ್ಯದ ಜನತೆಯನ್ನೇ ಗಂಡಾಂತರಕ್ಕೆ ತಳ್ಳುವುದು.

ಲೇಖಕಿ ಸುಶ್ಮಿತಾ ಬ್ಯಾನರ್ಜಿ ಹತ್ಯೆ : ಖಂಡನೆ

ಅಫಘಾನಿಸ್ಥಾನದಲ್ಲಿ ವಾಸವಿದ್ದ ಭಾರತೀಯ ಬರಹಗಾರ್ತಿ ಸುಶ್ಮಿತಾ ಬ್ಯಾನರ್ಜಿ ಅವರನ್ನು ತಾಲಿಬಾನ್ ಹಂತಕರು ಗುಂಡಿಕ್ಕಿ ಕೊಲೆ ಮಾಡಿದ ಸಂಗತಿ ವರದಿಯಾಗಿದ್ದು ಜನಶಕ್ತಿ ಈ ಬರ್ಬರ ಕೃತ್ಯವನ್ನು ಬಲವಾಗಿ ಖಂಡಿಸುತ್ತದೆ. ಅವರು ಅಫಘಾನಿಸ್ಥಾನದ ಕೈಗಾರಿಕೋದ್ಯಮಿಯೊಬ್ಬರನ್ನು ಮದುವೆಯಾಗಿ ಅವರೊಂದಿಗೆ ಇರುತ್ತಿದ್ದರು. ಅವರ ಬರಹಗಳಿಗಾಗಿ ತಾಲಿಬಾನ್ ಉಗ್ರರಿಂದ ಅವರು ಜೀವ ಬೆದರಿಕೆಯನ್ನು ಎದುರಿಸುತ್ತಿದ್ದರು "ಒಬ್ಬ ಕಾಬೂಲಿವಾಲಾನ ಬಂಗಾಳಿ ಹೆಂಡತಿ, ತಾಲಿಬಾನ್ ಕಾಬೂಲ್ ಮತ್ತು ನಾನು" ಮೊದಲಾದ ಅವರ ಪುಸ್ತಕಗಳಿಂದಾಗಿ ಅವರು



ತಾಲಿಬಾನ್ ಭಯೋತ್ಪಾದಕರ ಟಾರ್ಗೆಟ್ ಆಗಿದ್ದರು. "ಅವರೊಬ್ಬ ಧೈರ್ಯಶಾಲಿ ಮಹಿಳೆ ಹಾಗೂ ಪ್ರತಿಭಾನ್ವಿತ ಲೇಖಕಿಯಾಗಿದ್ದರು" ಎಂಬುದು ಅವರನ್ನು ಬಲ್ಲವರ ಅಭಿಪ್ರಾಯ.




ಸೆಪ್ಟಂಬರ್ 4 2013 ರಂದು ಬೆಂಗಳೂರಿನಲ್ಲಿ ನಡೆದ ಆಶಾ ಕಾರ್ಯಕರ್ತೆಯರ ರಾಜ್ಯ ಸಮಾವೇಶದಲ್ಲಿ ಭಾಗವಹಿಸಿದ್ದ ಆರೋಗ್ಯ ಸಚಿವ ಯು.ಟಿ. ಖಾದರ್, ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ಮತ್ತು ಸಿಐಟಿಯು ಮುಖಂಡರಾದ ಎಸ್. ಪ್ರಸನ್ನ ಕುಮಾರ್, ಎಸ್. ವರಲಕ್ಷ್ಮಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಹೋಟೆಲ್‌ಗಳಲ್ಲಿ ಏಕರೂಪ ದರ ವ್ಯವಸ್ಥೆಗೆ ಆಗ್ರಹ

ಮಂಗಳೂರು ನಗರ ಸೇರಿದಂತೆ ದ.ಕ. ಜಿಲ್ಲೆಯಾದ್ಯಂತ ಹೋಟೆಲ್, ಉಪಹಾರ ಗೃಹಗಳಲ್ಲಿ ಆಹಾರ ಪದಾರ್ಥಗಳ ಬೆಲೆ ವಿಪರೀತವಾಗಿ ಏರಿಕೆಯಾಗಿದೆ. ಎಲ್ಲಾ ದರ್ಜೆಯ ಹೋಟೆಲ್ ಮಾಲಿಕರು ತಮಗೆ ಇಷ್ಟ ಬಂದಂತೆ ತಿಂಡಿ ತಿನಿಸುಗಳ ದರ ನಿಗದಿ ಮಾಡಿರುವುದರಿಂದ ಎಲ್ಲಾ ವಿಭಾಗಗಳ ಜನತೆ ಸಂಕಷ್ಟವನ್ನು ಅನುಭವಿಸುವಂತಾಗಿದೆ. ಆಹಾರಕ್ಕಾಗಿ ಹೋಟೆಲುಗಳನ್ನೇ ಅವಲಂಬಿಸಿರುವ ವಿದ್ಯಾರ್ಥಿಗಳು, ಕಟ್ಟಡ ಕಾರ್ಮಿಕರು, ಕೂಲಿ ಕಾರ್ಮಿಕರು, ಸಾರಿಗೆ ನೌಕರರು, ಕಡಿಮೆ ಸಂಬಳಕ್ಕೆ ಅಂಗಡಿ ಕಚೇರಿಗಳಲ್ಲಿ ದುಡಿಯುವ ನೌಕರರು, ವಿವಿಧ ವಿಭಾಗದ ಜನತೆ ತಮ್ಮ ದುಡಿಮೆಯ ಬಹುಭಾಗವನ್ನು ಹೋಟೆಲ್‌ಗಳ ಆಹಾರ ಪದಾರ್ಥಗಳಿಗೆ ವ್ಯಯಿಸಬೇಕಾದ ಸಂಕಷ್ಟಕ್ಕೀಡಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹೋಟೆಲ್, ಉಪಹಾರ ಗೃಹಗಳು ನ್ಯಾಯಯುತ ಮಟ್ಟಕ್ಕೆ ದರಗಳನ್ನು ಇಳಿಸುವಲ್ಲಿ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಆಗಸ್ಟ್ 26, 2013 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಹಾಗೂ ಪರಿಸರದ ಹೋಟೆಲ್‌ಗಳ ಮುಂಭಾಗದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು.

ಕಚ್ಚಾ ಸಾಮಾಗ್ರಿಗಳ ಬೆಲೆ ಏರಿಕೆಗೂ ತಿಂಡಿ ತಿನಿಸುಗಳ ಬೆಲೆ ಏರಿಕೆಗೂ ಯಾವುದೇ ಹೊಂದಾಣಿಕೆ ಇಲ್ಲದ ರೀತಿಯಲ್ಲಿ ಹಲವು ಪಟ್ಟು ದರ ಏರಿಕೆ ಮಾಡಲಾಗಿದೆ. ಆದುದರಿಂದ ಆಹಾರ ಪದಾರ್ಥಗಳ ಪ್ರಮಾಣ ಮತ್ತು ದರ ನಿಗದಿಗೆ ಸಂಬಂಧಿಸಿ ಜಿಲ್ಲಾಡಳಿತದ ಅನುಮತಿ ಕಡ್ಡಾಯಗೊಳಿಸುವಂತಾಗಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಉಪಹಾರಗೃಹಗಳ ದರ್ಜೆಗೆ ಅನುಗುಣವಾಗಿ, ಏಕ ಪ್ರಮಾಣದ ಆಹಾರಕ್ಕೆ ಏಕರೂಪ ದರ ವ್ಯವಸ್ಥೆ ರೂಪಿಸಬೇಕು. ಸರ್ಕಾರ ರಿಯಾಯಿತಿ ದರದ ಹೋಟೇಲ್ ಆರಂಭಿಸಬೇಕು ಎಂದು ಒತ್ತಾಯಿಸಲಾಯಿತು.



ಬಾಲಕೃಷ್ಣ ಶೆಟ್ಟಿ

ಹೋಟೇಲ್ ಆಹಾರ ದರವನ್ನು ನ್ಯಾಯಯುತ ದರಗಳಿಗೆ ಇಳಿಸದಿದ್ದಲ್ಲಿ, ಡಿವೈಎಫ್‌ಐ ಇನ್ನಷ್ಟು ಹೋರಾಟಗಳನ್ನು ನಡೆಸಲಿದೆ ಎಂದು ಎಚ್ಚರಿಕೆ ನೀಡಲಾಯಿತು. ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ದಯಾನಂದ ಶೆಟ್ಟಿ ಮಾತನಾಡಿದರು. ಜಿಲ್ಲಾ ಸಮಿತಿ ಮುಖಂಡರಾದ ಬಿ.ಕೆ.ಇಮ್ತಿಯಾಜ್, ಮಹಾಬಲ ದೆಪ್ಪಲಿಮಾರ್, ಸೀತಾರಾಮ ಶೆಟ್ಟಿ, ಅಶೋಕ್ ಶೆಟ್ಟಿ, ಸಂತೋಷ್ ಬಜಾಲ್, ಯೋಗೀಶ್, ರಫೀಕ್ ಹರೇಕಳ ಮತ್ತಿತರರು ಭಾಗವಹಿಸಿದ್ದರು.

ಮೊದಲು ಸರ್ವಿಸ್ ಬಸ್ ನಿಲ್ದಾಣದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಸಲಾಯಿತು.



ನಿವೇಶನಕ್ಕೆ ಆಗ್ರಹಿಸಿ ಪ್ರತಿಭಟನೆ:

ಉಳ್ಳಾಲ ವಲಯದ ಅಂಬ್ಲಮೊಗರಿನಲ್ಲಿ ನಿವೇಶನ ರಹಿತರಿಗೆ ಮನೆ ನಿವೇಶನ ನೀಡಬೇಕು, ಮನೆ ಬಾಡಿಗೆ ನಿಯಂತ್ರಣ ಕಾಯಿದೆ ಜಾರಿಗೊಳಿಸಬೇಕು, ಸರಕಾರಿ ಸ್ಥಳಗಳಲ್ಲಿ ಮನೆ ಕಟ್ಟಿ ವಾಸಿಸುವ ಬಡವರಿಗೆ ಹಕ್ಕು ಪತ್ರ ನೀಡಬೇಕು – ಎಂದು ಒತ್ತಾಯಿಸಿ ಸೆಪ್ಟೆಂಬರ್ 2 ರಂದು ಅಂಬ್ಲಮೊಗರು ಗ್ರಾಮ ಪಂಚಾಯತಿ ಕಚೇರಿ ಎದುರು ಡಿವೈಎಫ್‌ಐ ಮದಕ ಘಟಕ ಮತ್ತು ಕರ್ನಾಟಕ ಪ್ರಾಂತ ರೈತಸಂಘಗಳ ವತಿಯಿಂದ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಅವರು ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ಡಿವೈಎಫ್‌ಐ ಘಟಕದ ಅಧ್ಯಕ್ಷ ಇಬ್ರಾಹಿಂ, ಕಾರ್ಯದರ್ಶಿ ಸಲೀಂ, ಸಿಪಿಐ(ಎಂ) ಕಾರ್ಯಕರ್ತ ಜಯಂತ ಪೂಜಾರಿ, ಹರೇಕಳ ಗ್ರಾಮ ಪಂಚಾಯತ್ ಸದಸ್ಯ ಮಜೀದ್ ಮತ್ತಿತರರು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

'ಹೆಣ್ಣು ಮಕ್ಕಳನ್ನು ಅಸುರಕ್ಷತೆ, ಅಭದ್ರತೆ ಕಾಡುತ್ತಿದೆ'

'ಸರ್ಕಾರ ಅನ್ನ ದೌರ್ಭಾಗ್ಯವನ್ನು ತಂದೊಡ್ಡಿದೆ'

ಬಿ.ಮಾಧವ ಕಟು ಟೀಕೆ

ಉತ್ತಮ ಪಡಿತರ ವ್ಯವಸ್ಥೆಗಾಗಿ ಎಡಪಕ್ಷಗಳು ಪ್ರತಿಪಾದಿಸುತ್ತಿರುವ ಬೇಡಿಕೆಗಳನ್ನು ಮುಂದಿಟ್ಟು ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು, ಹೋಬಳಿ ಕೇಂದ್ರಗಳಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಸೆಪ್ಟೆಂಬರ್ 2 ಮತ್ತು 3 ರಂದು ಪ್ರತಿಭಟನಾ ಪ್ರದರ್ಶನಗಳನ್ನು ಏರ್ಪಡಿಸಲಾಯಿತು. ಪ್ರತಿಭಟನೆ ನಡೆಸಿದಲ್ಲೆಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿದ್ದರು.

ಕರ್ನಾಟಕ ಸರಕಾರವು 'ಅನ್ನಭಾಗ್ಯ' ಯೋಜನೆ ಜಾರಿ ಮಾಡುವ ಜತೆಗೆ ಈ ತನಕ ರಿಯಾಯತಿ ದರದಲ್ಲಿ ಅಕ್ಕಿ ಸಿಗುತ್ತಿದ್ದ ಎಪಿಎಲ್ ಕಾರ್ಡುದಾರರಿಗೆ ಅಕ್ಕಿ ನೀಡಿಕೆಯನ್ನು ಕೊನೆಗೊಳಿಸಿ ಅನ್ನ ದೌರ್ಭಾಗ್ಯವನ್ನು ತಂದೊಡ್ಡಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ದ.ಕ.ಜಿಲ್ಲಾ ಕಾರ್ಯದರ್ಶಿಯೂ ಆದ ಬಿ.ಮಾಧವ ಕಟುವಾಗಿ ಟೀಕಿಸಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್



ಬಜಾಲ್ ಮಾತನಾಡಿದರು. ಕಾರ್ಪೊರೇಟರ್ ಹಾಗೂ ನಗರ ಸಮಿತಿ ಸದಸ್ಯ ಕೆ.ದಯಾನಂದ ಶೆಟ್ಟಿ ವಂದಿಸಿದರು.

ಬೆಲೆ ಏರಿಕೆಯಿಂದ ಜನಸಾಮಾನ್ಯರ ಬದುಕು ಹೈರಾಣ – ಕೆ.ಆರ್.ಶ್ರೀಯಾನ್ ಕಿಡಿ

ಬೆಲೆ ಏರಿಕೆಯಿಂದ ಜನಸಾಮಾನ್ಯರ ಬದುಕು ದಿನದಿಂದ ದಿನಕ್ಕೆ ಹೈರಾಣಾಗುತ್ತಿದೆ. ಪಡಿತರ ಚೀಟಿ ನೀಡುವ ಪ್ರಕ್ರಿಯೆ ಗೊಂದಲದ ಗೂಡಾಗಿದೆ. ಸರ್ಕಾರ ದಿನಕ್ಕೊಂದು ನಿಯಮ ತರುತ್ತಿದ್ದು, ಸಾಮಾನ್ಯ ಜನರು ಬದುಕಿನುದ್ದಕ್ಕೂ ಪಡಿತರ ಕಾರ್ಡು ಮತ್ತು ಆಹಾರ ಪಡೆಯಲು ಪರದಾಡುವಂತಾಗಿದೆ ಎಂಬುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್.ಶ್ರೀಯಾನ್ ಕಿಡಿಕಾರಿದರು.

ತೊಕ್ಕೋಟು ಬಸ್ ನಿಲ್ದಾಣದ ಬಳಿ ಇರುವ ನಾಡ ಕಚೇರಿಯ ಎದುರು ಪಡಿತರ ಅವ್ಯವಸ್ಥೆಯ ವಿರುದ್ಧ ಸಿಪಿಐ(ಎಂ) ಪಕ್ಷದ ಉಳ್ಳಾಲ ವಲಯ ಸಮಿತಿ ಸೆಪ್ಟೆಂಬರ್ 3 ರಂದು ನಡೆಸಿದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಎಲ್ಲಾ ಕುಟುಂಬಗಳಿಗೂ ಒಂದೇ ರೀತಿಯ ಕಾರ್ಡುಗಳನ್ನು ವಿತರಿಸಿ 35 ಕೆಜಿ ಅಕ್ಕಿ, ಬೇಳೆಕಾಳು, ಅಡುಗೆ ಎಣ್ಣೆ, ಸಕ್ಕರೆ ಮತ್ತಿತರ ಅಗತ್ಯ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಒದಗಿಸಬೇಕು ಎಂದರು. ಉಳ್ಳಾಲ ವಲಯ

ಪುಟ 15 ಕ್ಕೆ

ಡಾ।ನರೇಂದ್ರ ದಾಭೋಲ್ಕರ್ ಹತ್ಯೆ ಖಂಡಿಸಿ ಸಂಯುಕ್ತ ಪ್ರತಿಭಟನೆ:

ಖ್ಯಾತ ವಿಚಾರವಾದಿ ಡಾ।ನರೇಂದ್ರ ದಾಭೋಲ್ಕರ್‌ರ ಹತ್ಯೆ ಖಂಡಿಸಿ ಆಗಸ್ಟ್ 26 ರಂದು ಎಸ್‌ಎಫ್‌ಐ, ಡಿವೈಎಫ್‌ಐ, ದ.ಕ.ಜಿಲ್ಲಾ ವಿಚಾರವಾದಿಗಳ ಸಂಘ, ದ.ಕ. ಜಿಲ್ಲಾ ಪಿಯುಸಿಎಲ್ ಜೊತೆಯಾಗಿ ದ.ಕ. ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಂಯುಕ್ತ ಪ್ರತಿಭಟನೆ ನಡೆಸಿದವು. ಅಖಿಲ ಭಾರತ ವಿಚಾರವಾದಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರಾದ ಪ್ರೊ।ನರೇಂದ್ರ ನಾಯಕ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಎಸ್‌ಎಫ್‌ಐ ಜಿಲ್ಲಾ ಸಮಿತಿಯ ಜೀವನ್‌ರಾಜ್ ಕುತ್ತಾರ್, ಡಿವೈಎಫ್‌ಐನ ಮುನೀರ್ ಕಾಟಿಪಳ್ಳ ಮತ್ತಿತರರು ಭಾಗವಹಿಸಿದ್ದರು. ಮೊದಲು ಸರ್ವಿಸ್ ಬಸ್ ನಿಲ್ದಾಣದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು.

ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾ ಸಮಾವೇಶದಲ್ಲಿ ಕೆ.ಎಸ್ ಲಕ್ಷ್ಮಿ ಆತಂಕ

"ಇಂದು ರಾಜ್ಯದ ಹೆಣ್ಣು ಮಕ್ಕಳಿಗೆ ಅಸುರಕ್ಷತೆ, ಅಭದ್ರತೆ ಕಾಡುತ್ತಿದೆ, ಕಳೆದ 5 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 65,000 ಮಹಿಳಾ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ದೇಶದಲ್ಲಿ ಕಳೆದ ಒಂದು ವರ್ಷದಿಂದ 2,40,000 ಪ್ರಕರಣಗಳು ದಾಖಲಾಗಿದ್ದರೆ, ದಾಖಲಾಗದ ಪ್ರಕರಣಗಳೂ ಎಷ್ಟೋ ಇರಬಹುದು. ಮಹಿಳೆಯರ ಮೇಲಿನ ದೌರ್ಜನ್ಯಗಳ ನಿಯಂತ್ರಣಕ್ಕೆ ರಾಜಕೀಯ ಇಚ್ಛಾ ಶಕ್ತಿಯ ಕೊರತೆಯೇ ಕಾರಣ" ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಹೇಳಿದರು. ಅವರು ಆಗಸ್ಟ್ 27 ರಂದು ಮೂಡಬಿದ್ರಿಯಲ್ಲಿ ಜನವಾದಿ ಮಹಿಳಾ ಸಂಘಟನೆಯಿಂದ ಏರ್ಪಡಿಸಲಾದ ಜಿಲ್ಲಾ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

"ಮತ ಬ್ಯಾಂಕ್ ರಾಜಕಾರಣಕ್ಕೆ ಮಹಿಳೆಯರನ್ನು ಬಳಸಿಕೊಂಡು ತಮ್ಮ ಮೇಲಿನ ದೌರ್ಜನ್ಯಗಳ ಪ್ರಶ್ನೆಯನ್ನು ನಿರ್ಲಕ್ಷಿಸುತ್ತಿರುವ ರಾಜಕೀಯ ಪಕ್ಷಗಳಿಗೆ ಮುಂದಿನ ಚುನಾವಣೆಗಳಲ್ಲಿ ಪಾಠ ಕಲಿಸಬೇಕು. ದೇಶವ್ಯಾಪಿ ಹೆಚ್ಚುತ್ತಿರುವ ಹಸಿವು ಮತ್ತು ಅಪೌಷ್ಟಿಕತೆಯಿಂದ ಉಂಟಾಗುತ್ತಿರುವ ಸಾವುಗಳನ್ನು ನಿಯಂತ್ರಿಸಲು ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕರಿಸುವುದೇ ಪರಿಹಾರ" ಎಂದು ಅವರು ಹೇಳಿದರು.

ಜಿಲ್ಲಾ ಅಧ್ಯಕ್ಷೆ ಸುಕನ್ಯಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕಿರಣ ಪ್ರಭಾ, ರಾಧಾ ಮೂಡಬಿದ್ರಿ ಮತ್ತಿತರರು ಕಾರ್ಯಕ್ರಮ ನಡೆಸಿಕೊಟ್ಟರು. ಉಪಾಧ್ಯಕ್ಷೆ ಹೇಮಲತಾ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಮೂಡಬಿದ್ರಿ ನಗರ ಸಭಾ ಸದಸ್ಯೆ ರಮಣಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



ಬಿಕ್ಕಟ್ಟು ತಂದ ಪ್ರಮುಖ ಅಪರಾಧಿಗಳು ಭಾರತದ ದೊಡ್ಡ ಕಾರ್ಪೋರೇಟುಗಳೇ!

1991ರಲ್ಲಿ ಭಾರತ ತೆರಬೇಕಾಗಿದ್ದ ಸಾಲಗಳಲ್ಲಿ 45ಶೇ.ದಷ್ಟು ಅಂತರ್ರಾಷ್ಟ್ರೀಯ, ಬಹುಪಕ್ಷೀಯ ಮತ್ತು ದ್ವಿಪಕ್ಷೀಯ ಸಾಲಗಳು. ಈಗ ಈ ಭಾಗ ಕೇವಲ 20ಶೇ.ಕ್ಕೆ ಇಳಿದಿದೆ. ಇಂದು ವಿದೇಶಿ ಸಾಲದಲ್ಲಿ ಅತಿ ದೊಡ್ಡ ಭಾಗವೆಂದರೆ ವಿದೇಶಿ ವಾಣಿಜ್ಯ ಸಾಲಗಳು. 1991ರಿಂದೀಚೆಗೆ ಅದರ ಪಾಲು 12ಶೇ.ದಿಂದ 31 ಶೇ.ಕ್ಕೆ ಏರಿದೆ. ಹೀಗೆ ಇಂದಿನ ಚಾಲ್ತಿ ಖಾತೆ ಕೊರತೆಯ ಬಿಕ್ಕಟ್ಟಿನ ಪ್ರಮುಖ ಅಪರಾಧಿ ಸರಕಾರದ ಖರ್ಚುಗಳನ್ನು ಮತ್ತಷ್ಟು ಕಡಿತ ಮಾಡಿಸಲು ನೆವವಾಗಿ ಬಳಸಲಾಗುವ ಸರಕಾರದ ವಿಪರೀತ ಖರ್ಚಂತೂ ಅಲ್ಲ, ಬದಲಿಗೆ ಭಾರತದ ಕಾರ್ಪೋರೇಟ್ ವಲಯ, ಮುಖ್ಯವಾಗಿ ದೊಡ್ಡ ಕಾರ್ಪೋರೇಟ್‌ಗಳೇ. ಈಗ ಸಾಲದ ಬಲೆಯಲ್ಲಿ ಸಿಲುಕಿರುವುದು ವಾಸ್ತವವಾಗಿ ಭಾರತದ ಕಾರ್ಪೋರೇಟ್ ವಲಯವೇ. ಭಾರತದ ಬಂಡವಾಳಶಾಹಿ ಪ್ರಭುತ್ವ, ತನ್ನ ಸ್ವಭಾವಕ್ಕೆ ಅನುಗುಣವಾಗಿಯೇ ಅದರ ರಕ್ಷಣೆಗೆ ಬಂದಿದೆ, ಅದಕ್ಕಾಗಿ ಆರ್ಥಿಕವನ್ನು ಮತ್ತಷ್ಟು ತೆರೆಯುತ್ತಿದೆ.

ಸೀತಾರಾಂ ಯೆಚೂರಿ

ಇತ್ತೀಚೆಗೆ ಪ್ರಧಾನಮಂತ್ರಿಗಳು ದೇಶ ಈಗ ಕಾಣುತ್ತಿರುವ ಬಿಕ್ಕಟಿನ ಬಗ್ಗೆ ಮತ್ತು ರೂಪಾಯಿಯ ಬೆಲೆ ಇಳಿಯುತ್ತಿರುವ ಬಗ್ಗೆ ಒಂದು ಹೇಳಿಕೆ ನೀಡಿದರು. ಈಗಿನ ಪರಿಸ್ಥಿತಿಯನ್ನು ಭಾರತೀಯ ಆರ್ಥಿಕದ 1991ರ ಬಿಕ್ಕಟ್ಟಿಗೆ ಹೋಲಿಸಲು ಸಾಧ್ಯವಿಲ್ಲ ಎಂದು ಅವರು ಮತ್ತೊಮ್ಮೆ ಹೇಳಿದರು. ಆಗ ರೂಪಾಯಿ ನಿಗದಿತ ದರದಲ್ಲಿತ್ತು. ಈಗ ಅದು ಯಾವ ದರವನ್ನೂ ಹೊಂದಬಹುದು, ಅದು ವಿದೇಶಿ ಕರೆನ್ಸಿಗಳ ಜತೆ ತಳಕು ಹಾಕಿಕೊಂಡಿದೆ ಎಂಬುದು ಅವರು ಇದಕ್ಕೆ ಕೊಟ್ಟಿರುವ ಆಧಾರ. ಅದೀಗ ಯಾವ ಬೆಲೆಯನ್ನೂ ಹೊಂದಬಹುದು, ಮಾರುಕಟ್ಟೆಗೆ ತಳುಕು ಹಾಕಿಕೊಂಡಿದೆಯೆಂದರೆ, ಬೇರೆ ಮಾತುಗಳಲ್ಲಿ, ಮಾರುಕಟ್ಟೆಯೇ ಅಸಮತೋಲವನ್ನು ಸರಿಪಡಿಸಿಕೊಳ್ಳುತ್ತದೆ ಎಂದಾಗುತ್ತದೆ. ಆದ್ದರಿಂದ ರೂಪಾಯಿ ಬೆಲೆ ಡೋಲಾಯಮಾನವಾಗಿದ್ದರೆ ಅದು ಇಂತಹ ಮಾರುಕಟ್ಟೆ ಸರಿಪಡಿಕೆಯ ಫಲಿತಾಂಶವಷ್ಟೇ. ಇದನ್ನು ಉದಾರೀಕೃತ ಆರ್ಥಿಕದ ಒಂದು ಅಂಶ ಎಂದೇ ಸ್ವೀಕರಿಸಬೇಕು; ನಿಜ, ಆಮದಾಗುವ ಬಂಡವಾಳ ಸಲಕರಣೆಗಳ ಖರ್ಚುಗಳು ಹೆಚ್ಚಾದರೆ, ಅದರಿಂದ ಕೈಗಾರಿಕೀಕರಣ ನಕಾರಾತ್ಮಕವಾದರೆ, ನಿರುದ್ಯೋಗ ಹೆಚ್ಚಿದರೆ, ಅದರಿಂದೇನಂತೆ, ಅವೆಲ್ಲದರ ಬಗ್ಗೆ ಅವರಿಗೇನೂ ಕಾಳಜಿ ಇಲ್ಲ.

ಪ್ರಧಾನಿಗಳು ಅಲ್ಲಿಗೇ ನಿಲ್ಲಲಿಲ್ಲ. ಆರ್ಥಿಕದ ಮೂಲಭೂತ ಅಂಶಗಳು ಗಟ್ಟಿಯಾಗಿಯೇ ಇರುವುದರಿಂದ ಭಾರತ ಮತ್ತೆ ಮೊದಲಿನ ಉತ್ತಮ ಸ್ಥಿತಿಗೆ ಮರಳುತ್ತದೆ ಎಂದೂ ಅವರು ಸೇರಿಸಿದರು. ಈ ಸಂದರ್ಭದಲ್ಲಿ ನಾವು ಇದೇ ಅಂಕಣದಲ್ಲಿ ಈ ಹಿಂದೆ ಗಮನಿಸಿದ್ದನ್ನು ನೆನಪಿಸಿಕೊಳ್ಳೋಣ. 1991ರಲ್ಲಿ ಭಾರತದ ಚಾಲ್ತಿ ಖಾತೆ ಕೊರತೆ(ಸಿಎಡಿ ಅಂದರೆ ಆಮದು ಮತ್ತು ರಫ್ತುಗಳ ಮೌಲ್ಯಗಳಲ್ಲಿನ ಅಂತರ) ಜಿಡಿಪಿಯ 2.5ಶೇ. ಇತ್ತು. ಅದೂ ಒಪ್ಪತಕ್ಕಂತದ್ದಲ್ಲ ಎನ್ನಲಾಗಿತ್ತು. ಈಗ ಅದು 4.8 ಶೇ. 1991ರಲ್ಲಿ ಸಾಲ ಮರುಪಾವತಿ ಮತ್ತು ಬಡ್ಡಿ ತೆರಲು ಚಾಲ್ತಿ ಖಾತೆಗೆ ಬಂದುದರ 21ಶೇ. ದಷ್ಟು ಹೋಗುತ್ತಿತ್ತು. ಈಗ ಅದು 35.09ಶೇ.ದಷ್ಟು ಬೇಕು. ಆಗ ಭಾರತದ ವಿದೇಶಿ ವಿನಿಮಯ ಮೀಸಲು ಅತ್ಯಂತ ಕಡಿಮೆಯಿತ್ತು, ಕೇವಲ ಕೆಲವು ವಾರಗಳ ಆಮದಿಗಷ್ಟೆ ಸಾಲುವಂತಿತ್ತು, ಇಂದು ಅದು ಸ್ವಲ್ಪ ಉತ್ತಮ, ಆದರೂ ಕೇವಲ ಆರು ತಿಂಗಳ ಆಮದುಗಳಿಗೆ ತೆರಲು ಸಾಲುವಷ್ಟು ಮಾತ್ರ, 1991ರಲ್ಲಿ ಆವಶ್ಯಕ ಸರಕುಗಳ ಬೆಲೆಯೇರಿಕೆಗಳಿಂದಾಗಿ ವಿಪರೀತ ಹಣದುಬ್ಬರ ಇತ್ತು, ಈಗಲೂ ಪರಿಸ್ಥಿತಿ ಅದಕ್ಕಿಂತ ಕೆಟ್ಟಿರದಿದ್ದರೂ ಸುಮಾರಾಗಿ ಹಾಗೆಯೇ ಇದೆ.

ಬಂಡವಾಳಶಾಹಿ ಪ್ರಭುತ್ವದ ನಗ್ನರೂಪ

1991ರಲ್ಲಿನ ಪರಿಸ್ಥಿತಿಯನ್ನು ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಯುಗಾರಂಭಕ್ಕೆ ಬಳಸಿಕೊಳ್ಳಲಾಯಿತು. ಇಂತಹ ಸುಧಾರಣೆಗಳ ಹಾದಿಯೇ ದೇಶವನ್ನು ಇಂದು ಈ ಸ್ಥಿತಿಗೆ ತಂದು ನಿಲ್ಲಿಸಿದೆ. ಈ ಪ್ರಕ್ರಿಯೆಯಲ್ಲಿ ಭಾರತದಲ್ಲಿ ಬಂಡವಾಳಶಾಹಿ ಪ್ರಭುತ್ವದ ನಿಜ ಸ್ವರೂಪ ಲಂಗುಲಗಾಮಿಲ್ಲದ ಬಂಡವಾಳಶಾಹಿಯನ್ನು ಪ್ರೋತ್ಸಾಹಿಸುವ ಅದರ ಸಕಲ ವೈಭವ ನಗ್ನವಾಗಿ ಪ್ರಕಟಗೊಂಡಿದೆ. ಈಗಿನ ವಿಪರೀತ ಚಾಲ್ತಿ ಖಾತೆ ಕೊರತೆಯ ಸ್ವರೂಪದಿಂದ ಇದನ್ನು ಅರಿತುಕೊಳ್ಳಬಹುದು.

ಈಗ ಕಾಣುತ್ತಿರುವ ವಿಪರೀತ ಕೊರತೆಗಳಿಗೆ, ಅಸಮತೋಲನಗಳಿಗೆ ಸರಕಾರ ಅಗ್ಗದ ಜನಪ್ರಿಯತೆಯ ಕ್ರಮಗಳಲ್ಲಿ ತೊಡಗಿಕೊಂಡು ವಿಪರೀತ ಹಣ ಖರ್ಚು ಮಾಡುತ್ತಿರುವುದೇ ಕಾರಣ ಎಂದು ದೇಶವನ್ನು ನಂಬಿಸಬೇಕೆಂಬುದು ಸುಧಾರಣೆಗಳ ಪಂಡಿತರ ಆಶಯ. ಸಂಸತ್ತು ಇತ್ತೀಚೆಗೆ ಅಂಗೀಕರಿಸಿದ ಆಹಾರ ಭದ್ರತಾ ಮಸೂದೆಯ ವಿರುದ್ಧ ಅಷ್ಟೊಂದು ಆಕ್ರೋಶ ಏಕೆ ಎಂಬುದಕ್ಕೆ ಇಲ್ಲಿಯೇ ವಿವರಣೆ ಸಿಗುತ್ತದೆ. ಇದು ಹಣಕಾಸು ಅಸಮತೋಲಗಳನ್ನು ಇನ್ನಷ್ಟು ಹದಗೆಡಿಸುತ್ತದೆಯಂತೆ.. ನವ-ಉದಾರವಾದಿಗಳಿಗೆ ಜನಗಳು ಹಸಿವಿನಿಂದ ಸಾಯುತ್ತಿದ್ದರೂ ಪರವಾಗಿಲ್ಲ, ಸರಕಾರ ಮಾತ್ರ ಬಂಡವಾಳದ ಹಿತಗಳಿಗೆ ಆದ್ಯತೆ ಕೊಡಬೇಕು. ಮನಮೋಹನ್ ಸಿಂಗ್ ಸರಕಾರದ್ದೂ ಇದೇ ತಿಳುವಳಿಕೆ. ಅದರಿಂದಾಗಿಯೇ ಸಂಸತ್ತು ಆಹಾರ ಮಸೂದೆಯನ್ನು ಅಂಗೀಕರಿಸಿದ ಮರುದಿನವೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಗಮನಾರ್ಹವಾಗಿ ಹೆಚ್ಚಿಸಲಾಗಿದೆ. ಆಮೂಲಕ ಬಡವರಿಗೆ ಕೊಡುವ ಅಲ್ಪ ಸಬ್ಸಿಡಿಗಳನ್ನೂ ಕಡಿತ ಮಾಡುವ ಸಂಕೇತಗಳನ್ನು ನೀಡಿದೆ. ನಿಜ, ಶ್ರೀಮಂತರಿಗೆ ನೀಡುವ ಸಬ್ಸಿಡಿಗಳನ್ನು ಬೆಳವಣಿಗೆಗೆ ನೀಡುವ 'ಪ್ರೋತ್ಸಾಹಕ'ಗಳು ಎಂಬ ಹೆಸರಿನಲ್ಲಿ ಮುಂದುವರೆಸಲಾಗುತ್ತದೆಯಷ್ಟೇ ಅಲ್ಲ, ಅದನ್ನು ಇನ್ನಷ್ಟು ಹೆಚ್ಚಿಸಬಹುದು-ಈಗ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ದರ 1.6ಶೇ.ದಷ್ಟು ಇಳಿಕೆ ತೋರಿಸುತ್ತಿದೆ ಎಂಬುದನ್ನೇ ನೆಪವಾಗಿ ಬಳಸಿಕೊಂಡು.

1991ರ ಬಿಕ್ಕಟ್ಟು ಮತ್ತು ಇಂದಿನ ಬಿಕ್ಕಟ್ಟಿನ ನಡುವೆ ಒಂದು ನಿರ್ಣಾಯಕ ವ್ಯತ್ಯಾಸ ಇದೆ. ಅದು ಭಾರತೀಯ ಪ್ರಭುತ್ವದ ಈ ಸ್ವಭಾವವನ್ನು, ಮತ್ತು ಆರ್ಥಿಕ ಸುಧಾರಣೆಗಳ ದಿಕ್ಕು-ದೆಸೆಯನ್ನು ಪ್ರಕಟಗೊಳಿಸುತ್ತದೆ. 1991ರ ಹಣಕಾಸು ಅಸಮತೋಲನಗಳ ಪ್ರಧಾನ ಕಾರಣ ಸರಕಾರೀ ಖಾತೆಯದ್ದು. ಉದಾಹರಣೆಗೆ ಆಗಿನ ಚಾಲ್ತಿಖಾತೆ ಕೊರತೆಯಲ್ಲಿ ಸುಮಾರು 60ಶೇ. ಸರಕಾರೀ ಸಾಲದಿಂದಾಗಿ ಉಂಟಾಗಿ-ತ್ತು. ಡಾ.. ಮನಮೋಹನ್ ಸಿಂಗ್ ಆಗ ಹಣಕಾಸು ಮಂತ್ರಿಯಾಗಿ ಮುಂದಿಟ್ಟ ಪ್ರಸ್ತಾವವೆಂದರೆ ಸರಕಾರದ ಖರ್ಚುಗಳಲ್ಲಿ ಕಡಿತ ತರುವುದು, ಆಮೂಲಕ ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಹಾಕುವುದು ಮತ್ತು ಆರ್ಥಿಕವನ್ನು ವಿದೇಶಿ ಬಂಡವಾಳ ಹರಿದು ಬರಲು ತೆರೆದು ಕೊಡುವುದು.

ಸಾಲದ ಬಲೆಯಲ್ಲಿರುವವರದ್ದೇ ಕೂಗಾಟ

ಇಂದಿನ ಸನ್ನಿವೇಶ ಸಂಪೂರ್ಣ ಭಿನ್ನ. ಈಗಿನ ಕೊರತೆಯಲ್ಲಿ ಸರಕಾರದ ಖಾತೆಯ ಕೊಡುಗೆ ದೇಶದ ವಿದೇಶಿ ಸಾಲಬಾಕಿಯ ಸುಮಾರು 20ಶೇ. ಮಾತ್ರ. ಇನ್ನೂ ಕೆಟ್ಟ ಸಂಗತಿಯೆಂದರೆ, 1991ರಲ್ಲಿ ಭಾರತ ತೆರಬೇಕಾಗಿದ್ದ ಸಾಲಗಳಲ್ಲಿ 45ಶೇ.ದಷ್ಟು ಅಂತರ್ರಾಷ್ಟ್ರೀಯ, ಬಹುಪಕ್ಷೀಯ ಮತ್ತು ದ್ವಿಪಕ್ಷೀಯ ಸಾಲಗಳು. ಈಗ ಈ ಭಾಗ ಕೇವಲ 20ಶೇ.ಕ್ಕೆ ಇಳಿದಿದೆ. ಇಂದು ವಿದೇಶಿ ಸಾಲದಲ್ಲಿ ಅತಿ ದೊಡ್ಡ ಭಾಗವೆಂದರೆ ವಿದೇಶಿ ವಾಣಿಜ್ಯ ಸಾಲಗಳು. 1991ರಿಂದೀಚೆಗೆ ಅದರ ಪಾಲು 12ಶೇ.ದಿಂದ 31 ಶೇ.ಕ್ಕೆ ಏರಿದೆ. ಹೀಗೆ ಇಂದಿನ ಚಾಲ್ತಿ ಖಾತೆ ಕೊರತೆಯ ಬಿಕ್ಕಟ್ಟಿನ ಪ್ರಮುಖ ಅಪರಾಧಿ ಸರಕಾರದ ಖರ್ಚುಗಳನ್ನು ಮತ್ತಷ್ಟು ಕಡಿತ ಮಾಡಿಸಲು ನೆವವಾಗಿ ಬಳಸಲಾಗುವ ಸರಕಾರದ ವಿಪರೀತ ಖರ್ಚಂತೂ ಅಲ್ಲ, ಬದಲಿಗೆ ಭಾರತದ ಕಾರ್ಪೋರೇಟ್ ವಲಯ, ಮುಖ್ಯವಾಗಿ ದೊಡ್ಡ ಕಾರ್ಪೋರೇಟ್‌ಗಳು.

ಬಿಸಿನೆಸ್ ಲೈನ್ ಪತ್ರಿಕೆಯ ವೆಬ್‌ತಾಣದಲ್ಲಿ ಸಪ್ಟಂಬರ್ 2, 2013ರಂದು ಹಾಕಿರುವ ಒಂದು ವರದಿಯ ಪ್ರಕಾರ ಕಳೆದ ಆರೇ ವರ್ಷಗಳಲ್ಲಿ ಕೇವಲ 10 ದೊಡ್ಡ ಕಾರ್ಪೋರೇಟ್ ಗುಂಪುಗಳ ಒಟ್ಟು ಸಾಲಬಾಕಿ ಆರು ಪಟ್ಟು ಹೆಚ್ಚಳ ದಾಖಲಿಸಿದೆ. ಅವುಗಳಲ್ಲಿ ಐದರ ವಾರ್ಷಿಕ ಚಟುವಟಿಕೆಗಳ ಆದಾಯಗಳು ಅವರ ಸಾಲಗಳ ಮೇಲಿನ ಬಡ್ಡಿ ತೆರಲೂ ಸಾಲವು. ಹೀಗೆ ಸಾಲದ ಬಲೆಯಲ್ಲಿ ಸಿಲುಕಿರುವುದು ವಾಸ್ತವವಾಗಿ ಭಾರತದ ಕಾರ್ಪೋರೇಟ್ ವಲಯವೇ. ಭಾರತದ ಬಂಡವಾಳಶಾಹಿ ಪ್ರಭುತ್ವ, ತನ್ನ ಸ್ವಭಾವಕ್ಕೆ ಅನುಗುಣವಾಗಿಯೇ ಅದರ ರಕ್ಷಣೆಗೆ ಬಂದಿದೆ, ಅದಕ್ಕಾಗಿ ಆರ್ಥಿಕವನ್ನು ಮತ್ತ ಷ್ಟು ತೆರೆಯುತ್ತಿದೆ, ಆಮೂಲಕ ಅವರಿಗೆ ಇನ್ನಷ್ಟು ವಿದೇಶಿ ಸಾಲಗಳು ಲಭ್ಯವಾಗಲು ಅನುಮತಿ ಕೊಡುತ್ತಿದೆ.

ಇದೀಗ ಪ್ರಧಾನ ಮಂತ್ರಿಗಳು ಹೇಳಿದ್ದ ಕಾರ್ಪೋರೇಟುಗಳ 'ಪಶು ಚೈತನ್ಯ'ವನ್ನು ಹರಿಯ ಬಿಟ್ಟುದರ ಫಲಿತಾಂಶ. ಸುಧಾರಣಾ ಧೋರಣೆಗಳು ಈ ಕಾರ್ಪೋರೇಟ್‌ಗಳಿಗೆ ಪ್ರತಿವರ್ಷ 50 ಕೋಟಿ ಡಾಲರುಗಳಷ್ಟು ಹಣವನ್ನು 'ತಂತಾನೇ ಮಂಜೂರು' ಮಾಡುವ ದಾರಿಯ ಮೂಲಕ ಲಭ್ಯಗೊಳಿಸಿದವು. ಅದನ್ನು ಇತ್ತೀಚೆಗೆ 75 ಕೋಟಿ ಡಾಲರಿಗೆ ಏರಿಸಲಾಗಿದೆ. ಆದರೆ ಸರಕಾರ ಈಗ ಹಿಡಿದಿರುವ ದಿಕ್ಕು ಎಂದರೆ, ಒಂದೆಡೆ ಹೊಟ್ಟೆ ಕಟ್ಟಿ ಎಂದು ಜನತೆಗೆ ಹೇಳುವುದು, ಇನ್ನೊಂದೆಡೆಯಲ್ಲಿ ರಕ್ಷಣಾ ಉತ್ಪಾದನೆಯೂ ಸೇರಿದಂತೆ ವಿಮೆ, ಬ್ಯಾಂಕಿಂಗ್, ಪೆನ್ಶನ್ ನಿಧಿ ಇತ್ಯಾದಿ ಎಲ್ಲವುಗಳನ್ನೂ ಇನ್ನಷ್ಟು ವಿದೇಶಿ ಬಂಡವಾಳಗಳು ಹರಿದು ಬರುವಂತೆ ತೆರೆದು ಕೊಡುವುದು. ಇದು ನಮ್ಮ ಆರ್ಥಿಕವನ್ನು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮಾರುಕಟ್ಟೆಗಳ ಅನಿಶ್ಚಿತತೆಗೆ ಮತ್ತಷ್ಟು ಬಲಿಯಾಗುವಂತೆ ಮಾಡುತ್ತದೆ, ಅದೇ ವೇಳೆಗೆ ಜನಗಳ ಬದುಕನ್ನು ಮತ್ತಷ್ಟು ಸಂಕಟಮಯಗೊಳಿಸುತ್ತದೆ.

ಪರ್ಯಾಯ ದಾರಿ

'ಹೊಳೆಯುತ್ತಿರುವ ಭಾರತ', 'ಒಳಿತಿನ ಅನಿಸಿಕೆ' ಇತ್ಯಾದಿ ಘೋಷಣೆಗಳೆಲ್ಲ ಜನತೆ ನುಂಗುವಂತೆ ಮಾಡಿದ, ಈಗಲೂ ನುಂಗುವಂತೆ ಮಾಡುತ್ತಿರುವ ಕಹಿಗುಳಿಗೆಗಳಿಗೆ ನೀಡಿದ್ದ ಸಿಹಿಲೇಪನಗಳಷ್ಟೇ ಎಂಬುದೀಗ ಸ್ಪಷ್ಟವಾಗಿದೆ.

ಈಗಿನ ಸುಧಾರಣಾ ದಿಕ್ಕು-ದೆಸೆಗೆ ನಿಜವಾದ ಪರ್ಯಾಯವೆಂದರೆ; ಈ ಅಂಕಣದಲ್ಲಿ ಮತ್ತೆ-ಮತ್ತೆ ಚರ್ಚಿಸಿರುವ ದಾರಿಯೇ. ಬಡವರ ಸಬ್ಸಿಡಿಗಳನ್ನು ಕಡಿತ ಮಾಡುವ ಬದಲು ಶ್ರೀಮಂತರಿಗೆ ಕೊಡುವ ಸಬ್ಸಿಡಿಗಳನ್ನು ನಿರ್ಮೂಲ ಮಾಡುವುದು, ಆ ಸಂಪನ್ಮೂಲಗಳನ್ನು ಬಹು ಅಗತ್ಯವಾದ ಸಾಮಾಜಿಕ-ಆರ್ಥಿಕ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳನ್ನು ಗಮನಾರ್ಹವಾಗಿ ಹೆಚ್ಚಿಸಲು ಬಳಸುವುದು. ಇದು ದೊಡ್ಡ ಪ್ರಮಾಣದಲ್ಲಿ ಹೊಸ ಉದ್ಯೋಗಗಳನ್ನು ಉಂಟು ಮಾಡುತ್ತದೆ. ಇದರಿಂದ ಜನತೆಯ ಕೈಗಳಲ್ಲಿ ಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ, ಅದರಿಂದ ಆಂತರಿಕ ಬೇಡಿಕೆ ಹೆಚ್ಚುತ್ತದೆ. ಇದು ಉತ್ಪಾದನಾ ಮತ್ತು ಕೈಗಾರಿಕಾ ಬೆಳವಣಿಗೆಗೆ ಉತ್ತೇಜನೆ ನೀಡುತ್ತದೆ, ದೇಶವನ್ನು ಬಹುಕಾಲ ತಾಳಿಕೊಳ್ಳಬಲ್ಲ ಬೆಳವಣಿಗೆಯ ದಾರಿಗೆ ಹಚ್ಚುತ್ತದೆ. ಒಂದು ಉತ್ತಮ ಭಾರತವನ್ನು ನಿರ್ಮಿಸಲು ಅಂಗೀಕರಿಸಬೇಕಾದ ಪರ್ಯಾಯ ದಾರಿ ಇದೇ.

'ಖಾಸಗೀಕರಣ ಕೈಬಿಡಿ– ಬಿಸಿಯೂಟ ನೌಕರರನ್ನು ಖಾಯಂಗೊಳಿಸಿ'

3ನೇ ರಾಜ್ಯ ಸಮ್ಮೇಳನದ ಒಕ್ಕೊರಲ ಆಗ್ರಹ



ಶಾಲೆಗಳಲ್ಲಿ 'ಬಿಸಿಯೂಟ' ಎಂಬುದು ಒಂದು ಪ್ರಗತಿಪರ ಕಲ್ಪನೆ–ಜನಪರ ಯೋಜನೆ. ಶಾಲೆಗೆ ಮಕ್ಕಳನ್ನು ಕರೆತರುವ ನಿಟ್ಟಿನಲ್ಲಿ ಮತ್ತು ಶಾಲೆ ಬಿಡುವ ಪ್ರವೃತ್ತಿ ತಗ್ಗಿಸುವ ನಿಟ್ಟಿನಲ್ಲಿ ಈ ಯೋಜನೆ



ಪರಿಣಾಮಕಾರಿಯಾದದ್ದು. ತಾಯಂದಿರು, ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಬಡತನ–ಅಪೌಷ್ಟಿಕತೆಯಿಂದ ನರಳುತ್ತಿರುವ ಈ ನಮ್ಮ ಸಮಾಜದಲ್ಲಿ ಇಂತಹ ಒಂದು ಯೋಜನೆ ಯಶಸ್ವಿಯಾಗುವುದು ತುಂಬಾ ಮುಖ್ಯ. ಯೋಜನೆ ಯಶಸ್ವಿಯಾಗಬೇಕಾದಲ್ಲಿ ಬಿಸಿಯೂಟ ಸಿದ್ಧಪಡಿಸಿ ಬಡಿಸುವ ಬಿಸಿಯೂಟ ನೌಕರರ ಬದುಕು ಹಸನಾಗಬೇಕು. ದುರದೃಷ್ಟವಶಾತ್ ನಮ್ಮ ಆಳುವ ಸರ್ಕಾರಗಳಿಗೆ ಸಮಾಜದ ಪ್ರಗತಿಯ ಕುರಿತು ಇಂತಹ ಒಟ್ಟು ಕಲ್ಪನೆಯೇ ಇಲ್ಲ. ಅಥವಾ ಅವಕ್ಕೆ ಈ ಕಣ್ಣೋಟ ಬೇಕಿಲ್ಲ. ಅಸಲಿಗೆ ಬಿಸಿಯೂಟ ಯೋಜನೆಯೂ ಬೇಕಿಲ್ಲ. ನ್ಯಾಯಾಲಯದ ಆದೇಶದ ಮೇಲೆ ಇವೆಲ್ಲ ಜಾರಿಗೆ ಬಂದಿವೆ ಎಂಬುದು ಗೊತ್ತಿಲ್ಲದ್ದೇನು ಅಲ್ಲ.

'ಹೋಗು ಎನ್ನಲಾಗದೇ ಹೊಗೆ ಹಾಕಿದರು' ಎಂಬಂತೆ ಇಂತಹ ಮಹತ್ವದ ಯೋಜನೆ ಜಾರಿ ಮಾಡಲು ಬದ್ಧತೆ ಇಲ್ಲದ ಸರ್ಕಾರಗಳು ಅಕ್ಷರ ದಾಸೋಹದ ಯೋಜನೆಯ ಖಾಸಗೀಕರಣಕ್ಕೆ ಮುಂದಾಗಿವೆ. ಬಿಸಿಯೂಟ ನೌಕರರ ಬೇಡಿಕೆಗಳನ್ನು ನಿರ್ಲಕ್ಷಿಸುತ್ತಾ ನಡೆದಿವೆ. ಇಂತಹ ಸಂದರ್ಭದಲ್ಲಿ ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಮೂರನೇ ರಾಜ್ಯ ಸಮ್ಮೇಳನ ಶಿವಮೊಗ್ಗ ನಗರದಲ್ಲಿ ನಡೆದು ಅಕ್ಷರ ದಾಸೋಹ ನೌಕಕರ ಸಮಸ್ಯೆಗಳು, ಆಳುವ ಸರ್ಕಾರದ ಜನವಿರೋಧಿ ಧೋರಣೆಗಳು, ನೌಕರರ ಚಳುವಳಿ ಸಾಗಿ ಮುಂದೆ ಹೋಗಬೇಕಾದ ದಾರಿ ಮುಂತಾದ ನಾನಾ ಪ್ರಶ್ನೆಗಳ ಕುರಿತು ಚರ್ಚಿಸಿತು. ಮತ್ತು ಪ್ರಜಾಸತ್ತಾತ್ಮಕವಾಗಿ ಚಳುವಳಿಯನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಹಾಗು ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಹಲವು ಮಹತ್ವದ ತೀರ್ಮಾನಗಳನ್ನು ಕೈಗೊಂಡಿತು.



'ಕನಿಷ್ಟ ಕೂಲಿ– ಕೆಲಸದ ಭದ್ರತೆ–ಗಾಗಿ, ಖಾಸಗೀಕರಣ ನೀತಿ ವಿರೋಧಿಸಿ' ಶಿವಮೊಗ್ಗ ನಗರದ ಸೆಂಟ್ ಥಾಮಸ್ ಸಮುದಾಯ ಭವನದಲ್ಲಿ ಆಗಸ್ಟ 31 ರಿಂದ ಸೆಪ್ಟೆಂಬರ್ 2 ರವರೆಗೆ ಒಟ್ಟು ಮೂರು ದಿನಗಳ ಕಾಲ ನಡೆದ ಅಕ್ಷರ ದಾಸೋಹ ನೌಕರರ ಮೂರನೇ ರಾಜ್ಯ ಸಮ್ಮೇಳನ ಅಕ್ಷರ ದಾಸೋಹ ನೌಕರರಲ್ಲಿ ಹೊಸ ಉತ್ಸಾಹ ಭರವಸೆ ಮೂಡಿಸಿತು.

ಉತ್ಸಾಹಭರಿತ ಮೆರವಣಿಗೆ

ಆಗಸ್ಟ 31, 2013 ರಂದು ಶಿವಮೊಗ್ಗದ ನಗರದ ಸೈನ್ಸ ಮೈದಾನದಿಂದ ಸೇಂಟ್ ಥಾಮಸ್ ಸಮುದಾಯ ಭವನದ ವರೆಗೆ ನಡೆದ ಆಕರ್ಷಕ ಮೆರವಣಿಗೆಯು ಶಿವಮೊಗ್ಗದ ನಾಗರೀಕರ ಗಮನ ಸೆಳೆಯಿತು. ಮಹಿಳೆಯರು ಬಿಸಿಯೂಟ ಯೋಜನೆಯ ಖಾಸಗೀಕರಣದ ವಿರುದ್ಧ ತಮ್ಮ ಮೇಲಿನ ಅಮಾನುಷ ಶೋಷಣೆಯ ವಿರುದ್ಧ ಗಟ್ಟಿದನಿಯಲ್ಲಿ ಘೋಷಣೆಗಳನ್ನು ಹಾಕುತ್ತಾ ನಡೆದರು. ನಂತರ ಭವನದ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಂಘಟನೆಯ ರಾಜ್ಯ ಅಧ್ಯಕ್ಷೆ ಎಸ್.



ವರಲಕ್ಷ್ಮಿ ನೆರವೇರಿಸಿದರು. ಮಡಿದ ಸಂಗಾತಿಗಳ ನೆನಪಿನ ಹುತಾತ್ಮ ಸ್ಮಾರಕಕ್ಕೆ ಮುಖಂಡರು, ಕಾರ್ಯಕರ್ತರು ಗೌರವ ಸಲ್ಲಿಸಿ ಸಭಾಂಗಣದೊಳಗೆ ನಡೆದರು.

ಶಾಲೆಗಳು ಖಾಯಂ ಆಗಿರುವಂತೆ ಬಿಸಿಯೂಟ ತಯಾರಕರ ಹುದ್ದೆಯೂ ಖಾಯಂ ಆಗಬೇಕು– ವಿಜೆಕೆ ನಾಯರ್

ಸಮ್ಮೇಳನವನ್ನು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರಾದ ವಿಜೆಕೆ ನಾಯರ್ ಅವರು ಉದ್ಘಾಟಿಸಿದರು.

ಶಾಲೆಗಳು ಖಾಯಂ ಆಗಿರುವಂತೆ ಬಿಸಿಯೂಟ ತಯಾರಕರ ಹುದ್ದೆಯೂ ಖಾಯಂ ಆಗಬೇಕು. ಅಪಾರ ಶ್ರಮವಹಿಸಿ ದುಡಿಯುತ್ತಿರುವ ಅಕ್ಷರ ದಾಸೋಹ ಕಾರ್ಮಿಕರನ್ನು ಸರ್ಕಾರ ಗೌರವಧನ ವ್ಯಾಪ್ತಿಯಿಂದ ಹೊರತಂದು ಅವರಿಗೆ ಕನಿಷ್ಠ ರೂ. 10 ಸಾವಿರ ವೇತನ ನೀಡಬೇಕು. ವಿಮೆ, ಪಿಂಚಣಿ ಮತ್ತಿತರ ಸಾಮಾಜಿಕ ಭದ್ರತೆ ಒದಗಿಸಬೇಕು ಎಂದು ವಿಜೆಕೆ ನಾಯರ್ ಆಗ್ರಹಿಸಿದರು.

ಬಿಸಿಯೂಟ ಯೋಜನೆಯನ್ನು ಖಾಸಗೀಕರಣ ಮಾಡಿದರೆ, ಖಾಸಗೀ ಸಂಸ್ಥೆಗಳು ಅದನ್ನು ಲಾಭದ ದೃಷ್ಟಿಯಿಂದಲೇ ನಿರ್ವಹಿಸುತ್ತವೆ. ಆದ್ದರಿಂದ ಯೋಜನೆಯನ್ನು ಸರ್ಕಾರವೇ ನಡೆಸಬೇಕು ಎಂದೂ ಅವರು ಆಗ್ರಹಿಸಿದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಕವಯತ್ರಿ ಸವಿತಾ ನಾಗಭೂಷಣ ಅವರು ಮಾತನಾಡಿ, ಸರಕಾರ ಅಕ್ಷರ ದಾಸೋಹ ಯೋಜನೆಯ ಬಿಸಿಯೂಟ ತಯಾರಕರಿಗೆ ಎಲ್ಲಿ ಸೌಲಭ್ಯ ಕಲ್ಪಿಸಿಕೊಡಬೇಕಾಗುವುದೋ ಎಂಬ ದುರುದ್ದೇಶದಿಂದ ಯೋಜನೆಯನ್ನೇ ಖಾಸಗೀಕರಣ ಮಾಡಲು ಯೋಚಿಸುತ್ತಿದೆ, ಇದು ಸರಿಯಾದ ಕ್ರಮ ಅಲ್ಲ ಎಂದರು.

ಎಸ್. ವರಲಕ್ಷ್ಮಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಘಟನೆ ಅಖಿಲ ಭಾರತ ಮುಖಂಡರಾದ ಎ.ಆರ್. ಸಿಂಧು, ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ್ರಾ, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ಯಮುನಾ ಗಾಂವ್ಕರ್, ಜನವಾದಿ ಮಹಿಳಾ ಸಂಘಟನೆ ಪ್ರಧಾನ ಕಾರ್ಯದರ್ಶಿ ಕೆ. ಎಸ್. ಲಕ್ಷ್ಮಿ, ಸಿಐಟಿಯು ಜಿಲ್ಲಾ ಮುಖಂಡರಾದ ಶಿವಶಂಕರ್, ಹಿರಿಯ ವಕೀಲರು ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಜೆ.ಎಸ್. ನಾಗರಾಜ್ ಮಾತನಾಡಿದರು.

ನಂತರ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಸಂಘಟನೆಯ ಪ್ರ.ಕಾರ್ಯದರ್ಶಿ ಕರಡು ವರದಿ ಮಂಡಿಸಿದರು. ಅದರ ಆಧಾರದಲ್ಲಿ ಜಿಲ್ಲಾವಾರು ಗುಂಪು ಚರ್ಚೆಗಳು 'ಮತ್ತು ಪ್ರತಿನಿಧಿಗಳ ಚರ್ಚೆಗಳು ನಡೆದವು. ಕೊನೆಯಲ್ಲಿ ಪ್ರ. ಕಾರ್ಯದರ್ಶಿ ಚರ್ಚೆಗೆ ಉತ್ತರ ನೀಡಿದರು. ಸಮ್ಮೇಳನ ಅದನ್ನು ಅನುಮೋದಿಸಿತು.

ಸಮ್ಮೇಳನದಲ್ಲಿ ಒಟ್ಟು 22 ಜಿಲ್ಲೆಗಳ 89 ತಾಲ್ಲೂಕುಗಳನ್ನು ಪ್ರತಿನಿಧಿಸಿ 338 ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಮ್ಮೇಳನವು 206 ಜನರ ನೂತನ ರಾಜ್ಯಸಮಿತಿಯನ್ನು ಆಯ್ಕೆ ಮಾಡಿತು. 25 ಜನ ಪದಾಧಿಕಾರಿಗಳನ್ನೊಳಗೊಂಡ ನೂತನ ರಾಜ್ಯಸಮಿತಿಯ ಅಧ್ಯಕ್ಷರಾಗಿ ಕಾಂ. ಎಸ್ ವರಲಕ್ಷ್ಮಿ, ಪ್ರದಾನ ಕಾರ್ಯದರ್ಶಿಯಾಗಿ ಕಾಂ.ಮಾಲಿನಿ ಪಿ. ಮೇಸ್ತ ಹಾಗೂ ಖಜಾಂಚಿಯಾಗಿ ಕಾಂ.ನಾಗರತ್ನ ಆಯ್ಕೆಯಾಗಿದ್ದಾರೆ.

ಸೆಪ್ಟಂಬರ್ 2 ರಂದು ನಡೆದ ಸಮಾರೋಪದಲ್ಲಿ ಎ.ಅರ್. ಸಿಂಧು ಅವರಲ್ಲದೇ ಎಸ್ಎಫ್ಐ ರಾಜ್ಯ ಅಧ್ಯಕ್ಷರಾದ ಅನಂತ ನಾಯಕ್, ಸಿಐಟಿಯು ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿದರು. ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಟಿ. ಲೀಲಾವತಿ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನ ಯಶಸ್ವಿ ಮಾಡಿದ ಸ್ವಾಗತ ಸಮಿತಿಯ ಪದಾಧಿಕಾರಿಗಳು ಹಾಗೂ ಸ್ವಯಂಸೇವಕರಿಗೆ ನೆನಪಿನ ಕಾಣಿಕೆ

ಎನ್‌ಜಿಓಗಳಿಂದ ಬಿಸಿಯೂಟದ ಯೋಜನೆ ಹಿಂದೆ ಪಡೆಯಿರಿ – ವೈ.ಎಸ್.ವಿ. ದತ್ತಾ

ವಿಚಾರ ಸಂಕಿರಣ

ಸೆಪ್ಟೆಂಬರ್ 1 ರಂದು ಬೆಳಿಗ್ಗೆ 'ಶಿಕ್ಷಣ ಕ್ಷೇತ್ರ–ಬಿಸಿಯೂಟ ಯೋಜನೆಯ ಮಹತ್ವ ಮತ್ತು ಸವಾಲುಗಳು' ಎಂಬ ವಿಷಯದ ಕುರಿತು ವಿಚಾರ ಸಂಕಿರಣ – ವೈ. ಎಸ್.ವಿ. ದತ್ತಾ



ಬಿಸಿಯೂಟ ಯೋಜನೆಯಲ್ಲಿ ಸರ್ಕಾರೇತರ ಸಂಸ್ಥೆ(ಎನ್‌ಜಿಓ)ಗಳು ಮೂಗುತೂರಿಸುವುದಕ್ಕೆ ಅವಕಾಶ ನೀಡದೆ, ಈಗಾಗಲೇ ಬಿಸಿಯೂಟ ತಯಾರಿಕೆಯಲ್ಲಿ ತೊಡಗಿರುವ ಎನ್‌ಜಿಓಗಳಿಂದ ಯೋಜನೆಯನ್ನು ಹಿಂಪಡೆಯುವ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬೇಕು ಎಂದು ಜೆಡಿ(ಎಸ್) ಪಕ್ಷದ ಮುಖಂಡರು ಮತ್ತು ಶಾಸಕರೂ ಆದ ವೈ. ಎಸ್.ವಿ. ದತ್ತ ಆಗ್ರಹಿಸಿದರು.



ಸರ್ಕಾರದ ಯೋಜನೆಗಳನ್ನು ಅನುಷ್ಠಾನ ಮಾಡಲು ಅಧಿಕಾರಿ, ವರ್ಗವಿದೆ. ಸಾರ್ವಜನಿಕರ ತೆರಿಗೆ ಹಣವನ್ನು ಜನರಿಗೆ ಯೋಜನೆ ರೂಪದಲ್ಲಿ ವಿತರಿಸಲು ಎನ್‌ಜಿಓಗಳ ಅವಶ್ಯಕತೆ ಇಲ್ಲ. ಎನ್‌ಜಿಓಗಳಿಗೆ ಕೆಳಸ್ತರದವರೆಗೆ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವೂ ಇಲ್ಲ. ಆದ್ದರಿಂದ ಕೂಡಲೇ ಖಾಸಗೀಕರಣ ಪ್ರಕ್ರಿಯೆ ಬಗ್ಗೆ ಆಲೋಚನೆ ಬಿಟ್ಟು ಸಂವಿಧಾನದ ಆಶಯಗಳಿಗೆ ಬದ್ಧವಾಗಿ ಸರ್ಕಾರ ನಡೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

1991–92 ರಲ್ಲಿ ಅಪ್ಪಿಕೊಳ್ಳಲಾದ ಖಾಸಗೀಕರಣ ನೀತಿಗಳು ಖಾಸಗೀಕರಣ ನೀತಿಗಳಿಗೆ ಕಾರನವಾಗಿವೆ. ಮೂಲಭೂತ ತಾತ್ವಿಕ ನಿಲುವುಗಳನ್ನು ತೆಗೆದುಕೊಳ್ಳುವಲ್ಲಿ ವಿಫಲವಾಗಿರುವುದೇ ಸಮಸ್ಯೆಮೂಲ ಎಂದು ದತ್ತಾ ಅವರು ವಿಶ್ಲೇಷಿಸಿದರು.

ಅಕ್ಷರ ದಾಸೋಹ ಯೋಜನೆ ಜಾರಿ ಆಗಿ 12 ವರ್ಷ ಕಳೆದಿವೆ. ಇದಕ್ಕಾಗಿ ಸರ್ಕಾರ 1 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಿದೆ. ಆದರೆ, ಪ್ರತೀ ಮಗುವಿಗೆ ತಗಲಿರುವ ವೆಚ್ಚ ಮತ್ತು ಬಿಸಿಯೂಟ ತಯಾರಕರಿಗೆ ನೀಡುವ ವೇತನ ಇವೆರಡರ ಮೊತ್ತಕ್ಕೂ ಖರ್ಚಾಗಿರುವ 1 ಸಾವಿರ ಕೋಟಿ ಹಣಕ್ಕೂ ಲೆಕ್ಕದಲ್ಲಿ ಹೆಚ್ಚಿನ ವ್ಯತ್ಯಾಸವಿದೆ. ಯೋಜನೆಯ ಸಿಂಹಪಾಲು ಹಣ ಖಾಸಗಿಯವರ ಜೇಬು ಸೇರಿದೆ. ಈ ಬಗ್ಗೆ ತನಿಖೆ ನಡೆಯಬೇಕಿದೆ ಎಂದರು. ಕಾಂಗ್ರೆಸ್ ಖಾಸಗೀಕರಣದ ಜನಕ ಬಿಜೆಪಿ ಪೋಷಕ–ಶ್ರೀರಾಮರೆಡ್ಡಿ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಕಾಂ.ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿ, ಕಾಂಗ್ರೆಸ್ ಖಾಸಗೀಕರಣ ಹುಟ್ಟುಹಾಕಿದ ಪಕ್ಷವಾದರೆ ಬಿಜೆಪಿ ಖಾಸಗೀಕರಣ ಪೋಷಕ ಪಕ್ಷ ಎಂದು ಕಟುವಾಗಿ ಟೀಕಿಸಿದರು.

ಸ್ಥಳೀಯ ಶಿವಮೊಗ್ಗ ಕ್ಷೇತ್ರದ ಶಾಸಕ ಕೆ.ಬಿ. ಪ್ರಸನ್ನಕುಮಾರ ಅವರು ಮಾತನಾಡಿ ಅಕ್ಷರ ದಾಸೋಹ ನೌಕರರ ಸಮಸ್ಯೆ ಬಗ್ಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಜೊತೆ ಸಮಾಲೋಚನೆ ನಡೆಸುತ್ತೇನೆ ಎಂದು ಭರವಸೆ ನೀಡಿದರು.



ರಾಜಕೀಯ ಪ್ರಜ್ಞಾವಂತಿಕೆ ಬೇಕು– ಪಿ.ವಿ.ಲೋಕೇಶ್

ಸಿಪಿಐ ರಾಜ್ಯ ಸಮಿತಿ ಕಾರ್ಯದರ್ಶಿ ಪಿ. ವಿ.ಲೋಕೇಶ್ ಅವರು ಮಾತನಾಡಿ ಎಲ್ಲವನ್ನೂ ಹಣಕಾಸಿನ ಲಾಭ ನಷ್ಟದ ದೃಷ್ಟಿಯಲ್ಲಿ ನೋಡುವ ಪ್ರವೃತ್ತಿ ಹೆಚ್ಚುತ್ತಿದೆ. ಈಗ ಸರ್ಕಾರಗಳಿಗೆ, ಮಾಲೀಕರಿಗೆ 12 ಗಂಟೆ ಕೆಲಸ ಮಾಡುವ ಕಾರ್ಮಿಕರು ಬೇಕು. ಇಂತಹ ದೋರಣೆಗಳ ನಡುವೆ ಕಾರ್ಮಿಕರಿಗೆ ರಜಕೀಯ ಬೇಡ ಎನ್ನಲಾಗುತ್ತದೆ. ಎಲ್ಲ ವಿಭಾಗದ ಜನರಿಗೂ ಹಾಗೆಯೇ ಹೇಳಲಾಗುತ್ತದೆ. ಆದರೆ ಕಾರ್ಮಿಕರು ರಾಜಕೀಯ ಪ್ರಗ್ನೆ ಬೆಳೆಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.



ವೇದಾಂತ ಒಂದು ದಗಾಕೋರ ಸಂಸ್ಥೆ– ಸಿಂಧು

ಅಕ್ಷರ ದಾಸೋಹ ನೌಕರರ ಸಂಘಟನೆ ಅಖಿಲಭಾರತ ಮುಖಂಡರಾದ ಎ.ಆರ್. ಸಿಂಧು ಅವರು ಮಾತನಾಡಿ ಶಿಕ್ಷಣದ ಹಕ್ಕು, ಆಹಾರದ ಹಕ್ಕಿನಂತೆ, ಪೌಷ್ಟಿಕತೆ ಕೂಡ ಮಗುವಿನ ಹಕ್ಕು ಎಂದರು. ದೇಶದಲ್ಲಿ ಮತ್ತು ರಾಜ್ಯದಲ್ಲಿ ಬಿಸಿಯೂಟ ಯೋಜನೆ ಜರಿ ಹೊಣೆ ವಹಿಸಿಕೊಂಡಿರುವ ವೇದಾಂತ ಸಂಸ್ಥೆ ಒಂದು ದಗಾಕೋರ ವಂಚಕ ಕಂಪನಿ. ಕಾರ್ಪೋರೇಟ್ ಕಂಪನಿಗಳು ತೆರಿಗೆ ತಪ್ಪಿಸಿಕೊಳ್ಳುವ ತಂತ್ರಗಳಲ್ಲಿ ಇದು ಕೂಡ ಒಂದು ಎಂದು ಹೇಳಿದರು. ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೆಸ್ತಾ ಮತ್ತಿತರು ಉಪಸ್ಥಿತರಿದ್ದರು.

ಇಸ್ಕಾನ್: ಇಲ್ಲಿ ಅಕ್ಷಯ ಪಾತ್ರೆ ; ಅಲ್ಲಿ ಭಿಕ್ಷಾ ಪಾತ್ರೆ!

ಇಸ್ಕಾನ್ ಸಂಸ್ಥೆಯ ಸ್ವರೂಪವೇ ಗೊತ್ತಾಗುತ್ತಿಲ್ಲ. ಅದೊಂದು ಧಾರ್ಮಿಕ ಸಂಸ್ಥೆಯೇ? ಸಾಮಾಜಿಕ ಸಂಸ್ಥೆಯೇ? ಅಥವಾ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರುವ ಸಂಸ್ಥೆಯೇ? ಯಾವುದೂ ತಿಳಿಯುತ್ತಿಲ್ಲ. ಅಕ್ಷಯ ಪಾತ್ರೆ ಹೆಸರಿನಲ್ಲಿ ಬಿಸಿಯೂಟ ತಯಾರಿಸುತ್ತಿರುವ ಇಸ್ಕಾನ್, ವಿದೇಶದಲ್ಲಿ ಭಾರತೀಯ ಮಕ್ಕಳನ್ನು ಬಡವರಂತೆ ಚಿತ್ರಿಸಿರುವ ಚಿತ್ರಗಳನ್ನು ತೋರಿಸಿ ದೇಣಿಗೆ ಬೇಡುತ್ತಿದೆ. ಇದಕ್ಕೆ ಸರಕಾರದ ಅನುಮತಿಯನ್ನೂ ಪಡೆದಿಲ್ಲ. ಆ ಹಣವನ್ನು ಉತ್ತಮ ಉದ್ದೇಶಗಳಿಗೆ ಬಳಸುತ್ತಲೂ ಇಲ್ಲ ಎಂದು ಶಾಸಕ ದತ್ತ ಆಕ್ರೋಶ ವ್ಯಕ್ತ ಪಡಿಸಿದರು. ಇಂತಹ ಸಂಸ್ಥೆಗೆ ಬಿಸಿಯೂಟ ಯೋಜನೆಯನ್ನು ನೀಡಬೇಕೆ ಎಂದು ಪ್ರಶ್ನಿಸಿದ ಅವರು 'ಇಸ್ಕಾನ್ ಸಂಸ್ಥೆಯದ್ದು ಇಲ್ಲಿ ಅಕ್ಷಯ ಪಾತ್ರೆ ಅಲ್ಲಿ ಭಿಕ್ಷಾ ಪಾತ್ರೆ ಸ್ಥಿತಿ' ಎಂದು ವ್ಯಂಗ್ಯ ಮಾಎಇದರು

ಧಾರ್ಮಿಕ ಸಂಸ್ಥೆ ಇಸ್ಕಾನ್‌ಗೆ ಬಿಸಿಯೂಟ ಅಪಾಯಕರ

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಎಸ್. ವರಲಕ್ಷ್ಮೀ ಮಾತನಾಡಿ, ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆ ಮಾಡಲು ಬಿಸಿಯೂಟ ಯೋಜನೆಯನ್ನು ಜಾರಿಗೆ ತರಲಾಗಿದೆ. ಸ್ಥಳೀಯ ಪದ್ಧತಿಯಂತೆ ಸ್ಥಳೀಯವಾಗಿ ತಯಾರಿಸಿದ ಆಹಾರ ಕೊಡಬೇಕೆಂಬುದು ಮಾರ್ಗದರ್ಶಿ ಸೂತ್ರಗಳ ಒಂದು ಪ್ರಮುಖ ಅಂಶವಾಗಿದೆ ಆದ–ರೆ, ಇಸ್ಕಾನ್ ಮತ್ತು ಇತರ ಎನ್‌ಜಿಓಗಳು ತಯಾರಿಸುವ ಆಹಾರದಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿ ಬಳಸುವುದೇ ಇಲ್ಲ ಯಾಕೆ ಎಂದು ಪ್ರಶ್ನಿಸಿದರು.

ಶಿಕ್ಷಣ ವ್ಯವಸ್ಥೆ, ಶಿಕ್ಷಣ ಸಂಸ್ಥೆಗಳು ಜಾತಿ, ಧರ್ಮ ಆಧಾರಿತವಾಗಿರುವುದು ಅಪಾಯಕರ. ಆದರೆ ಇಸ್ಕಾನ್ ಮುಂತಾದ ಸಂಸ್ಥೆಗಳು ಜಾತಿ, ಧರ್ಮದ ಆಧಾರದಲ್ಲಿ ಕೆಲಸ ಮಾಡುವ ಸಂಸ್ಥೆಗಳು. ಇಂತಹ ಸಂಸ್ಥೆಗಳಿಗೆ ಬಿಸಿಯೂಟ ಯೋಜನೆ ವಹಿಸಬಾರದು. ವಿಧವೆಯರು, ಗಂಡ ತೊರೆದ ಪರಿತ್ಯಕ್ತೆಯರು, ಬಡಜನರು ಮುಂತಾದವರು ಅವಲಂಬಿಸಿರುವ ಯೋಜನೆಯನ್ನು ಯಾವುದೇ ಕಾರಣ–ಕ್ಕೂ ಖಾಸಗೀಕರಣ ಮಾಡಬಾರದು. ಬೆಂಕಿಯ ಮುಂದೆ ಕೆಲಸಮಾಡುವ ಇವರ ಪರಿಶ್ರಮಕ್ಕೆ ನ್ಯಾಯ ಸಿಗಬೇಕು ಎಂದು ಪ್ರತಿಪಾದಿಸಿದರು.

ಶಿಕ್ಷಣಕ್ಕೆ ಜಿಡಿಪಿಯ ಶೇ. 6 ಹಣ ನೀಡಿಕೆ
ಹಾಗೂ
ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ

ಸೆಪ್ಟಂಬರ್-10 :
ವಿದ್ಯಾರ್ಥಿಗಳ ದೆಹಲಿ ಚಲೋ

ಭಾರತ ಸ್ವಾತಂತ್ರ್ಯದ 66ನೇ ವಸಂತವನ್ನು ಪೂರೈಸಿದೆ. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಸರ್ವರಿಗೂ ಶಿಕ್ಷಣವೆಂಬ ಕನಸು ಹಾಗೇ ಉಳಿದಿದೆ. ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆದ ಸ್ವಾತಂತ್ರ್ಯ ಚಳುವಳಿಯ



ಆಶಯವನ್ನೇ ಬುಡಮೇಲು ಮಾಡಿ ದೇಶದ ಶಿಕ್ಷಣ ರಂಗವನ್ನು ಖಾಸಗಿ ಹಾಗೂ ವಿದೇಶಿ ಬಂಡವಾಳದಾರರಿಗೆ ತೆರೆದಿಡಲು ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಹೊರಟಿದೆ.

ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳನ್ನು ಕಡೆಗಣಿಸಿದ ಜಗತ್ತಿನ ಯಾವುದೇ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ದೇಶದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಮುಂದಾಗುತ್ತಿಲ್ಲ. ಪ್ರಸ್ತುತ ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆ ಕೇವಲ ಶೇ.12 ರಷ್ಟು ಮಾತ್ರ. 17 ರಿಂದ 23 ವಯಸ್ಸಿನ 100 ಯುವಜನರಲ್ಲಿ ಶೇ. 90 ರಷ್ಟು ಮಂದಿ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಿಂದ ಹೊರಗಿದ್ದಾರೆ. ಮುಂದುವರಿದ ರಾಷ್ಟ್ರಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆ ಶೇ 45. ರಿಂದ ಶೇ. 85 ರಷ್ಟಿದೆ. ಶಿಕ್ಷಣ ಕ್ಷೇತ್ರಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ದ ಶೇ. 6ರಷ್ಟು ಹಣವನ್ನು ಮೀಸಲಿಡಬೇಕೆಂಬ ಬೇಡಿಕೆ ಹಲವು ದಶಕಗಳಿಂದ ಹಾಗೇ ಉಳಿದಿದೆ. ಈ ಬೇಡಿಕೆ ಕೇವಲ ವಿದ್ಯಾರ್ಥಿ ಸಮುದಾಯದ್ದಲ್ಲ, 1960ರ ದಶಕದಲ್ಲಿ ಕೇಂದ್ರ ಸರ್ಕಾರವೇ ನೇಮಿಸಿದ್ದ ಕೊಥಾರಿ ಆಯೋಗದ ಶಿಫಾರಸ್ಸೂ ಹೌದು. ಸಮಾಜವಾದಿ ಕ್ಯೂಬಾ ದೇಶವು ದೈತ್ಯ ಅಮೆರಿಕದ ಕರಾಳ ದಿಗ್ಬಂಧನ, ದಬ್ಬಾಳಿಕೆಯ ನಡುವೆಯೂ ತನ್ನ ಒಟ್ಟು ಜಿಡಿಪಿಯ ಶೇ.18.7ರಷ್ಟು ಹಣವನ್ನು ಶಿಕ್ಷಣಕ್ಕೆ ವ್ಯಯಿಸುತ್ತಿದೆ. ಅದೇ ರೀತಿ ಕೀನ್ಯಾ – ಶೇ.7, ಮಲೇಷ್ಯಾ ಶೇ. 8.1, ದಕ್ಷಿಣ ಆಫ್ರಿಕಾ ಶೇ. 5.3 ರಷ್ಟನ್ನು ವ್ಯಯಿಸುತ್ತಿವೆ. ಆದರೆ ಭಾರತ ಕೇವಲ 2.6 ರಷ್ಟನ್ನು ಮಾತ್ರ ನೀಡುತ್ತಿದೆ.

1991ರ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಹಾಗೂ ಬಿಜೆಪಿ ನೇತೃತ್ವದ ಎಲ್ಲ ಕೇಂದ್ರ ಸರ್ಕಾರಗಳು ಉದಾರೀಕರಣ, ಜಾಗತೀಕರಣ ನೀತಿಗಳನ್ನು ಜಾರಿಗೊಳಿಸುತ್ತಾ ನಿರಂತರವಾಗಿ ಶಿಕ್ಷಣಕ್ಕೆ ನೀಡುತ್ತಿರುವ ಹಣವನ್ನು ಕಡಿತಗೊಳಿಸಿವೆ. ಬದಲಾಗಿ ಪ್ರತಿ ವರ್ಷ ಬಜೆಟ್‌ನಲ್ಲಿ ಶ್ರೀಮಂತರಿಗೆ ಭಾರೀ ತೆರಿಗೆ ವಿನಾಯಿತಿಗಳನ್ನು ನೀಡುತ್ತಿವೆ. ದೇಶದಲ್ಲಿ ಶಿಕ್ಷಣದ ವ್ಯಾಪಾರೀಕರಣ ಹಾಗೂ ಖಾಸಗೀಕರಣ ನೀತಿಗಳನ್ನು ತೀವ್ರಗೊಳಿಸಲಾಗಿದೆ. ಇದರ ಪರಿಣಾಮ ದೇಶದಲ್ಲಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಶೇ. 63.88 ರವರೆಗೆ ಹೆಚ್ಚಳವಾಗಿದೆ.

ಕೇಂದ್ರದ ಯುಪಿಎ-2 ಸರ್ಕಾರ ಅಧಿಕಾರಕ್ಕೆ ಬಂದ ನಂತರ ಉನ್ನತ ಶಿಕ್ಷಣದ ಮೇಲೆ ಹೊಸ ದಾಳಿಯನ್ನು ಪ್ರಾರಂಭಿಸಿದೆ. ಉನ್ನತ ಶಿಕ್ಷಣದ ನೀತಿ ನಿರೂಪಕ ಸಂಸ್ಥೆಗಳಾದ ಭಾರತ ವೈದ್ಯಕೀಯ ಮಂಡಳಿ (ಎಂಸಿಐ), ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ) ಹಾಗೂ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ) ಮುಂತಾದ ಸಂಸ್ಥೆಗಳನ್ನು ಶಕ್ತಿಹೀನಗೊಳಿಸಿ ಅವುಗಳ ಜಾಗದಲ್ಲಿ ರಾಷ್ಟ್ರೀಯ ಉನ್ನತ ಶಿಕ್ಷಣ ಹಾಗೂ ಸಂಶೋಧನ ಮಂಡಳಿಯನ್ನು ರಚಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಅದಕ್ಕಾಗಿ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಮಸೂದೆ ಪಾರ್ಲಿಮೆಂಟ್‌ನಲ್ಲಿ ಅನುಮೋದನೆಗಾಗಿ ಕಾಯುತ್ತಿದೆ. ಉದ್ದೇಶಿತ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಮಂಡಳಿಯಲ್ಲಿ 7 ಜನ ಸದಸ್ಯರಿದ್ದು ಇಡೀ ದೇಶದ ಶಿಕ್ಷಣ ವ್ಯವಸ್ಥೆ ಹೇಗಿರಬೇಕೆಂದು ನಿರ್ಧರಿಸುವ ಅಧಿಕಾರವನ್ನು ಹೊಂದಿರುತ್ತದೆ. ಇದರಿಂದಾಗಿ ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ಸಂಸತ್ತು ಹಾಗೂ ರಾಜ್ಯ ವಿಧಾನ ಸಭೆಗಳ ಎಲ್ಲಾ ಅಧಿಕಾರಗಳನ್ನು ಮೀರಿ ಈ ಸಂಸ್ಥೆ ನೀತಿಗಳನ್ನು ರೂಪಿಸಬಹುದಾದ ಅಪಾಯ ಎದುರಾಗಿದೆ. ಇದು ಸಂವಿಧಾನಬದ್ಧ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ. ಅಲ್ಲದೇ ಕೇಂದ್ರ ಸರ್ಕಾರ ಸಮಾಜ ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳಿಗಿಂತ ವಿಜ್ಞಾನ ಮತ್ತು ವಾಣಿಜ್ಯ ಕೋರ್ಸುಗಳಿಗೆ ಹೆಚ್ಚು ಆದ್ಯತೆ ನೀಡುತ್ತಿದೆ. ವಿಜ್ಞಾನದ ಕೋರ್ಸುಗಳು ಸೇರಿ ಈ ಕೋರ್ಸುಗಳನ್ನು ನೇರವಾಗಿ ಲಾಭಕೋರ ಮಾರುಕಟ್ಟೆಯ ಅಗತ್ಯಗಳಿಗೆ ಪೂರಕವಾಗಿ ರೂಪಿಸಲಾಗಿದೆ. ಇಡೀ ಶಿಕ್ಷಣ ವ್ಯವಸ್ಥೆಯನ್ನು ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಬೆಳವಣಿಗೆಯ ಅನುಕೂಲಕ್ಕೆ ತಕ್ಕಂತೆ ರೂಪಿಸಲಾಗುತ್ತಿದೆ.

ಇಂತಹ ಎಲ್ಲ ಧಾಳಿಗಳ ಜತೆಯಲ್ಲೇ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗ ನಿರಂತರವಾಗಿ ನಿರಾಕರಿಸುತ್ತಾ ಬಂದ ಪಶ್ಚಿಮಬಂಗಾಳ, ಹಿಮಾಚಲ ಪ್ರದೆ ದೆಹಲಿ ಹಾಗೂ ಕೇರಳ ಸೇರಿದಂತೆ ದೇ ಹಲವಾರು ರಾಜ್ಯಗಳಲ್ಲಿ ವಿದ್ಯಾರ್ಥಿ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಆಳ ಸರ್ಕಾರಗಳು ನಿರಂತರವಾಗಿ ದಾಳಿಗಳ ನಡೆಸುತ್ತಿವೆ. ಪ್ರಜಾಸತ್ತಾತ್ಮಕವ ಚುನಾಯಿತಗೊಂಡ ವಿದ್ಯಾ ಸಂಘಗಳನ್ನು ಸರ್ವಾಧಿಕಾರಿ ಧೋರಣ ಯ ಮೂಲಕ ವಿಸರ್ಜನೆಗೊಳಿಸಿರು ಹಲವು ಉದಾಹರಣೆಗಳಿವೆ. 2000 ಇಸ್ವಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲ ಕಾಯ್ದೆಗೆ ತಿದ್ದುಪಡಿ ತಂದು ರಾಜ್ಯದ ವಿದ್ಯಾರ್ಥಿ ಸಂಘಗಳ ಚುನಾವಣೆಗಳ ರದ್ದುಗೊಳಿಸಲಾಗಿದೆ. ಈ ಮೂಲಕ ಪೆ ಲಿಂಗ್ಡೋ ಸಮಿತಿಯು ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಬೇಕೆಂದು ನೀಡಿ ಶಿಫಾರಸ್ಸನ್ನು ಹಾಗೂ ಸುಪ್ರೀಂಕೋರ್ಟ ನೀಡಿದ್ದ ನಿರ್ದೇಶನವನ್ನು ಧಿಕ್ಕರಿಸಲಾಗಿ ಆದ್ದರಿಂದ ಭಾರತ ವಿದ್ಯಾರ್ಥಿ ಫೆಡರೆ (ಎಸ್‌ಎಫ್‌ಐ) ಇಡೀ ದೇಶಾದ್ಯಂತ ವ್ಯಾ ಪ್ರಚಾರಾಂದೋಲನ ಹಾಗೂ ವಿದ್ಯಾರ್ಥಿ ಹಾಗೂ ಶಿಕ್ಷಕ-ಉಪನ್ಯಾಸಕರ ಸಹಿ ಸಂಗ್ರ ಅಭಿಯಾನ ನಡೆಸುತ್ತಿದೆ. ಶಿಕ್ಷಣಕ್ಕೆ ಒ ರಾಷ್ಟ್ರೀಯ ಉತ್ಪನ್ನದ ಶೇ.6ರಷ್ಟು ಹಣವ ಮೀಸಲಿಡಬೇಕು, ಶಿಕ್ಷಣದ ವಾಪಾರೀಕರ ಹಾಗೂ ಕೇಂದ್ರೀಕರಣ ನೀತಿಗಳ ಕೈಬಿಡಬೇಕು ಹಾಗೂ ವಿದ್ಯಾರ್ಥಿ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಆಗ್ರಹಿ ಖಾಸಗಿ-ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪ ಕೈಬಿಡಬೇಕು, ಶಿಕ್ಷಣ ಹಕ್ಕು ಕಾಯ್ದೆ-2009 ಸಮರ್ಪಕವಾಗಿ ಜಾರಿಗೊಳಿಸಬೇಕು ಎಂ ಒತ್ತಾಯಿಸಿ ಸೆಪ್ಟೆಂಬರ್ 10, 2013 ರಂ ದೆಹಲಿಯ ಸಂಸತ್ ಭವನದ ಮುಂ ಪ್ರತಿಭಟನೆ ನಡೆಸುವ ಮೂಲಕ ಕೇಂ ಸರ್ಕಾರವನ್ನು ಒತ್ತಾಯಿಸಲಿದೆ.

ಮುಖ ಮೈ ಬೆಂದರೂ ಪರಿಹಾರವೆಂಬುದಿಲ್ಲ.

ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಸಂಗಾಪುರ ತಾಂಡದ ಮಹಿಳೆ ಮಾಣಿಬಾಯಿ ಬಿಸಿಯೂಟ ಕೆಲಸಗಾರ್ತಿ. ಎರಡು ವರ್ಷಗಳ ಹಿಂದೆ ಅಡುಗೆ ಮಾಡುವಾಗ ಮೈ ಮೇಲೆ ಬಿಸಿ ಸಾಂಬಾರ್ ಬಿದ್ದು ಮುಖ, ದೇಹದ ಎಡಭಾಗ ಬೆಂದು ಹೋಗಿದೆ. ಸರ್ಕಾರದಿಂದ ಆಕೆಗೆ ಯಾವ ಪರಿಹಾರವು ಸಿಕ್ಕಿಲ್ಲ ಎನ್ನುತ್ತಾರೆ ಅದೇ ತಾಲ್ಲೂಕಿನಿಂದ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಬಂದಿದ್ದ ಅವರ ಪರಿಚಿತರು.



ಮಾಣಿಬಾಯಿ ಒಬ್ಬರೇ ಅಲ್ಲ. ಅಡುಗೆ ಮಾಡುವಾಗ ಸುಡುವ ಗಂಜಿ ಮೈಮೇಲೆ ಬಿದ್ದವರು, ಬೆಂಕಿ ತಾಗಿ ಮೈ ಸುಟ್ಟುಕೊಂಡವರು ಎಷ್ಟೋ ಜನ ಇದ್ದಾರೆ. ಪುಟ 16 ರ ಚಿತ್ರಗಳನ್ನು ನೋಡಿದರೆ ಮಕ್ಕಳ ಪೌಷ್ಟಿಕತೆಗಾಗಿ ದುಡಿಯುವ ಬಿಸಿಯೂಟ ನೌಕರರ ಬದುಕು ಹೇಗೆ ಸುಟ್ಟು ಕರಕಲಾಗುತ್ತಿದೆ ಎಂದು ತಿಳಿಯುತ್ತದೆ. ಸರ್ಕಾರಗಳು ತಮ್ಮ ಬದುಕನ್ನೇ ಅಪಾಯಕ್ಕೆ ಒಡ್ಡಿ ಯೋಜನೆಯ ಯಶಸ್ಸಿಗೆ ಶ್ರಮಿಸುತ್ತಿರುವ ಈ ನೌಕರರ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ವಹಿಸಬೇಕು. ಆರೋಗ್ಯಕರ ಮತ್ತು ಸುರಕ್ಷಾ ವಿಧಾನದ ಅಡುಗೆಯ ಕ್ರಮದ ತರಬೇತಿ, ಸುಸಜ್ಜಿತವಾದ ಅಡುಗೆ ಮನೆ, ದಾಸ್ತಾನು ಕೊಠಡಿ, ಪೂರಕವಾದ ಪರಿಕರ ಸಾಧನ, ಉಡುಪುಗಳು, ಅಪಘಾತ ಆದ ಸನ್ನಿವೇಶದಲ್ಲಿ ಪ್ರಥಮ ಚಿಕಿತ್ಸೆಯ ಅನುಕೂಲ ಮತ್ತು ನಂತರದ ಉತ್ತಮ ಚಿಕಿತ್ಸೆಯ ವ್ಯವಸ್ಥೆ ಹಾಗೂ ಪರಿಹಾರದ ವ್ಯವಸ್ಥೆಗಳನ್ನು ಮಾಡಬೇಕಿದೆ.

ಇವೆಲ್ಲಾ 'ರಗಳೆ'ಯೇ ಬೇಡ ಯೋಜ ಖಾಸಗೀಕರಣ ಮಾಡಿಬಿಡುತ್ತೇವೆ ಎನ್ನುವ ಮಾನವೀಯತೆಯ ಲಕ್ಷಣವಂತೂ ಎಷ್ಟೋ ಸಾರಿ ಅಪಘಾತವಾದ ವಿಷ ತಮ್ಮ ಶಾಲೆಗೆ ಆದ ಅವಮಾನ ಎಂ ಪ್ರಕರಣವನ್ನು ದಾಖಲಿಸಲು ಬಿಡ ಮುಚ್ಚಿ ಹಾಕಲಾಗುತ್ತದೆ. ಇನ್ನು ಪ್ರಕ ದಾಖಲಾದರು ಜಿಲ್ಲಾಪಂಚಾಯತ್‌ನಿ ಪರಿಹಾರ ಪಡೆದು ಕೊಳ್ಳುವುದು ಸುಲ ಕೆಲಸವಲ್ಲ. ಗಾಯದ ತೀವ್ರತೆಯ ಮೆ 30 ಸಾವಿರದವರೆಗೆ ಪರಿಹಾರ, ಶಾ ಅಂಗ ವೈಕಲ್ಯಕ್ಕೆ 75 ಸಾವಿರ ರೂ. ಒಂದು ವೇಳೆ ಸಾವು ಸಂಭವಿಸಿದರೆ 1 ರೂ. ಪರಿಹಾರ ಎಂದಿದ್ದರೂ ಬಹ ಪ್ರಕರಣಗಳಲ್ಲಿ ಪರಿಹಾರ ಎಂಬುದು ಕನ ಗಂಟೆ ಆಗಿದೆ. ಸರ್ಕಾರಗಳು ಈ ಸಮ ಸರಿಯಾದ ಪರಿಹಾರವನ್ನು ಒದಗಿಸಬೆ ಅದನ್ನು ಮಾಡದೇ ಈಗಿನ ಇದೇ ದಾ ಹೋದರೆ ಜನ ಸುಮ್ಮನೆ ಬಿಡ್ವ ಎನ್ನುವುದನ್ನು ಆಳುವವರು ಆದಷ್ಟು ಅರಿತರೆ ಒಳ್ಳೆಯದು.

ಬಿಸಿಯೂಟ ನೌಕರರು: ಕೆಲಸ ಖಂಡುಗ, ಸಂಬಳ ??

- ಆರ್. ರಾಮಕೃಷ್ಣ

ಸರ್ಕಾರಿ ಶಾಲೆಯಲ್ಲಿ ಕೆಲಸ. ಸರ್ಕಾರಿ ೋಜನೆಯಲ್ಲಿ ಕೆಲಸ. ಒಲೆಮುಂದೆ ಿಂತು ಅಡುಗೆಯ ಜೊತೆ ಬೇಯುವ ಕೆಲಸ. ಬೆವರ ಜಳಕದಲ್ಲಿ ತೊಯ್ದು ಹೋಗುವ ಕೆಲಸ. ಕೊಂಚ ನಿಗ ತಪ್ಪಿದರೆ ಮೈ ಕೈ ಸುಟ್ಟುಕೊಳ್ಳುವ ಕೆಲಸ. ಬದುಕು ತೇಯುವ ಕೆಲಸ. ಈ ಪಾಟಿ ಕೆಲಸಕ್ಕೆ ಇವರಿಗೆ ಸಿಗುವ ಪ್ರತಿಫಲವೇನು ? ಬಿಸಿಯೂಟ ನೌಕರರ ಪರಿಶ್ರಮ, ಪಾಡುಗಳೇನು ? ಒಂದು ಸಂದರ್ಶನ ಆಧಾರಿತ ಬರಹ.

ಕೆಲಸ ಖಂಡುಗ, ಸಂಬಳ ?

ಇವರ ಹೆಸರು ಮರಿಯಮ್ಮ. ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಅಂಚೆಸುಗೂರು ಗ್ರಾಮದ ಶಾಲೆಯಲ್ಲಿ ಬಿಸಿಯೂಟ ಸಿದ್ದ ಮಾಡುವ ಮುಖ್ಯ ಅಡುಗೆಯವರು. ಜೊತೆಗಿಬ್ಬರು ಅಡುಗೆ ಸಹಾಯಕಿಯರು ಇದ್ದಾರೆ. ಇವರು ಕೆಲಸಕ್ಕೆ ಸೇರಿದ್ದು 2001 ರಲ್ಲಿ. ಆಗಲೇ 12 ವರ್ಷಗಳಾಗಿ ಹೋದವು. ಮೊದಲ ನಾಲ್ಕು ವರ್ಷ ಸಿಕ್ಕ ಸಂಬಳ ತಿಂಗಳಿಗೆ 600 ರೂಪಾಯಿ. ಆಮೇಲೆ 2–3 ವರ್ಷ ಸಿಕ್ಕಿದ್ದು 750 ರೂ. ಈಗ ಮೂರು ವರ್ಷದಿಂದ ಸಿಗುತ್ತಿರುವ ಸಂಬಳ 1,100 ರೂ. ಅಂತ ಅವರ ನೆನಪು ಹೇಳುತ್ತಿದೆ.



ಮರಿಯಮ್ಮ ಸಿಐಟಿಯು ನೇತೃತ್ವದ ಬಿಸಿಯೂಟ ನೌಕರರ ಸಂಘದ ಮುಖಂಡರು. ಹೀಗಾಗಿ ಅವರ ಮೇಲೆ ಹೆಚ್ಚುವರಿ ಕೆಲಸ ಹೇರುವವರಿಲ್ಲ. ಆದರೂ ಅವರ ಕೆಲಸಗಳನ್ನು ನೋಡಿ. ಬೆಳಿಗ್ಗೆ 9.30 ಕ್ಕೆ ಶಾಲೆಗೆ ಹಾಜರಾಗುತ್ತಾರೆ. 10ರಿಂದ 10.30 ರವರೆಗೆ ನಾನಾ ತರಗತಿಗಳ ಮಕ್ಕಳ ಹಾಜರಾತಿ ಮಾಹಿತಿ ಪಡೆದುಕೊಂಡು ಎಷ್ಟು ಜನಕ್ಕೆ ಅಡುಗೆ ಮಾಡಬೇಕು ಅಂತ ನಿರ್ಧರಿಸುತ್ತಾರೆ. ಆಮೇಲೆ ಅದಕ್ಕೆ ತಕ್ಕಂತೆ ಕೋಣೆಯಿಂದ ರೇಷನ್ ತೆಗೆದು ಅಳತೆ ಮಾಡಿಕೊಡುತ್ತಾರೆ. ಅಡುಗೆ ಮನೆ ಸ್ವಚ್ಛ ಮಾಡಿಸುತ್ತಾರೆ. ಪ್ರತಿದಿನ ಹಲ್ಲುರೀತಿಯ 'ಬುಕ್'ಗಳನ್ನು ಇವರು ಬರೆದು ನಿರ್ವಹಿಸುತ್ತಾರೆ.


ಸಾದಿಲ್‌ವಾರು ಅಂದರೆ ಕ್ಯಾಷ್ ಬುಕ್, ಬಿಸಿಯೂಟ ನೌಕರರ ಹಾಜರಾತಿ ಪುಸ್ತಕ, ದಾಸ್ತಾನುವಹಿ ಪುಸ್ತಕ ಮತ್ತು ವಿದ್ಯಾರ್ಥಿಗಳ ಹಾಜರಾತಿ ಪ್ರಮಾಣದ ದಾಖಲಾತಿ ಪುಸ್ತಕ. ಇಷ್ಟರ ಜೊತೆಗೆ ಇವರು ಅಡುಗೆ ಸಹಾಯಕರೊಂದಿಗೆ ಸೇರಿ ಸಮಯಕ್ಕೆ ಸರಿಯಾಗಿ ಅಡುಗೆ ಸಿದ್ದಮಾಡಿ ಕೊಡಬೇಕು. ಮಕ್ಕಳಿಗೆ ಊಟ ಬಡಿಸಿ, ಪಾತ್ರೆ, ಪಗಡೆ ಎಲ್ಲ ತೊಳೆಸಿ, ಲೆಕ್ಕ ಮಾಡಿ ತೆಗೆದಿರಿಸಿ ಮನೆಗೆ ಹೊರಡುವ ಹೊತ್ತಿಗೆ ವೇಳೆ ಎಷ್ಟಾಗಿರುತ್ತದೆ ಎಂದು ಯಾರಾದರೂ ಊಹಿಸಬಹುದು. ಕೆಲಸ ಇಷ್ಟೇ ಅಲ್ಲ. 12 ಕಿ.ಮೀ. ದೂರದ ದೇವದುರ್ಗಕ್ಕೆ ಹೋಗಿ ತರಕಾರಿ ತರಬೇಕು. ಬೇಗ ಕೆಡದ ಗಟ್ಟಿ ತರಕಾರಿಗಳನ್ನು ಶನಿವಾರ ಸಂತೆಯಿಂದ ತಂದು ಇಟ್ಟುಕೊಳ್ಳುತ್ತಾರಂತೆ. ಆದರೆ ಎಲ್ಲ ತರಕಾರಿಗಳನ್ನು ಹಾಗೇ ಮೊದಲೇ ತಂದು ಇಟ್ಟುಕೊಳ್ಳಲು ಆಗುವುದಿಲ್ಲವಲ್ಲ. ಪರಸ್ಪರ ಸಹಕಾರಗಳ ಮೇಲೆ ಕೆಲವು ಕೆಲಸ ಹಗುರ ಆಗುವುದಿದೆ. ಆದರೂ ಅಡುಗೆ ಅನಿಲದ ಸಿಲಿಂಡರ್ ಬರುವುದು ಇವತ್ತು–ನಾಳೆ ಅಂತ ಹೊಯ್ದಾಡುತ್ತಾ ಇರುವಾಗ ಇವರೇ ದೂರದ ದೇವದುರ್ಗಕ್ಕೆ ಹೋಗಿ ಅದನ್ನೂ ತರಬೇಕು.

ದುಡಿದು ಉಣ್ಣುವ ಮನಸ್ಸು

ಇನ್ನು ಇವರ ಕುಟುಂಬದ ಕೆಲವು ಮಾಹಿತಿಗಳನ್ನು ನೋಡಿ. ಬೆಂಗಳೂರು ನಗರದ ಮಧ್ಯಮ ವರ್ಗದ ಕುಟುಂಬಗಳಲ್ಲಿ ಕಾಲೇಜು ವಿದ್ಯಾರ್ಥಿಯೊಬ್ಬನಿಗೆ ಸಿಗುವ ತಿಂಗಳ 'ಪಾಕೆಟ್ ಮನಿ'ಯಷ್ಟೂ ಇಲ್ಲದ ಈ ತಿಂಗಳ ಸಂಬಳ ಎಷ್ಟು ಜೀವಗಳ ಹಸಿವು ತಣಿಸೀತು. ತಾಯಿ, ತಮ್ಮ, ತಮ್ಮನ ಹೆಂಡತಿ, ಮನೆಯ ಮಕ್ಕಳು. ತಾಯಿ ದೇವದಾಸಿಯಾಗಿದ್ದವರು. 'ನಮ್ಮ ತರ ನಮ್ಮ ಮಕ್ಕಳು ಆಗುವುದಕ್ಕೆ ಬಿಡುವುದಿಲ್ಲ' ಅಂತ ಆ ತಾಯಿ ಹಠ ತೊಟ್ಟು ಮಕ್ಕಳನ್ನು ಒಂದು ಹಂತಕ್ಕೆ 'ದಡ ಮುಟ್ಟಿಸಿದ್ದಾಳೆ'. ಮಕ್ಕಳಿಗೆ ದುಡಿದು ಉಣ್ಣುವ ಮನಸ್ಸು. ತಮ್ಮ ಜೊತೆಗೆ ಇದ್ದಾನೆ. ಆದರೆ ಅನಾರೋಗ್ಯ. ತಿಂಗಳಿಗೆ 400 ರೂಪಾಯಿ ಔಷಧಿಗೇ ಬೇಕು. ತಮ್ಮ ಆದಷ್ಟು, ಆತನ ಹೆಂಡತಿ ಒಂದಷ್ಟು ಕೂಲಿನಾಲಿ ಮಾಡುತ್ತಾರೆ. ಹೇಗೋ ಬದುಕಿನ ನಾವೆ ಜೀಕಬೇಕು.

ಕರಗಿ ಸೊರಗಿ ಕೈ ಸೇರುವ ಸಂಬಳ

ಲಲಿತಮ್ಮ ಕೋಲಾರ ಜಿಲ್ಲೆ ಬಂಗಾರ ಪೇಟೆಯ ಹುಲಿಬೆಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎರಡನೇ ಅಡುಗೆ ಸಿಬ್ಬಂದಿ. ಮೊದಲಿಗೆ ಅವರು ಬೆಳಿಗ್ಗೆ 10.30 –11.00 ಕ್ಕೆ ಶಾಲೆಗೆ ಬರುತ್ತಿದ್ದರು. ಈಗ ಶಾಲೆಯಲ್ಲಿ ಮಕ್ಕಳಿಗೆ 'ಕ್ಷೀರ ಭಾಗ್ಯ' ಯೋಜನೆ ಆರಂಭವಾಗಿದೆ. ಶಾಲಾ ಮಕ್ಕಳಿಗೆ ಹಾಲು ನೀಡುವ ಯೋಜನೆ ಒಳ್ಳೆಯದೇ. ಆದರೆ ಈ ಹೆಚ್ಚುವರಿ ಕೆಲಸಕ್ಕಾಗಿ ನೌಕರರಿಗೆ ಬಂದ 'ಭಾಗ್ಯ' ನೋಡಿ. ಸಂಬಳದಲ್ಲಿ ತಿಂಗಳಿಗೆ ನೂರು ರೂಪಾಯಿ ಹೆಚ್ಚಳವಂತೆ !!! ವಾರಕ್ಕೆ ಮೂರು ದಿನ ಮಕ್ಕಳಿಗೆ ಹಾಲಿನ ಪುಡಿ ಕಲಸಿ ಹಾಲು ಸಿದ್ದ ಮಾಡಿ ಕೊಡಬೇಕು. ಹೀಗಾಗಿ 9.30 ಕ್ಕೆ ಶಾಲೆಗೆ ಹಾಜರಾಗಿರಬೇಕು.



ಹೇಳಿ ಕೇಳಿ ಕೋಲಾರ ಬರದ ನಾಡು. ಬೇಸಿಗೆ ರಜೆ ಅವಧಿಯಲ್ಲೂ ಬಿಸಿಯೂಟ ಯೋಜನೆ ಮುಂದುವರಿಸಿ ಅಂತ ಬೇಡಿಕೆ ಬಂತು. ನೌಕರರ ಮೂರು ತಿಂಗಳ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ಸಂಬಳವು ಲೆಕ್ಕದಲ್ಲಿ 4,000 ಅಂತ ತೋರಿಸುತ್ತಿದ್ದರೆ, ಇವರ ಕೈಗೆ ದಕ್ಕಿದ್ದು 3,500 ರೂಪಾಯಿ ಮಾತ್ರ. 500 ರೂಪಾಯಿ ಬೇಸಿಗೆ ಕಾಲದ 'ಐಸ್ ಕ್ರೀಂ'ನಂತೆ ಕರಗಿ ಹೋಗಿತ್ತು.

ತೂಕವಿಲ್ಲದ 'ಹಗುರ' ಅಕ್ಕಿ, ಬೇಳೆ ಚೀಲಗಳು

50 ಕೆ.ಜಿ.ಯದು ಅಂತ ಕೊಡುವ ಬೇಳೆ, ಅಕ್ಕಿ ಚೀಲದಲ್ಲಿ 40 ಕೆ.ಜಿ. ಕೆಲವೊಮ್ಮೆ 30 ಕೆ.ಜಿ. ಅಷ್ಟೆ ಅಕ್ಕಿ, ಬೇಳೆ ಇರುತ್ತದೆ. ತೂಕ ನೋಡಿ ತೆಗೆದುಕೊಳ್ಳಲು ಗೋದಾಮಿನ ಮೇನೇಜರ್ ಅವಕಾಶವನ್ನೇ ಕೊಡುವುದಿಲ್ಲ ಅಂತ ನೋವು ತೇೂಡಿಕೊಂಡ ಆ ಮಹಿಳೆಯ ಹೆಸರು ಜಯಶ್ರೀ ಅಂತ. ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕೊಳ್ಳೂರು ಗ್ರಾಮದ ಶಾಲೆಯಲ್ಲಿ ಮುಖ್ಯ ಅಡುಗೆ ಸಿಬ್ಬಂದಿ ಈಕೆ. ಲಾರಿ ಊರಿಗೆ ಬರುವುದು ವಾರಗಟ್ಟಲೆ ತಡವಾಗುತ್ತದೆ. ಬಹಳಷ್ಟು ಸಾರಿ 20 ಕಿ.ಮಿ. ದೂರದ ಚಂದಾಪುರದ ಗೋದಾಮಿಗೆ ಹೋಗಿ ದಾಸ್ತಾನು ತರಬೇಕು. ಅಟೋಗೆ 300–400 ರೂಪಾಯಿ ಖರ್ಚು ಬರುತ್ತದೆ. ಇದು ಅಧಿಕೃತ ಲೆಕ್ಕಕ್ಕಿಲ್ಲ. ನಿಬಾಯಿಸುವುದು ಹೇಗೆ ಎಂಬುದು ಅವರ ಚಿಂತೆ. ತರಕಾರಿಗೆ ಹಣ ಮುಂಚೆ ಸಿಗುವುದಿಲ್ಲ. ಕೈಯಿಂದ ಹಾಕಬೇಕು. ಇಲ್ಲ ಸಾಲ ಮಾಡಿ ಅಡುಗೆ ಮಾಡಿ ಹಾಕಬೇಕು. ನಂತರ ತೆಗೆದುಕೊಳ್ಳಬೇಕು. ನೆರೆಯ ಊರಿನ ಶಾಲೆಯೊಂದರ ಬಿಸಿಯೂಟದಾಕೆ ಹೀಗೆ 'ಕಿವಿಯಾಗಿನ ಓಲೆ ಒತ್ತೆ ಇಟ್ಟು' ತರಕಾರಿ, ಸಾಮಾನು ತಂದು ಅಡುಗೆ ಮಾಡಿಸಿ ಹಾಕಿದರಂತೆ. 'ಬೇಸಿಗೆ ರಜೆ ಎಲ್ಲಿಂದ ಊಟ ಹಾಕಿಸಿದಿರಿ ?!' ಅಂತ ಮೇಲಿನವರು ಎರಡು ತಿಂಗಳ ದಾಸ್ತಾನು ಮತ್ತು ತರಕಾರಿ ಹಣವನ್ನೇ ಕೊಡಲಿಲ್ಲವಂತೆ. ಒಂದು ಒಳ್ಳೆಯ ಯೋಜನೆಯೊಳಗೆ ಒಳಗೆ ಇರುವ ಅನುಕೂಲ ಬಳಸಿಕೊಂಡು ಮಕ್ಕಳಿಗೆ ಮುಟ್ಟಬೇಕಾದದ್ದನ್ನು ಅತ್ಯಂತ ವ್ಯವಸ್ಥಿತವಾಗಿ ನಡುವೆಯೇ ಮುಕ್ಕುವ ಈ ಹೆಗ್ಗಣಗಳ ವಿರುದ್ಧ ಕುದಿಯುತ್ತಿರುವ ಈ ಮಹಿಳೆಯರು ಲೂಟಿಕೋರರನ್ನು ಸುಮ್ಮನೆ ಏನೂ ಬಿಟ್ಟಿಲ್ಲ. ಸರಿಯಾದ ಜಾಗದಲ್ಲಿ 'ಬೋನು' ಇಟ್ಟಿದ್ದಾರೆ.



ಜಯಶ್ರೀ ಇಬ್ಬರು ಮಕ್ಕಳ ತಾಯಿ. ಗಂಡ ಇಲ್ಲ. ಏಳು ವರ್ಷಗಳ ಹಿಂದೆ ಕುಟುಂಬ ವೈಷಮ್ಯಕ್ಕೆ ಬಲಿಯಾಗಿ ಕೊಲೆಯಾಗಿ ಹೋದನಂತೆ. ತಂಗಿ ಇದ್ದಾಳೆ–ಗಂಡ ಜೊತೆಗಿಲ್ಲ. ಒಬ್ಬ ಬುದ್ಧಿಮಾಂದ್ಯ ಮಗುವನ್ನು ಬಿಟ್ಟು ಅವ 'ಎದ್ದು' ಹೋಗಿದ್ದಾನೆ. ಆದರೆ ಈ ತಾಯಿ ಹಾಗೆ ಮಾಡಬಹುದೇ ? ಜಯಶ್ರೀ ಕೆಲಸ ಮಾಡುವುದು–ಸರ್ಕಾರಿ ಶಾಲೆಯಲ್ಲಿ. 'ಸರ್ಕಾರಿ ಶಾಲೆಯಲ್ಲಿ' ಅಂದ ತಕ್ಷಣ ಅದು 'ಸರ್ಕಾರಿ ಕೆಲಸ' ಅಂದ ಹಾಗೆ ಅನಿಸುತ್ತದೆ. ಆದರೆ ಇವರು ಸರ್ಕಾರಿ ನೌಕರರಲ್ಲ. ಬಹುಶಃ ತಾನು ಸರ್ಕಾರಿ ನೌಕರಳಾಗಿದ್ದರೆ ಸಿಗಬಹುದಾಗಿದ್ದ ಸಂಬಳದ ಇಪ್ಪತ್ತನೇ ಒಂದು ಪಾಲು ಮಾತ್ರ ಆಕೆಗೆ ಸಿಗುತ್ತಿರುವುದು. ಅಯ್ಯೋ ಏನನ್ಯಾಯ.!!

ಕಣ್ಣು ಚುಚ್ಚುತ್ತದೆ

ಶಾಲೆಯ ಹೆಸರು 'ಬೇಡ' ಮತ್ತು ಊರ ಹೆಸರು ಸಹ 'ಬೇಡ'. ಆದರೆ ಈ ಹಲವು ವಿವರಗಳು ಅಗತ್ಯವಾಗಿ 'ಬೇಕು'. ಆ ವಿದ್ಯಾವಂತ ಯುವತಿಗೆ ತಂದೆ ತೀರಿಕೊಂಡ ಅನುಕಂಪದ ಮೇಲೆ ಶಾಲೆಯಲ್ಲಿ ಮುಖ್ಯ ಅಡುಗೆ ಸಿಬ್ಬಂದಿಯ ಕೆಲಸ ಸಿಕ್ಕಿದೆ. ಸ್ವಲ್ಪ ದೊಡ್ಡ ಶಾಲೆಯಾದ್ದರಿಂದ ಮತ್ತೂ ಮೂವರು ಸಹಾಯಕಿಯರಿದ್ದಾರೆ. ಅನ್ಯಾಯ ಎಂದರೇನೆಂಬ ಅರಿವು ಸ್ಪಷ್ಟ ಇರುವುದರಿಂದ ಎಲ್ಲವೂ ಕಣ್ಣು ಚುಚ್ಚುತ್ತದೆ.

ಈ ಶಾಲೆಯ ಅಡುಗೆ ಸಹಾಯಕಿಯರು ಬೆಳಿಗ್ಗೆ 8.00 ಗಂಟೆಗೆ ಶಾಲೆಗೆ ಹಾಜರಾಗಬೇಕು. ಅಡುಗೆ ಮಾಡಿ ಬಡಿಸುವ ಕೆಲಸವಂತೂ ಬಿಡುವಿಲ್ಲದಂತೆ ಇದ್ದದ್ದೇ. ಜೊತೆಗೆ ಶಾಲೆಯ ಕಸ ಗುಡಿಸಬೇಕು. ಪುರುಷರ ಶೌಚಾಲಯ, ಮಹಿಳಾ ಶೌಚಾಲಯ ಸ್ವಚ್ಛ ಮಾಡಬೇಕು. 15 ದಿನಗಳಿಗೊಮ್ಮೆ ಎಲ್ಲ ಶಾಲಾ ಕೊಠಡಿಗಳನ್ನು ತೊಳೆಯಬೇಕು. ಶಾಲೆಗೆ ಹೊಸ ಕಟ್ಟಡದ ಕೆಲಸ ಪಕ್ಕದಲ್ಲೆ ನಡೆಯುತ್ತಿದೆ. ಅದು ಒಂದು ವರ್ಷದಿಂದ. ಕಟ್ಟಡಕ್ಕೆ ನೀರು ಹಾಕಬೇಕು. ಶಾಲೆಯ ಅಂಗಳದ ಹುಲ್ಲು ಕೊಯ್ದು ಹಾಕಬೇಕು. ಪ್ರತಿದಿನ ಶಿಕ್ಷಕರ ಊಟದ ಡಬ್ಬಿ ತೊಳೆದುಕೊಡಬೇಕು. ತೊಳೆಯಲು 'ಉಸುಕು' ಹಾಕುವಂತಿಲ್ಲ. ಸ್ಟೀಲ್ ಡಬ್ಬಿಗಳ ಮೇಲೆ ಗೆರೆ ಬೀಳಬಾರದಲ್ಲ !!. ಪ್ರತಿ ಶನಿವಾರ ಶಿಕ್ಷಕರು–ಸಿಬ್ಬಂದಿಗೆ 'ಒಳ್ಳೆಯ ಟಿಫನ್' ಮಾಡಿಸಬೇಕು.

ಓಹ್. ಈ ಅಡುಗೆ 'ಸಹಾಯಕಿ'ಯರದು ಏನು ಅಸಹಾಯಕ ಬದುಕು. 60 ವರ್ಷದ '.. ..ಮ್ಮ'ನ ಗಂಡ ಇಲ್ಲ. ಮಗ ಕುಡಿದು ತಿರುಗುತ್ತಾನೆ. 'ಸ.. ..'ಳ ಗಂಡ ಕುಡಿದು ಬಂದು ಹೊಡೆಯುತ್ತಾನೆ. ಮನೆ ಬಿಟ್ಟು ಹೋಗು ಅನ್ನುತ್ತಾನೆ. 35 ವರ್ಷದ 'ನ.. ..ಮ್ಮ'ಳಿಗೆ ಗಂಡನ ಕಾಟ ಇಲ್ಲ. ಅವ ಎಂದೋ 'ಬಿಟ್ಟು ಹೋಗ್ಯಾನ'. ಇವರೆಲ್ಲ ಶಾಲೆಬಿಟ್ಟು ಮನೆಗೆ ಹೊರಡುವಾಗ ದಿನವೂ ಸಂಜೆ ಆರು ಆಗುವುದಂತೆ. ವಾಸ್ತವವಾಗಿ ಈ ಮಹಿಳೆಯರಿಗೆ ತಾವು ಮಾಡುವ ನೌಕರಿ ಧೈರ್ಯ ಕೊಡಬೇಕಿತ್ತು. ಪೂರ್ಣ ಕೊಡುತ್ತಿಲ್ಲ. ಆದರೆ ಮುಖ್ಯ ಅಡುಗೆಯಾಕೆ ಆ ವಿದ್ಯಾವಂತ ಹುಡುಗಿ ತನ್ನ ಅಡುಗೆ ಸಹಾಯಕಿಯರಿಗೆ ಧೈರ್ಯ ಕೊಡುತ್ತಾಳೆ.

ಪುಟ 15 ಕ್ಕೆ

ಹಂತಕನ ಬಂಧನಕ್ಕೆ ಪೊಲೀಸರಿಗೇಕೆ ಮುಲಾಜು? ಹೆಂಡತಿ, ಮಗುವ ಕೊಂದವನ ವಿರುದ್ಧ ಕೋಲಾರದಲ್ಲಿ ಆಕ್ರೋಶದ ಕಿಡಿ



ಸಚಿತ್ರ ವರದಿ: ವೀಕ್ಷಕ

ಈ ವರದಿಯೊಂದಿಗೆ ಪ್ರಕಟವಾಗಿರುವ ಮುದ್ದು ಕಂದನ ಮೊಗವನೊಮ್ಮೆ ನೋಡಿ. ಈ ಪುಟ್ಟ ಮಗುವಿಗೆ ಒಂದೇಟು ಹೊಡೆಯಲಾದರೂ ಯಾರಿಗಾದರೂ ಮನಸ್ಸು ಬಂದೀತೇ, ನೀವೇ ಹೇಳಿ. ಹೌದಲ್ಲವೇ. ಒಂದು ಏಟು ಹೊಡೆದು ಅಳಿಸಲೂ ಬಾರದಾದ ಈ ಪುಟ್ಟ ಕಂದಮ್ಮನ ಬಾಳು ಸ್ವತಃ ತನ್ನ ತಂದೆಯ ಸ್ತ್ರೀ ವಿರೋಧಿ ದೌರ್ಜನ್ಯಕ್ಕೆ ಮುರುಟಿ ಹೋಗಿದೆ, ವರದಕ್ಷಿಣೆಯ ಭೂತಕ್ಕೆ ಬಲಿಯಾದ ತನ್ನ ತಾಯಿಯ ಜತೆ. ಹೌದು. ಇಲ್ಲಿ ಕಾಣಿಸುವ ಇನ್ನೊಂದು ಭಾವಚಿತ್ರ ಈ ಪುಟ್ಟ ಮಗುವಿನ ತಾಯಿಯದ್ದು.


ಇವರಿಬ್ಬರೂ 2013 ಜುಲೈ 10 ರಂದು ಕೋಲಾರದ ಕೀಲುಕೋಟೆಯಲ್ಲಿ ಸ್ತ್ರೀವಿರೋಧಿ ಧೋರಣೆ, ವರದಕ್ಷಿಣೆ ದಾಹ ಮಾತ್ರವಲ್ಲದೆ ಜೀವವಿರೋಧಿ ದುರುಳನೊಬ್ಬನ ಕ್ರೌರ್ಯಕ್ಕೆ ಬಲಿಯಾದ ನತದೃಷ್ಟರು. ಹೆಸರು: ಸಿ.ಬಿ. ವೀಣಾ (27 ವರ್ಷ) ಮತ್ತು ಈ ಭೂಮಿಯ ಮೇಲೆ ಪ್ರಕಾಶಿಸಬೇಕಾಗಿದ್ದ ಆಕೆ-ಯ ಮಗು ಎರಡು ವರ್ಷದ ದೀಪ್ತಿ. ಹೆಂಡತಿ ಮಗುವನ್ನು ಹತ್ಯೆಗೈದು ಹೆತ್ತವರು, ಬಂಧುಗಳು ಮಾತ್ರವಲ್ಲದೆ ಮಾನವತೆ ಉಳ್ಳವರ 'ಸಂತೋಷ'ವನ್ನು ಕಿತ್ತುಕೊಂಡ ದುರುಳನ ಹೆಸರು ಎಸ್. ಕೆ. ಸಂತೋಷ್‌ಕುಮಾರ್; ಹೊಸಕೋಟೆ ತಾಲೂಕು ಸೂಲಿಬೆಲೆಯ ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನ ಲೈಬ್ರೇರಿಯನ್.


2013 ರ ಜುಲೈ 10 ರಂದು ಹೆಂಡತಿ ಮತ್ತು ಮಗುವನ್ನು ಕೊಂದ ಈ ನರರಾಕ್ಷಸ ಮಾತ್ರ ಇನ್ನೂ ಕಾನೂನಿನ 'ಕೈ'ಗೆ ಸಿಕ್ಕಿಲ್ಲ. ಘೋರ ಪಾತಕದಲ್ಲಿ ಭಾಗಿಯಾದ ಆತನ ತಂದೆ, ತಾಯಿ, ಸಹೋದರಿ ಮತ್ತಿತರ ಬಂಧುಗಳು ಜಾಮೀನು ಮೇಲೆ ಹೊರಗಿದ್ದು ದುಃಖತಪ್ತ ಕುಟುಂಬದವರನ್ನು ಬೆದರಿಸುತ್ತಾ ರಾಜಾರೋಷವಾಗಿ ಹಾಯಾಗಿ ಓಡಾಡಿ-ಕೊಂಡಿದ್ದಾರೆ.

ವೀಣಾ ಅವರ ತಂದೆ ಬೀರಪ್ಪ ಶಿಕ್ಷಣ ಇಲಾಖೆಯ ನೌಕರರು. ತಾಯಿ ಸುನಂದಮ್ಮ. ಸರಕಾರಿ ಕಾಲೇಜ್‌ನಲ್ಲಿ ಗ್ರಂಥಪಾಲಕನಾಗಿರುವ ಸಂತೋಷ್‌ಕುಮಾರ್‌ನಿಗೆ ಸಾಕಷ್ಟು ಒಡವೆ, ಹಣ, ಬೆಂಗಳೂರಿನಲ್ಲಿ ಸೈಟು, ಉದ್ಯೋಗಕ್ಕಾಗಿ ಓಡಾಡಿಕೊಂಡಿರಲು ಅನುಕೂಲವಾಗುವಂತೆ ಬಾಡಿಗೆ ಮನೆ ವ್ಯವಸ್ಥೆ ಇತ್ಯಾದಿಗಳೆಲ್ಲ ಅನುಕೂಲ ಕಲ್ಪಿಸಿ ಬೀರಪ್ಪ-ಸುನಂದಮ್ಮ ತಮ್ಮ ಮಗಳ ಮದುವೆ ಮಾಡಿಸಿದ್ದರು.

ಆದರೆ, ಹಣದ ತೀರದ ದಾಹದಿಂದಾಗಿ ಸಂತೋಷ್ ಮತ್ತು ಆತನ ಮನೆಯವರು ವೀಣಾರನ್ನು ಸತತವಾಗಿ ಪೀಡಿಸುತ್ತಾ ಇನ್ನಷ್ಟು ವರದಕ್ಷಿಣೆ ತರುವಂತೆ ಹಿಂಸಿಸುತ್ತಿದ್ದರು. ಅನೇಕ ಬಾರಿ ಬಂಧುಗಳು ರಾಜಿ ಪಂಚಾಯತಿಯನ್ನೂ ಮಾಡಿದ್ದರು. ಆದರೆ ಧನಪಿಶಾಚಿಗಳ ಮೇಲೆ ಅದ್ಯಾವುವೂ ಪರಿಣಾಮ ಬೀರಿರಲಿಲ್ಲ.

ಎರಡು ವರ್ಷದ ಹಿಂದೆ ವೀಣಾ ಹೆಣ್ಣು ಮಗುವಿಗೆ ಜನ್ಮ ನೀಡಿದ ನಂತರ ಗಂಡ ಹಾಗೂ ಮನೆಯವರ ಕಾಟ ಹೆಚ್ಚಾಯಿತು. ಹೆಣ್ಣಿಗೆ ಜನ್ಮ ನೀಡಿದ್ದೇ ದೊಡ್ಡ ಅಪರಾಧವೆಂಬಂತೆ ಮನೆಯ ಹೆಂಗಸರೂ ಸೇರಿದಂತೆ ಎಲ್ಲರೂ ವೀಣಾರನ್ನು ಕಾಡಿದರು.





ಗಂಡು ಸಂತಾನಕ್ಕಾಗಿ ತಾನು ಬೇರೆ ಮದುವೆ ಮಾಡಿಕೊಳ್ಳುತ್ತೇನೆ, ಅಡ್ಡಿ ಮಾಡಬೇಡ ಎಂದೂ ಪತ್ನಿಯನ್ನು ಕಾಡಿದ್ದು, ಕೈ ಮೇಲೆ ಬರೆ ಎಳೆದು ಯಾರಿಗೂ ಹೇಳದಂತೆ ಮಗುವಿನ ಮೇಲೆ ಪ್ರಮಾಣ ಮಾಡಿಸಿದ್ದು ... ಇವೆಲ್ಲ ಘೋರ ಅಂಶಗಳು ಈಗ ಒಂದೊಂದಾಗೇ ಹೊರಬರುತ್ತಿವೆ.

ಕೊನೆಗೆ ಜುಲೈ 10ರಂದು ಇಬ್ಬರನ್ನೂ ಸಾಯಿಸಿದ ಸಂತೋಷ್, ತಾಯಿಯೇ ಮಗುವನ್ನು ಕೊಂದು ತಾನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಭಾವನೆ ಬರುವ ರೀತಿಯಲ್ಲಿ ಸನ್ನಿವೇಶ ಸೃಷ್ಟಿಸಿ ಪರಾರಿಯಾಗಿದ್ದಾನೆ.

ತಮ್ಮ ಮಗಳು ಆತ್ಮಹತ್ಯೆ ಮಾಡಿಕೊಂಡಿಲ್ಲ ಮತ್ತು ಸ್ವತಃ ತನ್ನ ಕರಳುಬಳ್ಳಿಯನ್ನು ಕೊಂದಿಲ್ಲ. ಇದು ಅಳಿಯನ ಕುಕೃತ್ಯ ಎಂದು ಬೀರಪ್ಪ ನೀಡಿದ ದೂರಿನ ಮೇರೆಗೆ ಕೋಲಾರ ನಗರ ಠಾಣೆ ಪೊಲೀಸರು ಐಪಿಸಿ ಸೆಕ್ಷನ್ 304 B, 34, 498ಎ ಮತ್ತು 302 ಅಡಿಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಹೋರಾಟದ ಕಿಚ್ಚು ...

ಹೆಂಡತಿ ಹಾಗೂ ಮಗುವನ್ನು ಕೊಂದ ಆರೋಪಿಯನ್ನು ದುರಂತ ಸಂಭವಿಸಿದ 40 ದಿನಗಳ ನಂತರವೂ ಬಂಧಿಸದ ಪೊಲೀಸರ ಕಾರ್ಯವೈಖರಿಯಿಂದ ರೊಚ್ಚಿಗೆದ್ದ ಜನವಾದಿ ಮಹಿಳಾ ಸಂಘಟನೆಯ (ಜೆಎಂಸ್) ಜಿಲ್ಲಾ ಘಟಕ ಮಗಳು ಮೊಮ್ಮಗಳ ಅಗಲಿಕೆಯ ಆಘಾತದಿಂದ ನೊಂದ ಬೀರಪ್ಪ ಕುಟುಂಬಕ್ಕೆ ಧೈರ್ಯ ತುಂಬಿ ನ್ಯಾಯಕ್ಕಾಗಿ ಹೋರಾಟದ ಕಣಕ್ಕಿಳಿಸಲು ನಿರ್ಧರಿಸಿತು. ಅದರ ಪ್ರಕಾರ ಆಗಸ್ಟ್ 21 ರಿಂದ ಕೋಲಾರ ಜಿಲ್ಲಾಧಿಕಾರಿ ಕಚೇರಿ ಆವರಣದ ಮುಂದೆ ಅನಿರ್ದಿಷ್ಟಾವಧಿ ಧರಣಿಯನ್ನು ಆರಂಭಿಸಿದೆ. ಬೀರಪ್ಪ, ಸುನಂದಮ್ಮ ಹಾಗೂ ಅವರ ಕುಟುಂದ ಅನೇಕ ಸದಸ್ಯರಲ್ಲದೆ ಜೆಎಂಎಸ್‌ನ ಕಾರ್ಯಕರ್ತರು ಈ ಅಹೋರಾತ್ರಿ ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಈ ವರದಿಯನ್ನು ಸಿದ್ಧಪಡಿಸುವ ಹೊತ್ತಿಗೆ ಧರಣಿ 13ನೇ ದಿನದಲ್ಲಿ ಮುಂದುವರಿದಿದ್ದು. ಪೊಲೀಸರು ಹಾಗೂ ಜಿಲ್ಲಾ ಆಡಳಿತ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸುವಲ್ಲಿ ಸಂಪೂರ್ಣ ವಿಫಲವಾಗಿದೆ.

ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲೂಕಿಗೆ ಸೇರಿದ ದುರುಳ ಸಂತೋಷ್ ಕುಮಾರ್ ಆರ್ಥಿಕವಾಗಿ ಬಲಾಢ್ಯನಾಗಿರುವುದು ಮಾತ್ರವಲ್ಲದೆ ಆತನಿಗೆ ಪ್ರಮುಖ ರಾಜಕಾರಣಿಯೊಬ್ಬರ 'ಕೈ ರ-ಕ್ಷೆ' ಇರುವುದೇ ಅಪರಾಧಿಯನ್ನು ಇನ್ನೂ ಬಂಧಿಸದಿರಲು ಕಾರಣ ಎಂಬ ವಿಚಾರ ಜಿಲ್ಲೆಯಲ್ಲಿ ಚರ್ಚೆಗೆ ಗ್ರಾಸ ಒದಗಿಸಿದೆ.

ವೀಣಾ-ದೀಪ್ತಿಹಂತಕನನ್ನುಬಂಧಿಸಬೇಕು ಹಾಗೂ ಕಠಿಣ ಶಿಕ್ಷೆಯಾಗಬೇಕು ಎಂಬ ಬೇಡಿಕೆಯೊಂದಿಗೆ ಸದ್ಯ ಈ ಹೋರಾಟ ನಡೆಯುತ್ತಿದೆಯಾದರೂ ಅದು ಸಮಾಜದಲ್ಲಿ ಹೆಚ್ಚುತ್ತಿರುವ ಸ್ತ್ರೀಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆಯಂಥ ಪೆಡಂಭೂತಗಳ ವಿರುದ್ಧ ಸಮಾಜದಲ್ಲಿ ಜಾಗೃತಿ ಹುಟ್ಟಿಸುವ ದಿಸೆಯಲ್ಲಿ ಜನಾಂದೋಲನವ ರೂಪುಗೊಳ್ಳುತ್ತಿರುವುದನ ಗಮನಿಸಬಹುದಾಗಿದೆ.

ಎಡಪಂಥೀಯರು ಅಲ್ಲದೆ ಜಿಲ್ಲೆ ನಾನಾ ಸಂಘ-ಸಂಸ್ಥೆಗಳು, ಮುಖಂಡ ನಗರಸಭೆ ಸದಸ್ಯರು ಈ ರೀತಿಯ ಸಮಾಜದ ವಿವಿಧ ವಿಭಾಗಗಳ ಜನ ಪ್ರತಿದಿನ ಧರಣಿಯಲ್ಲಿ ಭಾಗವಹಿಸಿ ಬೆಂಬ ಸೌಹಾರ್ದತೆ ವ್ಯಕ್ತಪಡಿಸುತ್ತಿದ್ದಾರೆ. (ಎಂ) ಈ ಹೋರಾಟಕ್ಕೆ ಸಂಪೂರ್ಣ ಬೆ ವ್ಯಕ್ತಪಡಿಸಿದ್ದು ರಾಜ್ಯವ್ಯಾಪಿ ಸಂಘರ್ಷವ ರೂಪಿಸಲು ಸಿದ್ಧ ಎಂದು ಘೋಷಿಸಿದೆ.

ಧರಣಿಯಲ್ಲಿ ಭಾಗವಹಿಸಿ ಮಾತನಾಡಿ ಮಾಜಿ ಶಾಸಕ ಹಾಗೂ ಸಿಪಿಐ (ಎ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮ ರೆ ಹಂತಕನನ್ನು ಬಂಧಿಸದಿರುವ ಪೊಲೀ ವೈಫಲ್ಯವನ್ನು ಕಟುವಾಗಿ ಖಂಡಿಸಿದ ಆರೋಪಿ ಬಗ್ಗೆ ನಿಮ್ಮಲ್ಲಿ ಮಾಹಿತಿಯಿದ ಕೊಡಿ ಎಂದು ಪೊಲೀಸರು ಹೇಳುವುದ ಪ್ರಸ್ತಾವಿಸಿದ ಅವರು, ಹಾಗಾದರೆ ಪೊಲೀ ಕೆಲಸವೇನು ಎಂದು ಪ್ರಶ್ನಿಸಿದರು.

ಮಹಿಳೆಯರ ವಿರುದ್ಧ ಅಪರಾ ಎಸಗುವವರನ್ನು ಶಿಕ್ಷಿಸದೇ ರಾ ಮಾಡಿಸಿ ಬಿಡುವ ಪೊಲೀಸ ಹಾಗೂ ಇತರೆ ಅಧಿಕಾರಿ ಕ್ರಮವೇ ಅಪರಾಧಗಳು ಹೆಚ್ಚ ಕುಮ್ಮಕ್ಕು ನೀಡುತ್ತದೆ ಎ ಅವರು ಮಹಿಳೆ ಕುರಿತ ಸಾಮ ದೃಷ್ಟಿಕೋನ ಬದಲಾಗಬೇಕಾ ಎಂದು ಪ್ರತಿಪಾದಿಸಿದರು.

ಸಾವಿರಾರು ನದಿಗಳು .....


ಎಸ್‌ಎಫ್‌ಐ, ಡಿವೈಎಫ ಸಿಐಟಿಯು, ಕೆಪಿಆರ್‌ಎಸ್, ದ ಸಂಘರ್ಷ ಸಮಿತಿ ಈ ರೀತಿಯಾಗಿ ನಾ ಸಂಘಟನೆಗಳ ನೇತೃತ್ವದಲ್ಲಿ ನೂರಾ ವಿದ್ಯಾರ್ಥಿಗಳು, ಕಾರ್ಮಿಕರು, ಮಹಿಳೆಯ ಪ್ರತಿನಿತ್ಯವೆಂಬಂತೆ ಧರಣಿ ಸ್ಥಳಕ್ಕೆ ಆಗ ಬೆಂಬಲ ಸೂಚಿಸಿ ಸಂಘರ್ಷಕ್ಕೆ ಕಸ ತುಂಬುತ್ತಿದ್ದಾರೆ.

ಧರಣಿ ಆರಂಭವಾದ ದಿನ ಹೋರ ನಿರತರನ್ನು ಭೇಟಿಯಾಗಿ ಬಂಧ ಒಂದು ವಾರದ ಕಾಲಾವಕಾಶ ಕೇ ಎಂದ ಅಧಿಕಾರಿಗಳು ಆ ಗಡುವು ಮು ಮೇಲೆಯೂ ಮತ್ತೆ ಮತ್ತೆ ಅದೇ ರಾಗ ಹಾಡನ್ನು ಪುನರಾವರ್ತಿಸುತ್ತಿರುವುದು

ಪುಟ 1


ಜನಶಕ್ತಿ
ಕನ್ನಡ ವಾರಪತ್ರಿಕೆ

ಆಹಾರ ಭದ್ರತೆ, ಭೂಸ್ವಾಧೀನ ಮಸೂದೆಗಳೂ, ಕಾರ್ಪೊರೇಟ್ ಕೂಗಾಟಗಳೂ



ಒಂದೆಡೆಯಲ್ಲಿ ಸಂಸತ್ತು ಆಹಾರ ಭದ್ರತಾ ಮಸೂದೆಗೆ ಅನುಮೋದನೆ ನೀಡಿತ್ತಿದ್ದಂತೆ-. ಮರುದಿನವೆ ಪೆಟ್ರೋಲ್ ಬೆಲೆಗಳನ್ನು ಮತ್ತೆ 3ರೂ.ಗಳಷ್ಟು ಹೆಚ್ಚಿಸಲಾಗಿದೆ. ಇದು ಳೆದ ಮೂರು ತಿಂಗಳಲ್ಲಿ ಆರನೇ ಹೆಚ್ಚಳ. ೀಸೆಲ್ ಬೆಲೆಯಲ್ಲಿಯೂ 50ಪೈಸೆಯ ಾಸಿಕ ಹೆಚ್ಚಳ ಆಗಿದೆ. ಇನ್ನೂ ಹೆಚ್ಚು, ಅಂ- ರೆ 5ರೂ.ಗಳಷ್ಟು ಹೆಚ್ಚಳದ ೋಚನೆಯನ್ನು ಸಂಸತ್ತಿನ ಳೆಗಾಲದ ಅಧಿವೇಶನ ುಗಿಯುವ ವರೆಗೆ ುಂದೂಡಲಾಗಿದೆಯಂತೆ. ತ್ತ ರೂಪಾಯಿ ಮೌಲ್ಯ ಈ ಂಚಿಕೆ ಮುದ್ರಣಕ್ಕೆ ಹೋಗುವ ೇಳೆಗೂ ಡಾಲರಿಗೆ 65ರೂ. ೀಲೆಯೇ ಇದೆ. ಈ ಬಗ್ಗೆ ಲೆಕೆಡಿಸಿಕೊಳ್ಳಬೇಕಾಗಿಲ್ಲ, ೀಕೃತ ಆರ್ಥಿಕದಲ್ಲಿ ವೆಲ್ಲ ಸಾಮಾನ್ಯ, ಪರಿಸ್ಥಿತಿ ನ್ನಷ್ಟಕ್ಕೇ ಸರಿಪಡಿಸಿಕೊಳ್ಳುತ್ತದೆ ಂದಿದ್ದಾರೆ ಪ್ರಧಾನಿಗಳು.

ಈ ನಡುವೆ ಯುಪಿಎ-2 ಸರಕಾರ ವ್ಯಾಪಕ ಪ್ರತಿಭಟನೆಗಳಿಂದ ನೆನೆಗುದಿಗೆ ಬಿದ್ದಿದ್ದ ಪೆನ್ಶನ್ ನಿಧಿ ಖಾಸಗೀಕರಣದತ್ತ ಸಾಗುವ ಪೆನ್ಶನ್ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನೂ ಬಿಜೆಪಿ ಜತೆಗೆ 'ಮ್ಯಾಚ್‌ಫಿಕ್ಸಿಂಗ್' ಮೂಲಕ ಪಾಸು ಮಾಡಿಸಿಕೊಂಡಿದೆ. ಆ ಸಮಯದಲ್ಲಿ ಸದಾ ಯುಪಿಎ-2 ಆರ್ಥಿಕ ಕ್ರಮಗಳ ಬಗ್ಗೆ ಮಾತಾಡುವ ಎನ್‌ಡಿಎಯ ಮಾಜಿ ಹಣಕಾಸು ಮಂತ್ರಿಗಳ ಗೈರುಹಾಜರಿ ಎದ್ದು ಕಾಣುತ್ತಿತ್ತು ಎಂದು ಕೆಲವು ಪತ್ರಿಕೆಗಳು ವರದಿ ಮಾಡಿವೆ. ಅತ್ತ ಅದೇ ಯುಪಿಎ-2 ಸರಕಾರ, ಆಹಾರ ಭದ್ರತಾ ಮಸೂದೆ ಮತ್ತು ಭೂಸ್ವಾಧೀನ ಮಸೂದೆಗಳ ಮೂಲಕ ಆರ್ಥಿಕ ಉದಾರೀಕರಣದ ಬಗ್ಗೆ ಮಾತಾಡಿದರೂ ತಾನು ಈಗಲೂ ಆಮ್-ಆದ್ಮಿ ಪರ ಎಂದು ಪ್ರಚಾರ ಗಿಟ್ಟಿಸಿಕೊಳ್ಳುವ ಪ್ರಯತ್ನದಲ್ಲಿದೆ.



ಕೃಪೆ : ದಿ. ಹಿಂದೂ

ಇನ್ನೊಂದೆಡೆ ಪ್ರಧಾನಿಗಳು, ಹಣಕಾಸು ಮಂತ್ರಿಗಳು ಬಂಡವಾಳದ ಹರಿವಿನ ಮೇಲೆ ಯಾವುದೇ ಹತೋಟಿ ಹಾಕುವುದಿಲ್ಲ ಎಂಬ ಭರವಸೆ ನೀಡಿದ್ದಾರೆ. ಆದರೂ ತೃಪ್ತರಾಗದ ಅವರ ನವ-ಉದಾರವಾದಿ ದೇಶಿ-ವಿದೇಶಿ ಕಾರ್ಪೊರೇಟ್ ಗೆಳೆಯರು ತಮ್ಮ ಟೀಕೆಗಳನ್ನು ಮುಂದುವರೆಸಿದ್ದಾರೆ. ರೂಪಾಯಿ ಮೌಲ್ಯ ಕುಸಿತದ ಹಿನ್ನೆಲೆಯಲ್ಲಿ ಆಹಾರ ಭದ್ರತಾ ಮಸೂದೆಗೆ ಇದು ಸಕಾಲವಾಗಿರಲಿಲ್ಲ ಎಂದು ಕಳೆದ ವಾರ ಅವರು ವಾದಿಸುತ್ತಿದ್ದರೆ, ಭೂಸ್ವಾಧೀನ ಮಸೂದೆ ಹೆಚ್ಚಿನ ಪರಿಹಾರವನ್ನು ನಿಗದಿ ಮಾಡಿ ಕೈಗಾರಿಕೆಗಳ ಮತ್ತು ಮೂಲಭೂತ ರಚನೆಗಳ ಬೆಳವಣಿಗೆಗೆ ಭಾರಿ ಕುತ್ತು ತಂದಿದೆ ಎಂದು ಈ ವಾರವೆಲ್ಲ ಕೂಗಾಡುತ್ತಿದ್ದರು.

ಸಾಂಪ್ರದಾಯಿಕ ನವ-ಉದಾರವಾದಿ ದೃಷ್ಟಿಯಲ್ಲಿ ಅವರ ಈ ಕೂಗಾಟಕ್ಕೆ ಅರ್ಥವಿದೆ. ಆದರೇನು ಮಾಡುವುದು, ನವ-ಉದಾರವಾದಿ ಕಣ್ಣೋಟವೇ ಅರ್ಥಹೀನವಾದ್ದರಿಂದ ಕಾರ್ಪೊರೇಟ್ ವಲಯದ ಆಕ್ಷೇಪಗಳು, ಕೂಗಾಟಗಳು ಕೂಡ ಅರ್ಥಹೀನ ಎನ್ನುತ್ತಾರೆ ಪ್ರಖ್ಯಾತ ಆರ್ಥಿಕತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಬಂಡವಾಳದ ಹರಿವಿನ ಮೇಲೆ ನಿಯಂತ್ರಣಗಳನ್ನು ತರುವುದಿಲ್ಲೆಂದು ಹೇಳಿದರೆ ಸಾಕು, ರೂಪಾಯಿ ಮೌಲ್ಯ ಕುಸಿತ ನಿಂತು ಹೋಗುತ್ತದೆ ಎಂಬ ನಂಬಿಕೆಯೇ ತಪ್ಪು ಎಂದು ಅವರು ಹೇಳುತ್ತಾರೆ.

ಪುಟ 15 ಕ್ಕೆ

ನಿಯಮಬಾಹಿರ ಔಷಧಿ ಪರೀಕ್ಷಣೆಗಳಿಗೆ ಬಲಿಪಶುಗಳು ಭಾರತದ ಬಡಜನರು:

ಸಂಸದೀಯ ಸ್ಥಾಯೀ ಸಮಿತಿಯ ಪುಷ್ಟೀಕರಣ, ಸರಕಾರದ ನಿಷ್ಕ್ರಿಯತೆ

ಮೂರು ವರ್ಷಗಳ ಹಿಂದೆ ಆಂಧ್ರಪ್ರದೇಶದ ನವಾದಿ ಮಹಿಳಾ ಸಂಘಟನೆ ಆ ರಾಜ್ಯದಲ್ಲಿ ಚ್‌ಪಿವಿ ಚುಚ್ಚುಮದ್ದು ಕಾರ್ಯಕ್ರಮದ ಡಿಯಲ್ಲಿ ಒಂದು ಸರ್ಕಾರೇತರ ಸಂಘಟನೆ ಡೆಸಿದ್ದ 'ಅಧ್ಯಯನ'ದಲ್ಲಿ ಬಹಳಷ್ಟು ಕ್ರಮಗಳಿವೆ, ಇದು ಬುಡಕಟ್ಟು ಕುಟುಂಬಗಳ ಣ್ಣುಮಕ್ಕಳ ಆರೋಗ್ಯದ ಮೇಲೆ ಬಹಳಷ್ಟು ಪರಿಣಾಮಗಳನ್ನು ಬೀರಿದೆ ಎಂಬದನ್ನು ಗಮನಕ್ಕೆ ತಂದಿತ್ತು. ಈಗ ಸಂಸತ್ತಿನ ರೋಗ್ಯ ಮತ್ತು ಕುಟುಂಬ ಕಲ್ಯಾಣ ಕುರಿತ ಯೀಸಮಿತಿಯ 72ನೇ ವರದಿ ಇದನ್ನು ಷ್ಟೀಕರಿಸಿದೆ.

ಕಳೆದ ವಾರ ಈ ವರದಿಯನ್ನು ಸಂಸತ್ತಿನಲ್ಲಿ ಂಡಿಸಲಾಯಿತು. ಆದರೂ ಯುಪಿಎ-2 ಕಾರ ಇನ್ನೂ ಕಠಿಣ ಕ್ರಮಗಳನ್ನು ಕೈಗೊಳ್ಳಲು ದೇಟು ಹಾಕುತ್ತಿರುವಂತೆ ಕಾಣುತ್ತದೆ. ದರಿಂದಾಗಿ, ಬಡ ದಲಿತ, ಆದಿವಾಸಿ ಣ್ಣು ಮಕ್ಕಳ ಆರೋಗ್ಯದ ಪ್ರಶ್ನೆಗಳಿಗೆ ಈ ಕಾರ ಏನೇನೂ ಬೆಲೆ ಕೊಡುವುದಿಲ್ಲ ದು ಭಾವಿಸುವುದು ಸರಿಯಲ್ಲವೇ ಎಂದು ಸತ್ತಿನಲ್ಲಿ ಈ ಪ್ರಶ್ನೆಯನ್ನು ಮೊದಲು ಎತ್ತಿದ್ದ ಂದಾ ಕಾರಟ್ ಯುಪಿಎ-2 ಆರೋಗ್ಯ ಂತ್ರಿಗಳನ್ನು ಪ್ರಶ್ನಿಸಿದ್ದಾರೆ.

ಜುಲೈ 2009ರಲ್ಲಿ ಆಂಧ್ರಪ್ರದೇಶ ಮತ್ತು ತ ರಾಜ್ಯ ಸರಕಾರಗಳು ಮತ್ತು ಎಂಆರ್(ವೈದ್ಯಕೀಯ ಸಂಶೋಧನಾ ಂಡಳಿ) ಮಂಜೂರು ಮಾಡಿದ ಹೆಚ್‌ಪಿವಿ ದರೆ ಹ್ಯೂಮನ್ ಪಪಿಲೋಮ ವೈರಸ್(ಮಾನವ ಗಂತಿ ವಿಷಾಣು) ಚುಚ್ಚು ಮದ್ದು ಕಾರ್ಯಕ್ರಮ ಆರಂಭವಾಯಿತು. ಬಹುರಾಷ್ಟ್ರೀಯ ಔಷಧಿಕಂಪನಿಗಳಾದ ಮೆರ್ಕ್, ಶಾರ್ಪ್ ಅಂಡ್ ದೋಹ್ಮೆ ಉತ್ಪಾದಿಸಿದ ಚುಚ್ಚುಮದ್ದನ್ನು 'ಅಧ್ಯಯನ'ದ ಹೆಸರಿನಲ್ಲಿ ಬುಡಕಟ್ಟು ಕುಟುಂಬಗಳ ಹೆಣ್ಣು ಮಕ್ಕಳ ಮೇಲೆ ಪ್ರಯೋಗಿಸುವ ಕಾರ್ಯಕ್ರಮವದು. ಜಗತ್ತಿನ ಅತಿ ದೊಡ್ಡ ಆರೋಗ್ಯಪಾಲನೆ ವಲಯದ ಸರ್ಕಾರೇತರ ಸಂಘಟನೆ(ಎನ್‌ಜಿಒ) 'ಪಿಎಟಿಹೆಚ್' ಇದನ್ನು ನಡೆಸಿತು. ಹೆಂಗಸರಲ್ಲಿ ಗರ್ಭಾಶಯದ ಕ್ಯಾನ್ಸರ್ ತಗುಲದಂತೆ ತಡೆಯುವ ಚುಚ್ಚುಮದ್ದು ಇದು ಎಂದು ಹೇಳಲಾಗಿದ್ದರೂ ಅದು ಸಾಬೀತಾಗಿರಲಿಲ್ಲ, ಅಲ್ಲದೆ ಈ ಚುಚ್ಚು ಮದ್ದಿನ ಅಡ್ಡ ಪರಿಣಾಮಗಳ ಬಗ್ಗೆಯೂ ಮುನ್ನಚ್ಚರಿಕೆಯ ಕ್ರಮಗಳನ್ನು ವಹಿಸಲಾಗಿರಲಿಲ್ಲ. ಈ ಚುಚ್ಚುಮದ್ದು ಪಡೆದ ಇಬ್ಬರು ಬುಡಕಟ್ಟು ಹೆಣ್ಣು ಮಕ್ಕಳು ಸತ್ತಾಗ ಅದು ಆತ್ಮಹತ್ಯೆಯೆಂದು ದಾಖಲಾಯಿತು. ಆದರೆ ಮತ್ತೆ ನಾಲ್ಕು ಹೆಣ್ಣು ಮಕ್ಕಳು ಅದರ ಅಡ್ಡ ಪರಿಣಾಮಗಳಿಂದ ಪ್ರಾಣ ಕಳಕೊಂಡರು ಎಂಬ ಬಲವಾದ ಸಂದೇಹ ಉಂಟಾಯಿತು. ಇನ್ನೂ ಹಲವಾರು ಹೆಣ್ಣುಮಕ್ಕಳು ತಲೆನೋವು, ವಾಂತಿ, ಹೊಟ್ಟೆನೋವು ಮುಂತಾದವುಗಳಿಂದ ನರಳಲಾರಂಭಿಸಿದರು.

ಆಗ ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾಗಿದ್ದ ಬೃಂದಾ ಕಾರಟ್ ಇದನ್ನು ಸಂಸತ್ತಿನಲ್ಲಿ ಎತ್ತಿದ್ದಷ್ಟೇ ಅಲ್ಲ, ಒಂದು ವಿವರವಾದ ವರದಿಯನ್ನು ಸಂಸತ್ತಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸ್ಥಾಯಿ ಸಮಿತಿಗೆ ಸಲ್ಲಿಸಿದರು. ಅದರ ಆಧಾರದಲ್ಲಿ ಕೂಲಂಕುಷ ತನಿಖೆ ನಡೆಸಿರುವ ಸ್ಥಾಯೀ ಸಮಿತಿ ಈಗ ಸಲ್ಲಿಸಿರುವ ವರದಿಯಲ್ಲಿ ಈ ಕುರಿತು ನೀಡಿರುವ ಎಲ್ಲ ದೂರುಗಳು ನಿಜ ಎಂದು ಹೇಳುತ್ತ ಅಧ್ಯಯನ, ಪರೀಕ್ಷಣೆಯ ಹೆಸರಲ್ಲಿ ಆ ಜಾಗತಿಕ ಎನ್‌ಜಿಒ ಭಾರತ ಸರಕಾರ ವಿಧಿಸಿರುವ ಎಲ್ಲ ನಿಯಮಗಳು, ಕಾನೂನುಗಳ ಉಲ್ಲಂಘನೆ ಮಾಡಿದೆ, ಅದರ ವಿರುದ್ಧ ಕ್ರಮ ಕೈಗೊಳ್ಳಬೇಕು, ಈ ಬಗ್ಗೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲೂ ಕ್ರಮ ಕೈಗೊಳ್ಳಲು ಈ ವಿಷಯವನ್ನು ವಿಶ್ವ ಆರೋಗ್ಯ ಸಂಘಟನೆ ಮತ್ತು ಯುನಿಸೆಫ್ ಗಮನಕ್ಕೂ ತರಬೇಕು ಎಂದು ಶಿಫಾರಸು ಮಾಡಿದೆ. ಐಸಿಎಂಆರ್ ಪ್ರತಿನಿಧಿ ಕೂಡ ಜನಗಳ ಆರೋಗ್ಯದ ಬದಲು ಔಷಧಿ ಕಂಪನಿಯ ಪರವಾಗಿ ವರ್ತಿಸಿದ್ದಾರೆ ಎಂದು ವರದಿ ಹೇಳಿದೆ. ಹೊಸ ಔಷಧಿಗಳ ಪರೀಕ್ಷಣೆ ಕುರಿತ ಎಲ್ಲ ವಿಧಿ-ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡುವಲ್ಲಿ ಸರಕಾರವೂ ವಿಫಲವಾಗಿದೆ ಎಂದಿರುವ ವರದಿ, ಇಂತಹ ವಿಫಲತೆಯ ದುಷ್ಪರಿಣಾಮಗಳನ್ನು ಅನುಭವಿಸುತ್ತಿರುವ ಕುಟುಂಬಗಳಿಗೆ ಸರಿಯಾದ ಪರಿಹಾರ ನೀಡಬೇಕು ಎಂದು ಶಿಫಾರಸು ಮಾಡಿದೆ.

ಸ್ಥಾಯೀಸಮಿತಿಯ ಶಿಫಾರಸುಗಳನ್ನು ಯಾವುದೇ ವಿಳಂಬ ಧೋರಣೆ ವಹಿಸದೆ ಕೂಡಲೇ ಜಾರಿಗೆ ತರಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ. ಬೃಂದಾ ಕಾರಟ್ ಅವರು ಆರೋಗ್ಯ ಮಂತ್ರಿಗಳಿಗೆ ಪತ್ರ ಬರೆದು, ಈ ಹಿಂದೆ ಸಂಸತ್ತಿನಲ್ಲಿ ಈ ಪ್ರಶ್ನೆಯನ್ನು ಎತ್ತಿದಾಗಲೆಲ್ಲ ಕ್ರಮ ಕೈಗೊಳ್ಳುವ ಭರವಸೆಗಳನ್ನು ಅವರು ನೀಡಿದ್ದರೂ ಇದುವರೆಗೂ ಯಾವುದೇ ಕ್ರಮಗಳನ್ನು ಕೈಗೊಳ್ಳದಿರುವ ಬಗ್ಗೆ ಖೇದ ವ್ಯಕ್ತಪಡಿಸಿದ್ದಾರೆ; ಈ ವರದಿಯ ಹಿನ್ನೆಲೆಯಲ್ಲಿ, ದಲಿತ, ಆದಿವಾಸಿ ಹೆಣ್ಣು ಮಕ್ಕಳ ಆರೋಗ್ಯದ ಪ್ರಶ್ನೆಗಳಿಗೆ ಈ ಸರಕಾರ ಏನೇನೂ ಬೆಲೆ ಕೊಡುವುದಿಲ್ಲವಾದ್ದರಿಂದ ನೀವು ಕ್ರಮ ಕೈಗೊಂಡಿಲ್ಲ ಎಂದು ಭಾವಿಸುವುದು ನ್ಯಾಯಬದ್ಧವಲ್ಲವೇ ಎಂದು ಅವರು ಖಾರವಾಗಿ ಪ್ರಶ್ನಿಸಿದ್ದಾರೆ. ಈ ಸರಕಾರ ತಕ್ಷಣವೇ ಕೈಗೊಳ್ಳಬೇಕಾದ ಕ್ರಮವೆಂದರೆ ಈ ಕಾರ್ಯಕ್ರಮಕ್ಕೆ ಒಳಪಡಿಸಲ್ಪಟ್ಟ ಎಲ್ಲ ಮಕ್ಕಳಿಗೆ ಕನಿಷ್ಟ 10ಲಕ್ಷ ರೂ.ಗಳ ಪರಿಹಾರ ಕೊಡಿಸಬೇಕು, ಆ ಎನ್‌ಜಿಒ ಮೇಲೆ, ಸಂಬಂಧಪಟ್ಟ ಔಷಧಿ ಕಂಪನಿಗಳ ಮೇಲೆ ಮತ್ತು ಪ್ರಾಯೋಜಕರಾದ ಗೇಟ್ಸ್ ಫೌಂಡೇಶನ್ ಮೇಲೆ ದಂಡ ವಿಧಿಸಿ ಈ ಮೊತವನ್ನು ವಸೂಲಿ ಮಾಡಬೇಕು ಎಂದು ಅವರು ಹೇಳಿದ್ದಾರೆ. ಅಲ್ಲದೆ ಈ ಉಲ್ಲಂಘನೆಯಲ್ಲಿ ಶಾಮೀಲಾದ ಎಲ್ಲ ವ್ಯಕ್ತಿಗಳು ಮತ್ತು ಸಂಘಟನೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ. ಇಂತಹ ನಿಯಮಬಾಹಿರ ಔಷಧಿ ಪರೀಕ್ಷಣೆಗಳ ಮೂಲಕ ಭಾರತದ ಬಡಜನರ ಇತರ ಶೋಷಕರಿಗೆ ಬಲವಾದ ಸಂದೇಶ ತಲುಪಿಸಬೇಕಾದರೆ ವಿಳಂಬವಿಲ್ಲದೆ ಈ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ನವ-ಉದಾರವಾದಕ್ಕೆ ಆತುಕೊಂಡಿರುವ ಯುಪಿಎ-2 ಸರಕಾರ ಇಂತಹ ಬಲವಾದ ಸಂದೇಶ ಕಳಿಸಬಲ್ಲುದೇ? •

'ಸಿರಿಯಾದಲ್ಲಿ ಮಿಲಿಟರಿ ಹಸ್ತಕ್ಷೇಪ ಬೇಡ !'

ಪ್ರಕಾಶ್ ಕಾರಟ್

ಅಮೆರಿಕ ಸಿರಿಯಾದ ಮೇಲೆ ದಾಳಿ ಮಾಡಲು ಎಲ್ಲಾ ತಯಾರಿ ನಡೆಸಿದೆ. ಅಮೆರಿಕನ್ ಪಾರ್ಲಿಮೆಂಟಿನ (ಕಾಂಗ್ರೆಸ್) ಅಂಗೀಕಾರ ದೊರೆತ ನಂತರ ಮಿಲಿಟರಿ ದಾಳಿ ನಡೆಸಲು ಮುಂದಾಗುವುದಾಗಿ ಅಧ್ಯಕ್ಷ ಒಬಾಮಾ ಘೋಷಿಸಿದ್ದಾರೆ.



ಈ ದಾಳಿ ನಡೆದರೆ, ಇದು ಇತ್ತೀಚಿನ ವರ್ಷಗಳಲ್ಲಿ ಅರಬ್ ದೇಶಗಳ ಮೇಲೆ ಅಮೆರಿಕ-ನಾಟೋ ಕೂಟ ನಡೆಸಿದ ಮೂರನೇ ಆಕ್ರಮಣ ಆಗಲಿದೆ. ಜಾರ್ಜ್ ಬುಶ್ 2003ರಲ್ಲಿ ಸದ್ದಾಂ ಹುಸೇನ್ ಸಾಮೂಹಿಕ ನಾಶದ ಶಸ್ತ್ರಾಸ್ತ್ರಗಳನ್ನು ಪೇರಿಸಿಟ್ಟಿದ್ದಾರೆಂಬ ನೆಪದಲ್ಲಿ ಇರಾಕಿನ ಮೇಲೆ ಆಕ್ರಮಣ ನಡೆಸಿದರು. ಬೆಂಗಾಜಿ ನಗರದಲ್ಲಿ ರಕ್ತಪಾತ ತಡೆಯಲು ಅಗತ್ಯ ಎಂದು ಒಬಾಮಾ 2011ರಲ್ಲಿ ಲಿಬ್ಯಾದ ಮೇಲೆ ಕ್ಷಿಪಣಿ ಮತ್ತು ಬಾಂಬ್ ದಾಳಿಗೆ ಆಜ್ಞೆ ಮಾಡಿದರು. ಸಿರಿಯಾದ ಮಿಲಿಟರಿ ರಾಸಾಯನಿಕ ಅಸ್ತ್ರ ('ಸರಿನ್' ಎಂಬ ನರ-ಗ್ಯಾಸ್) ಬಳಸಿದೆ ಎಂಬುದು ಈಗಿನ ನೆಪ.

ವಿಶ್ವಸಂಸ್ಥೆಯ ಪರೀಕ್ಷಕರು ಸ್ಥಳಕ್ಕೆ ಹೋಗುವ ಮೊದಲೇ ಅಮೆರಿಕ ಮತ್ತು ಅವರ ಬ್ರಿಟನ್ ಫ್ರಾನ್ಸಿನಂತಹ ನಾಟೋ ಕೂಟದ ಸಾಥಿಗಳು, ಸಿರಿಯನ್ ಸರ್ಕಾರ ಸರಿನ್ ಗ್ಯಾಸ್ ಬಳಸಿದೆ ಎಂಬ ತೀರ್ಮಾನಕ್ಕೆ ಬಂದಿದ್ದರು. ಕಳೆದ ವರ್ಷವೇ ತಾನು ರಾಸಾಯನಿಕ ಅಸ್ತ್ರಗಳ ಬಳಕೆಯ ಬಗೆಗೆ ಹಾಕಿದ್ದ 'ಲಕ್ಷ್ಮಣ ರೇಖೆ'ಯನ್ನು ಸಿರಿಯಾ ಸರ್ಕಾರ ದಾಟಿದೆ. 'ಲಕ್ಷ್ಮಣ ರೇಖೆ'ಯನ್ನು ದಾಟಿದರೆ ಅಮೆರಿಕನ್ ಮಿಲಿಟರಿ ಕಾರ್ಯಾಚರಣೆಗೆ ಆಹ್ವಾನ ನೀಡಿದಂತೆ ಎಂದು ತಾನು ಎಚ್ಚರಿಸಿದ್ದೆ ಎಂದು ಅಧ್ಯಕ್ಷ ಒಬಾಮಾ ಹೇಳಿದ್ದಾರೆ.

ಅಮೆರಿಕದ ನೈತಿಕ ಗೋಸುಂಬೆತನ ನಿಜವಾಗಿಯೂ ಅಚ್ಚರಿ ಹುಟ್ಟಿಸುವಂಥದು. ವಿಯೆಟ್ನಾಂ ಯುದ್ಧದಲ್ಲಿ ಅಮೆರಿಕನ್ ಮಿಲಿಟರಿ ಬಳಸಿದ 'ಏಜೆಂಟ್ ಆರೇಂಜ್' ಪರಿಸರ ವಿನಾಶಕ್ಕೆ ಕಾರಣವಾದ್ದು ಮಾತ್ರವಲ್ಲ, ಆ ನಂತರ ಹುಟ್ಟಿದ ಸಾವಿರಾರು ಮಕ್ಕಳು ಹುಟ್ಟಿನಿಂದ ಬರುವ ಹಲವು ರೋಗಗಳಿಂದ ನರಳುವಂತೆ ಮಾಡಿದೆ. ಇತ್ತೀಚಿನ ಇರಾಕ್ ಯುದ್ಧದಲ್ಲಿ ಕೂಡಾ ಅಮೆರಿಕನ್ ಮಿಲಿಟರಿ 'ಡಿಪ್ಲೀಟೆಡ್ ಯುರೇನಿಯಂ' ಮತ್ತು ಬಿಳಿ ರಂಜಕ ಸ್ಫೋಟಕ ಶೆಲ್ಲುಗಳನ್ನು ಬಳಸಿ ಜನರಿಗೆ ಭಾರೀ ಸಾವು-ನೋವು ಉಂಟು ಮಾಡಿತ್ತು. ಅದೇ ಸಾಮ್ರಾಜ್ಯಶಾಹಿ ಶಕ್ತಿ ಸಿರಿಯಾದಲ್ಲಿ ರಾಸಾಯನಿಕ ಅಸ್ತ್ರಗಳನ್ನು ಬಳಸಲಾಗಿದೆ ಎಂಬುದನ್ನು ಅದರ ಕಾನೂನುಬಾಹಿರ ಆಕ್ರಮಣಕ್ಕೆ ಆಧಾರವಾಗಿ ಬಳಸುತ್ತಿದೆ.

ಒಂದು ಕಾಲ್ಪನಿಕ ಅಥವಾ ಅರ್ಧ-ಸತ್ಯ ಆಗಿರುವ ಪ್ರಚೋದನೆಯನ್ನು ಬಳಸಿ ಆಕ್ರಮಣ ಮಾಡುವ ಸಾಮ್ರಾಜ್ಯಶಾಹಿಯ ಹಳೆಯ ತಂತ್ರವನ್ನೇ ಒಬಾಮ ಮುಂದುವರೆಸುತ್ತಿದ್ದಾರೆ. ಸಿರಿಯಾ ಎರಡುವರೆ ವರ್ಷಗಳಿಂದ ಹತ್ತಿ ಉರಿಯುತ್ತಿರುವ ಸಂಘರ್ಷ ಕಂಡಿದೆ. ಬಶರ್ ಅಲ್-ಅಸದ್ ಸರ್ಕಾರದ ವಿರುದ್ಧ ಹಲವು ಬಂಡುಕೋರರ ಗುಂಪುಗಳ ವಿಚಿತ್ರ ಮಿಶ್ರಣವೊಂದು ಆಂತರಿಕ ಯುದ್ಧದಲ್ಲಿ ತೊಡಗಿದೆ. ಈ ವಿರೋಧಿ ಗುಂಪುಗಳಲ್ಲಿ ಜಬಾತ್ ಅಲ್-ನುಸ್ರ ಮುಂತಾದ ಸಲಾಫ್‌ವಾದಿ ಇಸ್ಲಾಮಿಕ್ ಉಗ್ರಗಾಮಿಗಳಿಂದ ಪಾಶ್ಚಿಮಾತ್ಯರ-ಪರ ಗುಂಪುಗಳು ಎಲ್ಲಾ ಇವೆ. ಸಿಐಎ ಹಲವು ವಿರೋಧಿ ಗುಂಪುಗಳ ಹೋರಾಟಗಾರರಿಗೆ ಶಸ್ತ್ರಾಸ್ತ್ರಗಳು ಮತ್ತು ತರಬೇತಿಯನ್ನು ಕೊಡುತ್ತಿದೆ. ಅಫ್ಘಾನಿಸ್ತಾನ, ಲಿಬ್ಯಾ, ಟುನಿಶಿಯ, ಯೆಮೆನ್ ಮತ್ತು ಚೆಚನ್ಯಾದಿಂದ ಬಂದ ಹಲವು ಇಸ್ಲಾಮಿಕ್ ಉಗ್ರಗಾಮಿಗಳು ವಿರೋಧಿ ಗುಂಪುಗಳನ್ನು ಸೇರಿಕೊಂಡಿದ್ದಾರೆ. ಅಮೆರಿಕ ಈಗ ಉಳಿದಿರುವ ಏಕಮಾತ್ರ ಜಾತ್ಯತೀತ ಅರಬ್ ಪ್ರಭುತ್ವವಾದ ಸಿರಿಯಾವನ್ನು ನಾಶ ಮಾಡಲು ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳಿಗೆ ಬೆಂಬಲ ನೀಡುತ್ತಿದೆ. ಮೂರು ದಶಕಗಳ ಹಿಂದೆ ಅಫ್ಘಾನಿಸ್ತಾನದಲ್ಲಿ ಇದನ್ನೇ ಅಮೆರಿಕ ಮಾಡಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಸಿರಿಯಾದ ಸಶಸ್ತ್ರ ದಂಗೆ ಸರ್ಕಾರ ಉರುಳಿಸುವ ಉದ್ದೇಶವನ್ನು ಬೇಗನೇ ಸಾಧಿಸಿಬಿಡುತ್ತದೆ ಎಂದು ಅಮೆರಿಕ ನಿರೀಕ್ಷಿತ್ತು. ಆದರೆ ಹಾಗಾಗಲಿಲ್ಲ. ಮಾತ್ರವಲ್ಲ ಸಿರಿಯನ್ನರ ಮೇಲೆ ಭಾರೀ ಸಾವು-ನೋವು ಉಂಟುಮಾಡಿದೆ. ಒಂದು ಲಕ್ಷ ಸಿರಿಯನ್ನರು ಸತ್ತಿದ್ದಾರೆ. 20ಲಕ್ಷ ಸಿರಿಯನ್ನರು ನೆರೆಯ ದೇಶಗಳಲ್ಲಿ ನಿರಾಶ್ರಿತರಾಗಿ ವಾಸಿಸುತ್ತಿದ್ದಾರೆ. ಸಿರಿಯನ್ ಸರ್ಕಾರದ ಸೈನ್ಯ ದಂಗೆ-ಕೋರ ಪಡೆಗಳ ಜತೆ ಭೀಷಣ ಕಾಳಗ ನಡೆಸಿ ಅವರ ಮುನ್ನಡೆಯನ್ನು ತಡೆದಿದೆ. ದಂಗೆಕೋರರು ಪಡೆದುಕೊಂಡಿದ್ದ ಹಲವು ಪಟ್ಟಣಗಳನ್ನೂ ಪ್ರದೇಶಗಳನ್ನು ಇತ್ತೀಚಿನ ತಿಂಗಳುಗಳಲ್ಲಿ ಪುನಃ ವಶಪಡಿಸಿಕೊಂಡಿವೆ. ಈ ಸನ್ನಿವೇಶದಲ್ಲಿ ರಾಸಾಯನಿಕ ಅಸ್ತ್ರಗಳ ಬಳಕೆಯ ಪ್ರಸ್ತಾಪ ಮಾಡಲಾಗಿದೆ. ಇದೇ ಜೂನ್ ತಿಂಗಳಲ್ಲಿ ಸಿರಿಯಾ ಸರ್ಕಾರ ಸರಿನ್ ಗ್ಯಾಸ್ ಬಳಸಬಹುದಾದ್ದರಿಂದ ದಂಗೆಕೋರ ಪಡೆಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡುವುದಾಗಿ ಅಧ್ಯಕ್ಷ ಒಬಾಮ ಘೋಷಿಸಿದ್ದರು. ಆಗ ಅವರ ಆಪಾದನೆಯನ್ನು ನಿರಾಕರಿಸಲಾಗಿತ್ತು. ಅಲೆಪ್ಪೊ ಬಳಿ ಒಂದು ದಾಳಿಯಲ್ಲಿ ದಂಗೆ-ಕೋರರು ಸರಿನ್ ಗ್ಯಾಸ್ ಬಳಸಿದ್ದರೆಂಬುದನ್ನು ವಿಶ್ವಸಂಸ್ಥೆಯಲ್ಲಿ ರಶ್ಯನ್ ರಾಯಭಾರಿ ಪುರಾವೆ ಸಮೇತ ತೋರಿಸಿದ್ದರು.

ಸರಿನ್ ಗ್ಯಾಸ್ ಬಳಕೆಯ ಇತ್ತೀಚಿನ ಪ್ರಕರಣ ಅಗಸ್ಟ್ 21ರಂದು ಡಮಾಸ್ಕಸ್ ಬಳಿಯ ಘೌಟಾ ಎಂಬ ಸ್ಥಳದಲ್ಲಿ ನಡೆದಿದೆ



ಎಂದು ಹೇಳಲಾಗಿದೆ. ಗ್ಯಾಸ್ ಬಳಕೆಯ ಆಪಾದನೆಯ ತನಿಖೆ ಮಾಡಲು ಸಿರಿಯಾ ಸರ್ಕಾರದ ಅನುಮತಿಯಂತೆ ವಿಶ್ವಸಂಸ್ಥೆಯ ತನಿಖಾದಳ ಅಂದೇ ರಾಜಧಾನಿ ಡಮಾಸ್ಕಸ್ ತಲುಪಿತು. ಇಂತಹ ಅಪರಾಧದ ತನಿಖೆಗೆ ತನಿಖಾ ದಳ ಆಗಮಿಸಿದ ದಿನವೇ ಸಿರಿಯಾ ಸರ್ಕಾರ ರಾಸಾಯನಿಕ ಅಸ್ತ್ರ ಬಳಸುತ್ತದೆ ಎಂಬುದು ನಂಬಲರ್ಹವಲ್ಲ ಎಂದು ರಶ್ಯನ್ ಅಧ್ಯಕ್ಷ ಪುಟಿನ್ ಸೇರಿದಂತೆ ಹಲವು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಸಿರಿಯಾ ಸರ್ಕಾರ ಸಹ ಈ ಆಪಾದನೆಯನ್ನು ತಿರಸ್ಕರಿಸಿದ್ದು, ಬಂಡುಕೋರ ಪಡೆಗಳು ಸರಿನ್ ಗ್ಯಾಸನ್ನು ಟನೆಲುಗಳಲ್ಲಿ ಪೇರಿಸಿಟ್ಟಿವೆ ಎಂದು ಆಪಾದಿಸಿದೆ.

ಸಿರಿಯಾ ಸರ್ಕಾರ ರಾಸಾಯನಿಕ ಅಸ್ತ್ರಗಳನ್ನು ಬಳಸಿದೆ ಎಂದು ಅಮೆರಿಕ, ಫ್ರಾನ್ಸ್ ಮತ್ತು ಬ್ರಿಟನುಗಳು ಸಾರಾ ಸಗಟಾಗಿ ಒಟ್ಟಾಗಿ ಘೋಷಿಸಿವೆ ಎಂಬುದು ಗಮನಾರ್ಹ. ವಿಶ್ವಸಂಸ್ಥೆಯ ತನಿಖಾ ದಳಕ್ಕೆ ಸ್ಥಳ ಪರೀಕ್ಷೆ ಮಾಡಲು ಅನುಮತಿ ಬಹಳ ವಿಳಂಬವಾಗಿದೆ ಎಂದೂ ಅಮೆರಿಕ ಹೇಳಿದೆ. ವಿಶ್ವಸಂಸ್ಥೆ ತನಿಖಾ ದಳದ ತನಿಖೆಯನ್ನು ತಡೆಯ ಅಮೆರಿಕದ ವಿದೇಶಾಂಗ ಕಾರ್ಯದ ಜಾನ್ ಕೆರ್ರಿ ಸಿರಿಯಾ ಸರ್ಕಾರ ರಾಸಾಯ ಅಸ್ತ್ರಗಳನ್ನು ಬಳಸಿದ್ದನ್ನು ಖಂಡಿಸಿ ಅ ಕ್ಕೆ ಪ್ರತಿಯಾಗಿ ದಾಳಿ ಮಾಡುವು ಘೋಷಿಸಿದರು. ಕ್ರುಯ್ಸ್ ಕ್ಷಿಪಣಿಗಳ ಹೊತ್ತ ಐದು ಅಮೆರಿಕನ್ ವಿನಾಶಕ ಯು ಹಡಗುಗಳನ್ನು ಪೂರ್ವ ಮೆಡಿಟರೇನಿಯ ಸಮುದ್ರಕ್ಕೆ ಕಳಿಸಲಾಗಿದೆ. ವಿಶ್ವಸಂಸ್ಥೆ ತನಿಖಾ ದಳ ಡಮಾಸ್ಕಸ್ ಬಿಟ್ಟ ಕೂಡ ಅಥವಾ ಕನಿಷ್ಠ ಸೆಪ್ಟೆಂಬರ್ 3ರೊ ಮಿಲಿಟರಿ ದಾಳಿ ನಡೆಯುವುದಿತ್ತು. ಬ್ರಿಟ ಪ್ರಧಾನಿ ಡೇವಿಡ್ ಕೆಮರೂನ್ ಮತ್ತು ಫ್ರೆಂ ಅಧ್ಯಕ್ಷ ಫ್ರಾಂಕೋ ಹಾಲಂಡ್ ಮಿಲಿ ದಾಳಿಯಲ್ಲಿ ತಾವೂ ಸೇರಿಕೊಳ್ಳುವುದ ಘೋಷಿಸಿದರು.

ಈ ಸನ್ನಿವೇಶದಲ್ಲಿ ಅವರಿಗೆ ಒದಗಿ ಬಂತು. ಸಿರಿಯಾದ ವಿರು ಮಿಲಿಟರಿ ಕಾರ್ಯಾಚರಣೆಗೆ ಅಂಗೀಕ ಸೂಚಿಸಲು ಪಾರ್ಲಿಮೆಂಟು ಅಧಿವೇ ಕರೆಯುವುದಾಗಿ ಬ್ರಿಟಿಷ್ ಘೋಷಿಸಿದರು. ಪಾರ್ಲಿಮೆಂಟು ಅಗ 29ರಂದು ಸೇರಿ ಸರ್ಕಾರದ ನಿರ್ಣಯವ ಬಹುಮತದಿಂದ ತಿರಸ್ಕರಿಸಿತು. ಇದು ಹಿ ಇರಾಕ್ ಮೇಲೆ ದಾಳಿ ಮಾಡಿ ಆಕ್ರಮ ನಡೆಸಲು ಟೋನಿ ಬ್ಲೇರ್ ಅವರ ಅಂಕೆ ತ ನಿರ್ಧಾರದ ಅನುಭವದ ನಂತರ, ಯುದ್ಧ ವಿರುದ್ಧ ಪ್ರಬಲ ಸಾರ್ವಜನಿಕ ಅಭಿಪ್ರಾಯ ಪ್ರತಿಫಲನವಾಗಿತ್ತು.

ಇದರಿಂದಾಗಿ ತರ್ಕ ಮಿಲಿಟರಿ ದಾಳಿ ಯೋಜನೆಯನ್ನು ಬದಲಾಯಿಸದೆ ಅ ಒಬಾಮರಿಗೆ ಬೇರೆ ದಾರಿ ಇರಲಿಲ್ಲ. ಸೆಪ್ಟೆಂಬರ್ 9ರ ಪುನಃ ಸೇರಲಿರುವ ಅಮೆರಿ ಕಾಂಗ್ರೆಸಿನ ಅಂಗಿಕಾ ನಂತರವೇ ಮಿಲಿ ದಾಳಿಯ ಯೋಜನೆಯ ಮುಂದುವರೆಸುವ ಘೋಷಿಸಬೇಕಾಯಿತು. ಅಧ್ಯಕ್ಷ ಒಬಾಮ ಅಮೆರಿಕದ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತ ಹೆಚ್ಚು ಆಕ್ರಮಣಕಾರಿಯಾಗಿರುವ ವ ಬಲಪಂಥೀಯರಾದ ಹಲವು ರಿಪಬ್ಲಿಕ ಬೆಂಬಲವನ್ನು ಅವರು ನಿರೀಕ್ಷಿಸುತ್ತಿದ್ದಾ ತನ್ನ ಮಾಜಿ ವಸಾಹತು ಆಗಿದ್ದ ಸಿರಿಯಾ ಮೇಲೆ ಮಿಲಿಟರಿ ದಾಳಿ ಮಾಡಲು ಫ್ ಇನ್ನೂ ಬದ್ಧವಾಗಿದೆ.

ಸಿರಿಯಾವನ್ನು ಬುಡಮೇಲು ಮಾಡ ಅಮೆರಿಕ, ಅದರ ಯುರೋಪಿಯ ಸಾಥಿಗಳು ಮತ್ತು ಇಸ್ರೇಲ್ ಬಯಸಿವೆ. ಮಾಡಿ ಇರಾನನ್ನು ಒಂಟಿಯಾಗಿಸುವ ಇದರ ಉದ್ದೇಶ. ಆದರೆ ಲಿಬ್ಯಾದಲ್ಲಿ ಆದ ಮಿಲಿಟರಿ ಮಧ್ಯಪ್ರವೇಶಕ್ಕೆ ವಿಶ್ವಸಂಸ್ಥೆ ಅನುಮತಿ ಸಿಗುವ ಸಾಧ್ಯತೆ ಇಲ್ಲ. ಏದರೆ ರಶ್ಯಾ ಮತ್ತು ಚೀನಾ ವಿರೋಧಿಸುತ್ತವೆ. ಆದ್ದರಿಂದ ಅಮೆ

ಜನಶಕ್ತಿ
ಕನ್ನಡ ವಾರಪತ್ರಿಕೆ


ಸಿಯೂಟ ....

ತ 11 ರಿಂದ

ಮ್ಮಳ
ಅಲ್ಲೆಲ್ಲೋ ಸಕಲೇಶಪುರದ
ದ್ದ'ದಲ್ಲಿ ಶಾಲೆಯ
ಧ್ಯೋಪಾಧ್ಯಾಯಿನಿಯ
ಡ –ಪೋಸ್ಟ್‌ಮನ್
ಲೆಯ ಅಡುಗೆ ಮನೆಗೆ
ದು ನಿಲ್ಲುತ್ತಾನಂತೆ.
ನೇನು ಪೋಸ್ಟ್
ಡುವುದಿದೆ ?
ುಗೆಯವರನ್ನು ಬಾಯಿಗೆ
ದಂತೆ ಬಯ್ಯುವನಂತೆ.
ು ಶಾಹಿನಾಬಾನು
ರ ನೋವು. ಕೆಲಸದಿಂದ
ಡದ ಯಾರನ್ನೋ ತೆಗೆದುಹಾಕುವ,
ಕಾದ ಯಾರನ್ನೋ ತಂದುಕೊಳ್ಳುವ
ೀಸ್ಪಿಂಗ್' ಕೆಲಸ.ಊರಿನ ಬಲಾಢ್ಯರ
ದಬಾವಣೆ. ತಿಕ್ಕಾಟಗಳು.

ಗೌರವಕ್ಕೆ ಅಪಮಾನ

ರುವುದು ಅಡುಗೆ ಸಹಾಯಕಿಯರಾಗಿ.
ರಂ ಮಾಡಿಸುವ ಕೆಲಸ ಬರೀ ಕಸ
ಡಿಸುವುದು. ಪಾತ್ರೆ ತೊಳೆಸುವುದು ಮಾತ್ರ.
ೀಪಾಲಪುರ, ಹಂಜಾಳ, ಮಸ್ಸಾಳು...
ು ಎಷ್ಟೊಂದು ಇವೆ, ದೇವದುರ್ಗದಲ್ಲಿ.
ದೊಡ್ಡ ಗೌಡರ ಮನೆ ಬಾಗಿಲೀಗೆ
ಮ್ಮ ಮೂಳೆಯ ತೋರಣ..' ಹಾಡು
ಲ್ಲಿ ಇನ್ನೂ ಗುಂಯ್‌ಗುಡುತ್ತಿದೆ. ಆಕೆ–
ಕೈಯಲ್ಲಿ ಅಡುಗೆ ಪದಾರ್ಥವನ್ನೇ
ಟ್ಟಿಸುವುದಿಲ್ಲವಂತೆ. 'ಆಯಮ್ಮ
ದು ಕೊಟ್ಟಿರೋ ರೇಷನ್ ನಾವ್ ಹೆಂಗ್
ಟ್ಟೋದು ?' ಅನ್ನುವರಂತೆ. ಆ ಬಡ
ತ ಮಹಿಳೆ '.. ..ವ್ವ' ಏನು ಮಾಡಿಯಾಳು.
ತರೆನ್ನುವ ಕಾರಣಕ್ಕೆ ಅಡುಗೆ
ಸಗಾರರನ್ನು ಶಾಲೆಯ ಪಾಯಿಖಾನೆ
ಳೆಯುವುದಕ್ಕೆ ಹಚ್ಚಲಾಗುತ್ತದೆ ಎಂದರೆ
ಮ್ಮ ವ್ಯವಸ್ಥೆ ಎಷ್ಟು ಕ್ರೌರ್ಯ ಅಡಗಿದೆ
ಬುದು ಗೊತ್ತಾಗುತ್ತದೆ.



ತಮ್ಮ ನೌಕರಿ ಕಾಯಂ ಆಗಿ ತಾವೂ ಕೂಡ ಸರ್ಕಾರಿ ನೌಕರರು ಅಂತ ಆಗಿದ್ದ–ರೆ ಮನುಷ್ಯತ್ವದ ಘನತೆಗೆ ಅಪಮಾನವೆಸಗಿ ಹೀಗೆ ಹಿಂಸಿಸುವುದು ಅವರಿಗೆ ಸಾಧ್ಯವಿತ್ತೆ. ಹೀಗೆ ಸರ್ಕಾರಿ ಶಾಲೆಯೊಳಗೆ ಅಸ್ಪೃಶ್ಯತೆಯ ನಿರ್ಲಜ್ಜ ಆಚರಣೆ ಸಾಧ್ಯವಿತ್ತೆ ? ಹೀಗೆ 'ದೊಡ್ಡ ಗೌಡ'ರು 'ದೊಡ್ಡ ಜನ'ಗಳು ಇಷ್ಟು ಸುಲಭಕ್ಕೆ ತಮ್ಮನ್ನು ಒರಳುಕಲ್ಲಿನಂತೆ ಹಾಕಿ ರುಬ್ಬಬಹುದಿತ್ತೇ ? ಬಹುಶಃ ಇಲ್ಲ.

ತಮ್ಮ ನೌಕರಿ ಖಾಯಂ ಆಗಬೇಕು. ಆರೋಗ್ಯ ಕೆಟ್ಟರೆ ಒಳ್ಳೆಯ ಚಿಕಿತ್ಸೆ ಸೌಲಭ್ಯ ಬೇಕು. ರಜೆ, ಪ್ರವಾಸ ಭತ್ಯೆ ನರ ಮನುಷ್ಯರಿಗೆ ಸಿಗಬೇಕಾದದ್ದು, ಅವರಿಗೆ ಇವರಿಗೆ ಸಿಗುತ್ತಿರುವುದು ತಮಗೂ ಬೇಕು. 'ನಿವೃತ್ತಿ' ಆದ ಮೇಲೆ ವಿಶ್ರಾಂತಿ(!!) ಮತ್ತು ವಿಶ್ರಾಂತಿ ವೇತನ ಎರಡೂ ಸಿಗಬೇಕು. ಉದ್ಯೋಗಕ್ಕೆ, ಬದುಕಿಗೆ ಭದ್ರತೆ ಬೇಕು. ಯಾಕೆ ಬೇಡ. ಬೇಕೇ ಬೇಕು.

ಉಹುಂ. ಗೊತ್ತು, ಅವರು ಸುಮ್ಮನೆ ಕೊಡುವುದಿಲ್ಲ. ಇವೆಲ್ಲಾ ಅಷ್ಟು ಸುಲಭಕ್ಕೆ ಆಗುವುದಿಲ್ಲ. ತೀರ್ಮಾನವಾಗಿದೆ– ನಾವು ಬಿಡುವುದಿಲ್ಲ. ಅದಕ್ಕೆ ಈ ಜನ ಕೈಗೆ ಕೆಂಬಾವುಟ ಎತ್ತಿಕೊಂಡಿದ್ದಾರೆ. ಬದು–ಕಿಗೆ –ಆತ್ಮಗೌರವದ ರಕ್ಷಣೆಗೆ ಸರ್ಕಾರ ಕೊಡದ ಬಲವನ್ನು ಸಂಘಟನೆ ಕೊಡುತ್ತಿದೆ. ಇವರಿಗೆ ಸಂಘಟನೆಯ ಬಲ ಏನೆಂದು ಅರಿವಾಗುತ್ತಿದೆ. ಏನೋ ಆಶಾ ಭಾವನೆ ಚಿಗುರಿದೆ. ಅದು ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ವಿಶ್ವಾಸ–ಒಂದಲ್ಲ ಒಂದು ದಿನ 'ಒಳ್ಳೆಯದು ಬಂದೇ ಬರುತ್ತದೆ'. ಕಲ್ಲು ಮುಳ್ಳಿನ ಹೋರಾಟದ ದಾರಿ ಇನ್ನೂ ಬಲು ದೂರ ಇದೆ–ಧೃತಿಗೆಡದೇ ಮುಂದೆ ಹೆಜ್ಜೆ ಹಾಕಬೇಕಿದೆ. ಕತ್ತಲ ಸುರಂಗದ ಕೊನೆಯಲ್ಲಿ ಬೆಳ್ಳಂ ಬೆಳಕು ಇತ್ತ ನುಗ್ಗಿ ಬರುವುದು ಸ್ಪಷ್ಟ ಕಾಣುತ್ತಿದೆ. ಅಚಲ ನಂಬಿಕೆ–ಒಳ್ಳೆಯ ದಿನ ಬಂದೇ ಬರುತ್ತದೆ.

ಸಿರಿಯಾ ....

ಪುಟ 14 ರಿಂದ

ಜನರನ್ನು ರಾಸಾಯನಿಕ ಅಸ್ತ್ರಗಳ ದಾಳಿಯಿಂದ ರಕ್ಷಿಸುವ ಜವಾಬ್ದಾರಿಯ ಹೆಸರಿನಲ್ಲಿ ಮಿಲಿಟರಿ ಮಧ್ಯಪ್ರವೇಶದ ನೆಪ ಹೂಡಲಿವೆ. ಪಶ್ಚಿಮ ಏಶ್ಯಾದ ಮೇಲೆ ಮತ್ತು ಅದರ ತೈಲ ಮತ್ತು ಗ್ಯಾಸ್ ಸಂಪನ್ಮೂಲಗಳ ಮೇಲೆ ಅಧಿಪತ್ಯ ಸ್ಥಾಪಿಸಿ ಅದನ್ನು ನಿಯಂತ್ರಿಸುವ ಸಾಮ್ರಾಜ್ಯಶಾಹಿ ಉದ್ದೇಶವನ್ನು ಈ ನೆಪದಿಂದ ಮರೆಮಾಚಲು ಸಾಧ್ಯವಿಲ್ಲ.

ಇಂದು ಇರಾಕ್ ಮತ್ತು ಲಿಬ್ಯಾಗಳ ತೈಲ ಸಂಪನ್ಮೂಲಗಳನ್ನು ಅಮೆರಿಕ ಮತ್ತು ಯುರೋಪಿಯನ್ ಸಾಮ್ರಾಜ್ಯಶಾಹಿ ದೇಶಗಳು ನಿಯಂತ್ರಿಸುತ್ತಿವೆ. ಅಮೆರಿಕ–ನಾಟೋ ಮಿಲಿಟರಿ ಮಧ್ಯಪ್ರವೇಶದ ನಂತರ ಎರಡೂ ದೇಶಗಳಲ್ಲೂ ಮತೀಯ ಸಂಘರ್ಷಗಳು ಮತ್ತು ಹಿಂಸಾಚಾರ ಹೆಚ್ಚಿವೆ. ಸಿರಿಯಾದಲ್ಲೂ ಶಿಯಾ–ಸುನ್ನಿ ಸಂಘರ್ಷಕ್ಕೆ ಸಾಮ್ರಾಜ್ಯಶಾಹಿ ಪ್ರಚೋದನೆ ನೀಡಿತು. ತಮ್ಮ ಅಧಿಪತ್ಯ ಮತ್ತು ನಿಯಂತ್ರಣ ಸ್ಥಾಪಿಸುವ ಬಯಕೆಯಿಂದ ರಾಷ್ಟ್ರೀಯ ಸಾರ್ವಭೌಮತೆಗಳನ್ನು ಹೊಸಕಿ ಹಾಕಿ, ಇಸ್ಲಾಮಿಕ್ ಮೂಲಭೂತವಾದದ ಪ್ರತಿಗಾಮಿ ಶಕ್ತಿಗಳನ್ನು ಪೋಷಿಸುತ್ತಿವೆ.

ಯುಪಿಎ ಸರ್ಕಾರ ಅಮೆರಿಕನ್ ಮಧ್ಯಪ್ರವೇಶದ ವಿರುದ್ಧ ಪ್ರಬಲ ನಿಲುವು ತೆಗೆದುಕೊಳ್ಳಬೇಕು. ವಿದೇಶ ಸಚಿವ ಸಲ್ಮಾನ್ ಖುರ್ಶಿದ್ ಹೇಳಿರುವಂತೆ ವಿಶ್ವಸಂಸ್ಥೆಯ ಅನುಮತಿ ಇರುವ ಕಾರ್ಯಾಚರಣೆ ಮಾತ್ರ ನಡೆಸಬೇಕು ಎಂಬ ಹೇಳಿಕೆ ಸಾಕಾಗುವುದಿಲ್ಲ. ಅಮೆರಿಕ ವಿಶ್ವಸಂಸ್ಥೆಯನ್ನು ಬೈ ಪಾಸ್ ಮಾಡುವುದು ಖಚಿತವಾಗಿರುವುದರಿಂದ, ಮಿಲಿಟರಿ ಮಧ್ಯಪ್ರವೇಶವನ್ನೇ ಸ್ಪಷ್ಟ ಮಾತುಗಳಲ್ಲಿ ವಿರೋಧಿಸಬೇಕು.

ಸಿರಿಯಾದಲ್ಲಿ ಮಿಲಿಟರಿ ಹಸ್ತಕ್ಷೇಪದ ವಿರುದ್ಧ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲು ಎಡಪಕ್ಷಗಳು ನಿರ್ಧರಿಸಿವೆ. 'ಸಿರಿಯಾದಲ್ಲಿ ಹಸ್ತಕ್ಷೇಪ ಬೇಡ' ಎಂಬ ಘೋಷಣೆಯೊಂದಿಗೆ ಜಗದಗಲಕ್ಕೂ ಚಳುವಳಿ ನಡೆಯಬೇಕಾಗಿದೆ.

ಕಡಲತಡಿ ....

ಪುಟ 6 ರಿಂದ

ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮತ್ತು ವಲಯ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮೂಡಬಿದರೆ, ಗುರುಪುರಗಳಲ್ಲಿ ಪ್ರತಿಭಟನೆ

ಮೂಡಬಿದರೆಯಲ್ಲಿ ಸಪ್ಟೆಂಬರ್ 2 ರಂದು ತಹಶೀಲ್ದಾರ್ ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿ ಮೂಡಬಿದರೆ ವಲಯ ಸಮಿತಿ ಕಾರ್ಯದರ್ಶಿ ಯಾದವ ಶೆಟ್ಟಿ, ನಗರ ಸಭಾ ಸದಸ್ಯೆ ಹಾಗೂ ಜಿಲ್ಲಾ ಸಮಿತಿ ಸದಸ್ಯೆ ರಮಣಿ ಮಾತನಾಡಿದರು.

ಗುರುಪುರ ಕೈಕಂಭದಲ್ಲಿರುವ ನಾಡ ಕಚೇರಿ ಎದುರು ಸಪ್ಟೆಂಬರ್ 2 ರಂದು ಗುರುಪುರ ವಲಯ ಸಮಿತಿ ವತಿಯಿಂದ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಾರ್ಯದರ್ಶಿ ಯು.ಬಿ.ಲೋಕಯ್ಯ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯ ಸದಾಶಿವ ದಾಸ್ ಮತ್ತಿತರರು ಭಾಗವಹಿಸಿದ್ದರು.

ಪುತ್ತೂರು, ಬಂಟ್ವಾಳ, ಬೆಳ್ತಂಗಡಿಗಳಲ್ಲಿ...

ಸಪ್ಟೆಂಬರ್ 3 ರಂದು ಪುತ್ತೂರು ತಾಲೂಕು ಕಚೇರಿಯ ಎದುರು ಪ್ರತಿಭಟನೆ ನಡೆಯಿತು. ತಾಲೂಕು ಕಾರ್ಯದರ್ಶಿ ಪಿ.ಕೆ.ಸತೀಶನ್, ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಎಂ.ಭಟ್ ಮಾತನಾಡಿದರು. ತಹಶಿಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಅಂದು ಬೆಳ್ತಂಗಡಿ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಯಿತು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಎಂ.ಭಟ್, ತಾಲೂಕು ಸಮಿತಿ ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್ ಮಾತನಾಡಿದರು. ಮೊದಲು ಇನ್ನೂರೈವತ್ತಕ್ಕೂ ಮೀರಿದ ಜನರ ಮೆರವಣಿಗೆಯು ಬೆಳ್ತಂಗಡಿ ಮೂರು ರಸ್ತೆಯಿಂದ ತಾಲೂಕು ಕಚೇರಿವರೆಗೆ ನಡೆಯಿತು.

ಬಿ.ಸಿ.ರೋಡಿನಲ್ಲಿರುವ ಬಂಟ್ವಾಳ ತಾಲೂಕು ಕಚೇರಿ ಎದುರು ಸಹ ಅಂ–ದು ಪ್ರತಿಭಟನೆ ನಡೆಯಿತು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಮಾತನಾಡಿದರು. ಬಂಟ್ವಾಳ ತಾಲೂಕು ಸಮಿತಿ ಕಾರ್ಯದರ್ಶಿ ರಾಮಣ್ಣ ವಿಟ್ಲ, ಸದಸ್ಯ ಬಿ.ನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

ಕನ ಬಂಧನಕ್ಕೆ...

ತ 12 ರಿಂದ

ಕ್ಷತೆ ಹಾಗೂ ನರಹಂತಕನ ಕುಟುಂಬದಿಂದ
ಬು ತುಂಬಿಸಿಕೊಂಡಿರುವುದಕ್ಕೆ
ಯಾಗಿದೆ.
ಧರಣಿನಿರತರು ಹೋರಾಟಗೀತೆಗಳನ್ನು
ಡುತ್ತಾ, ತಮಟೆ ಬಡಿಯುತ್ತಾ ಚಳವಳಿಯ
ನ್ನು ಹೆಚ್ಚಿಸುತ್ತಿದ್ದಾರೆ. ಆದರೆ, ಎರಡು
ಮೂಲ್ಯ ಜೀವಗಳನ್ನು ಕಳೆದುಕೊಂಡ
ಟುಂಬದ ನೋವನ್ನು ಅರಿಯದ
ಲ್ಲಾಡಳಿತಕ್ಕೆ ತಮಟೆ ಸದ್ದು ಕಿರಿಕಿರಿಯಂತೆ.
ಾಗಿ ಜೆಎಂಎಸ್ ನಾಯಕಿ ವಿ. ಗೀತಾ
ರಿಗೆ ನೋಟೀಸ್ ನೀಡಿದೆ. ವಾಹ್ ಹೇಗಿದೆ
ಡಿ. ಒಬ್ಬ ಮಹಿಳೆಯೇ ರಾಷ್ಟ್ರೀಯ
ಕರಾಗಿರುವ ಪಕ್ಷ ಆಡಳಿತ ನಡೆಸುತ್ತಿರುವ
ಕದಲ್ಲಿ ಅಧಿಕಾರಶಾಹಿಯ ದೌಲತ್ತು!
ವಿರೋಧಿ ಮಸಲತ್ತು !!!

ಗೊಂಡ ಚಳವಳಿ

ಅಮಾನುಷ ಜೋಡಿ ಕೊಲೆ ನಡೆದು ಎರಡು ತಿಂಗಳಾಗುತ್ತಾ ಬಂದರೂ, ನ್ಯಾಯ ಕೋರಿ ಧರಣಿ ಆರಂಭಿಸಿ ಎರಡು ವಾರಗಳು ಕಳೆದರೂ ಆರೋಪಿಯನ್ನು ಬಂಧಿಸಲು ವಿಫಲವಾಗಿರುವ ಜಿಲ್ಲಾಡಳಿತ ಮತ್ತು ಪೊಲೀಸರ ಧೋರಣೆ ಖಂಡಿಸಿ ಜಿಲ್ಲೆಯ ಹಲವು ಪ್ರಗತಿಪರ ಸಂಘಟನೆಗಳು ಒಂದಾಗಿ ಸೆಪ್ಟೆಂಬರ್ 5ರಂದು ಅಂದರೆ ಅನಿರ್ದಿಷ್ಟ ಧರಣಿಯ 16ನೇ ದಿನದಂದು ಕೋಲಾರ ಜಿಲ್ಲೆಯಾದ್ಯಂತ ಹೋರಾಟವನ್ನು ಹಮ್ಮಿಕೊಂಡಿದ್ದವು. ಕೋಲಾರ, ಮುಳಬಾಗಿಲು, ಮಾಲೂರು, ಬಂಗಾರಪೇಟೆ ಮತ್ತು ಶ್ರೀನಿವಾಸಪುರ ತಾಲೂಕು ಕಚೇರಿಗಳ ಮುಂದೆ ಧರಣಿ ನಡೆಸಲಾಯಿತು. ಜಿಲ್ಲಾ ಕೇಂದ್ರ ಕೋಲಾರದಲ್ಲಿ ಧರಣಿ ಸ್ಥಳದಿಂದ ಮೆಕ್ಕೆ ವೃತ್ತದ ವರೆಗೆ ಮೆರವಣಿಗೆ ನಡೆಸಿ ನಿರ್ಲಕ್ಷ–ನಿರ್ಲಜ್ಜ ಜಿಲ್ಲಾಡಳಿತದ ಭೂತದಹನ ಮಾಡಲಾಯಿತು. ಚಳವಳಿಯನ್ನು ತೀವ್ರಗೊಳಿಸಲು ನಿರ್ಧರಿಸಲಾಗಿದೆ.

ಆಹಾರ ಭದ್ರತೆ.....

ಪುಟ 13 ರಿಂದ

ವಾಸ್ತವವಾಗಿ, ಈಗ ದೇಶದ ಮುಂದಿರುವುದು ಎರಡೇ ದಾರಿ– ನವ–ಉದಾರವಾದಿ ದಿಕ್ಕಿನಲ್ಲೇ ಮುಂದುವರೆದು ಈಗಿನ ಪರಿಸ್ಥಿತಿಗಳ ಹೆಸರಿನಲ್ಲಿ ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಹಾಕಿಯೂ ಹಣಕಾಸು ಕೊರತೆಯ ಸಮಸ್ಯೆ ಹಾಗೆಯೆ ಉಳಿಯುವಂತೆ ಮಾಡುವುದು, ಇಲ್ಲವೇ ವ್ಯಾಪಾರ ಮತ್ತು ಬಂಡವಾಳಗಳ ಮೇಲೆ ನಿಯಂತ್ರಣ ತಂದು ಪರಿಸ್ಥಿತಿಯನ್ನು ಹೆಚ್ಚು ನ್ಯಾಯಪೂರ್ಣಗೊಳಿಸುವುದು, ಅಂದರೆ ನವ–ಉದಾರವಾದಿ ತಪ್ಪು ದಾರಿಯನ್ನು ತ್ಯಜಿಸುವುದು.

ಈ ಎರಡರಲ್ಲಿ ಒಂದನ್ನು ಆಯ್ದುಕೊಳ್ಳುವುದು ಸದ್ಯಕ್ಕೆ ಅನಿವಾರ್ಯ ಎಂದು ಕಾಣದೇ ಇರಬಹುದು. ಆದರೆ ಅಂತಹ ದಿನ ಬಹಳ ದೂರವಿಲ್ಲ ಎನ್ನುತ್ತಾರೆ ಪ್ರೊ. ಪಟ್ನಾಯಕ್.


ಆಹಾರ ಭದ್ರತಾ ಕಾನೂನು, ಭೂಸ್ವಾಧೀನ ಕಾನೂನುಗಳನ್ನು ತಂದವರಿಗೆ ಆಬಗ್ಗೆ ನಿಜವಾಗಿಯೂ ಗಂಭೀರ ಕಾಳಜಿ ಇದ್ದರೆ, ದೇಶದಲ್ಲಿ ಅದು ಹಸಿವಿನ , ಅಪೌಷ್ಟಿಕತೆಯ ಪ್ರಮಾಣವನ್ನು ನಿಜವಾಗಿಯೂ ಇಳಿಸಬೇಕೇ –ಬೇಡವೇ, ರೈತರಿಗೆ ನಿಜವಾಗಿಯೂ ನ್ಯಾಯಯುತ ಪರಿಹಾರ ಕೊಡಿಸಬೇಕೇ–ಬೇಡವೇ ಎಂಬ ಪ್ರಶ್ನೆಯನ್ನು ನೇರವಾಗಿ ಎದುರಿಸಬೇಕಾಗುತ್ತದೆ. ಅದರಿಂದಾಗಿ ನವ–ಉದಾರವಾದಿ ದಾರಿಗೇ ಆತುಕೊಳ್ಳುವುದು ಮತ್ತು ಆ ದಾರಿಯನ್ನು ತ್ಯಜಿಸುವುದು ಇವುಗಳಲ್ಲಿ ಒಂದನ್ನು ಆರಿಸಿಕೊಳ್ಳಲೇ ಬೇಕಾದ ಸನ್ನಿವೇಶ ಬಂದೇ ಬರುತ್ತದೆ ಎಂಬುದನ್ನು ಈ ಆಳುವ ಮಂದಿಯ ನಿಲುವುಗಳು ಮತ್ತು ಕಾರ್ಪೋರೇಟ್ ಕೂಗಾಟಗಳು ಸೂಚಿಸುತ್ತಿರುವಂತಿದೆ.

ಸತ್ಯಾಗ್ರಹ:

ವಾರ್ತಾಭಾರತಿ ಕೃಪೆ

ಹೋರಾಟವೊಂದರ ಗೆಲುವು-ಸೋಲುಗಳ ಕುರಿತು

– ಮುಸಾಫಿರ್



ಪ್ರಕಾಶ್ ಝಾ ಚಿತ್ರಗಳು ವಿರೋಧಾಭಾಸಗಳ ಸಂಗಮವಾಗಿರುತ್ತವೆ. ಜಗತ್ತಿನ ಎಲ್ಲ ಗಂಭೀರ ವಸ್ತುಗಳನ್ನೂ ಅವರು ತಮ್ಮ ಕಮರ್ಶಿಯಲ್ ಸಿನಿಮಾಗಳಿಗೆ ಒಗ್ಗುವ ಚಾಕ್ಲೇಟ್‌ಗಳಾಗಿ ಪರಿವರ್ತಿಸಬಲ್ಲರು. ಅದು ಮೀಸಲಾತಿಯಾಗಿರಲಿ, ನಕ್ಸಲೈಟ್ ಸಮಸ್ಯೆಯಾಗಿರಲಿ, ಭ್ರಷ್ಟಾಚಾರದ ವಿರುದ್ಧ ಸತ್ಯಾಗ್ರಹವಾಗಿರಲಿ. ಸಿನಿಮಾದ ಪರಿಣಾಮ, ಉದ್ದೇಶ ಇತ್ಯಾದಿಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಹೊಸ ತಲೆಮಾರಿನ ಅಭಿರುಚಿಗಳಿಗೆ ಪೂರಕವಾಗಿ ಯಾವುದೇ ವಸ್ತುವನ್ನು ಕಟ್ಟಿಕೊಡುವುದರಲ್ಲಿ ಅವರು ಅಂಜುವುದಿಲ್ಲ.

ಇತ್ತೀಚೆಗೆ ನಕ್ಸಲೈಟನ್ನು ವಸ್ತುವಾಗಿಟ್ಟುಕೊಂಡು 'ಚಕ್ರವ್ಯೂಹ' ಎನ್ನುವ ಚಿತ್ರವನ್ನು ಮಾಡಿ ಅರ್ಧಂಬರ್ಧ ಗೆದ್ದರು. ಇದೀಗ ಅಣ್ಣಾ ಹಝಾರೆ ಹೋರಾಟವನ್ನೇ ಮೇಲಿಂದ ಮೇಲೆ ಕತೆಯಾಗಿ ಆಯ್ದು-ಕೊಂಡು ಅದಕ್ಕೆ ಕಮರ್ಶಿಯಲ್ ಮೇಲೋಡ್ರಾಮಗಳನ್ನು ಬೆರೆಸಿ 'ಸತ್ಯಾಗ್ರಹ' ಎನ್ನುವ ಚಿತ್ರವನ್ನು ತೆರೆಗಿಳಿಸಿದ್ದಾರೆ. ಎಲ್ಲ ತರ್ಕಗಳನ್ನು ಬದಿಗಿಟ್ಟು, ಒಂದು ಸಿನಿಮಾವಾಗಿ ನೋಡಲು ಚಿತ್ರಮಂದಿರಕ್ಕೆ ತೆರಳಿದರೆ ಕೆಲವು ಕಾರಣಗಳಿಗಾಗಿ ಸತ್ಯಾಗ್ರಹ ಚಿತ್ರ ಇಷ್ಟವಾಗುತ್ತದೆ. ಕನಿಷ್ಠ ಭ್ರಷ್ಟಾಚಾರವನ್ನು ವಸ್ತುವಾಗಿಟ್ಟುಕೊಂಡು ಒಂದು ಚಿತ್ರವನ್ನು ಅದರಲ್ಲೂ ಕಮರ್ಶಿಯಲ್ ಚಿತ್ರವೊಂದನ್ನು ತೆಗೆಯಲು ಝಾ ಪ್ರಯತ್ನಿಸಿದ್ದಕ್ಕಾಗಿ ಅವರನ್ನು ಅಭಿನಂದಿಸಬಹುದು.

ದ್ವಾರಕಾ ಆನಂದ್(ಅಮಿತಾಭ್ ಬಚ್ಚನ್) ನಿವೃತ್ತ ಶಿಕ್ಷಕ. ಆದರ್ಶವಾದಿ. ಗಾಂಧಿಯಷ್ಟೇ ನಿಷ್ಠುರ ಮನುಷ್ಯ. ಅವರೊಂದು ಶಾಲೆಯನ್ನು ನಡೆಸುತ್ತಿರುತ್ತಾರೆ. ಅವರ ಮಗ ಅಖಿಲೇಶ್ ಪ್ರಾಮಾಣಿಕ ಎಂಜಿನಿಯರ್. ಅಖಿಲೇಶನ್ ಗೆಳೆಯ ಮಾನವ್(ಅಜಯ್ ದೇವಗನ್) ದುಡ್ಡು ಮಾಡಬೇಕು ಎಂಬ ಆಶೆಯನ್ನು ಹೊತ್ತವನು. ಆದರೆ ಮನೆಗೆ ಬಂದ ಮಾನವ್‌ನನ್ನು ದ್ವಾರಕಾ ಆನಂದ್ ಅವನ ಲಾಲಸೆಗಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ. ಮಾನವ್ ನೊಂದು ಅಲ್ಲಿಂದ ತೆರಳುತ್ತಾನೆ. ಇದಾದ ಬಳಿಕ, ಕತೆ ಒಮ್ಮೆಲೆ ಮೂರು ವರ್ಷದ ನಂತರಕ್ಕೆ ಹೊರಳುತ್ತದೆ. ಮಾನವ್ ದೊಡ್ಡ ಉದ್ಯಮಿಯಾಗಿದ್ದಾನೆ. ಇದೇ ಸಂದರ್ಭದಲ್ಲಿ ಅಖಿಲೇಶ್ ನಿರ್ಮಿಸಿದ ಮೇಲ್ಸೇತುವೆ ಕುಸಿಯುತ್ತದೆ.

ಅಲ್ಲಿಂದ ಕತೆ ತೆರೆದುಕೊಳ್ಳುತ್ತದೆ. ಅಖಿಲೇಶ್ ನಿಗೂಢವಾಗಿ, ಅಪಘಾತವೊಂದರಲ್ಲಿ ಸಾಯುತ್ತಾನೆ. ಅನಂತರ ಅದು ಕೊಲೆ ಎಂದು ಗೊತ್ತಾಗುತ್ತದೆ. ಇದೇ ಸಂದರ್ಭದಲ್ಲಿ ಸಚಿವ ಬಲರಾಂ ಸಿಂಗ್ (ಮನೋಜ್ ಬಾಜ್ಪೈ) ಅಖಿಲೇಶ್ ಸಾವಿಗೆ ಸಂತಾಪ ಸೂಚಿಸಿ ಪರಿಹಾರ ಘೋಷಿಸುತ್ತಾನೆ. ಆದರೆ ಆ ಹಣಕ್ಕಾಗಿ ಅಖಿಲೇಶ್ ಪತ್ನಿ ಕಚೇರಿ ಕಚೇರಿ ಅಲೆಯಬೇಕಾಗುತ್ತದೆ. ಲಂಚ ನೀಡಬೇಕಾದ ಸನ್ನಿವೇಶ ನಿರ್ಮಾಣವಾಗುತ್ತದೆ. ಇದು ಕೊನೆಯಲ್ಲಿ ದ್ವಾರಕಾ ಆನಂದ್ ಜಿಲ್ಲಾಧಿಕಾರಿಗೆ ಕೆನ್ನೆಗೆ ಬಾರಿಸುವ ಮೂಲಕ ಕೊನೆಯಾಗುತ್ತದೆ. ಅದಕ್ಕಾಗಿ ದ್ವಾ-ರಕಾ ಅವರನ್ನು ಬಂಧಿಸಲಾಗುತ್ತದೆ. ಈಗ ಮಾನವ್ ಮತ್ತೆ ಪ್ರವೇಶವಾಗುತ್ತಾನೆ. ದ್ವಾ-ರಕಾ ಆನಂದ್ ಅವರನ್ನು ಬಿಡಿಸುವ ಪ್ರಕ್ರಿಯೆ ನಿಧಾನಕ್ಕೆ ಹೋರಾಟ, ಸತ್ಯಾಗ್ರಹದ ರೂಪ ಪಡೆಯುತ್ತದೆ. ಮಾನವ್ ಜೊತೆ ಸ್ಥಳೀಯ ಗುಂಪಿನ ನಾಯಕ (ಅರ್ಜುಲ್ ರಾಮ್ಪಾಲ್) ಜೊತೆಯಾಗುತ್ತಾನೆ. ಹಾಗೆಯೇ ಇನ್ನೋರ್ವ ಆಂಗ್ಲ ಪತ್ರಕರ್ತೆ(ಕರೀನಾಕಪೂರ್) ಕೂಡ ಜೊತೆಯಾಗುತ್ತಾಳೆ. ಈ ಪ್ರಕ್ರಿಯೆ ಇಡೀ ವ್ಯವಸ್ಥೆಯ ವಿರುದ್ಧದ ಹೋರಾಟವಾಗಿ ರೂಪಪಡೆಯುತ್ತದೆ. ಆದರೆ ನಿಧಾನಕ್ಕೆ ಸತ್ಯಾಗ್ರಹ ಬೇರೆ ಬೇರೆ ರೂಪಗಳನ್ನು ಪಡೆದು, ಅದರ ಉದ್ದೇಶ ವಿಫಲವಾಗುತ್ತದೆ. ದ್ವಾರಕಾ ಆನಂದ್ ಹತ್ಯೆಯಲ್ಲಿ ಸತ್ಯಾಗ್ರಹವೂ ಕೊನೆಯಾಗಿ ಬಿಡುತ್ತದೆ.

ಕಥಾ ವಸ್ತುವಿನಲ್ಲಿ ಸಮನ್ವಯತೆ ಕಾಪಾಡುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಚಿತ್ರದ ಕೊನೆ ವಾಸ್ತವಕ್ಕೆ ಹತ್ತಿರವಾಗಿ ಇದೆ. ಗುರಿಯನ್ನು ತಲುಪುವ ಮಾರ್ಗದಲ್ಲಿ ಎಡವಿದರೆ ಇಡೀ ಉದ್ದೇಶವೇ ಎಡವುತ್ತದೆ ಎನ್ನುವುದನ್ನು ಝಾ ಚಿತ್ರದಲ್ಲಿ ಹೇಳಲು ಪ್ರಯತ್ನಿಸುತ್ತಾರೆ. ತಮ್ಮ ಬೇಡಿ-ಕೆ ಈಡೇರಿಸಲು ಮಾನವ್ ಸರಕಾರದ ಮೇಲೆ ಒತ್ತಡ ಹೇರಲು ಪ್ರಯತ್ನಿಸುತ್ತಾನೆ. ಅದರ ಭಾಗವಾಗಿ ಆತ ತಪ್ಪು ಹೆಜ್ಜೆಗಳನ್ನು ಇಡುತ್ತಾನೆ. ಪರಿಣಾಮವಾಗಿ ಸತ್ಯಾಗ್ರಹದ ಉದ್ದೇಶವೇ ತಲೆಕೆಳಗಾಗುತ್ತದೆ. ಹಾಗೆಯೇ ತಮ್ಮ ಚಿತ್ರದೊಳಗಿನ ಸ... ಕೋಮುವಾದಿ ಪಕ್ಷವನ್ನು ಝ... ಇಟ್ಟಿರುವುದು ಚಿತ್ರದ ಕುರಿತು ... ಭರವಸೆ ತಾಳುವಂತೆ ಮಾಡುತ್ತದೆ... ಛಾಯಾಗ್ರಹಣ ಚಿತ್ರದ ಶ್ರೀಮಂ... ಹೆಚ್ಚಿಸುತ್ತದೆ. ಆದರೆ ಚಿ... ಬಿಗಿಯಿಲ್ಲ. ಚಿತ್ರದ ಕೊನೆಯಲ್ಲಿ ... ತನ್ನ ಹಿಡಿತವನ್ನು ಕಳೆದುಕೊ... ಇನ್ನಷ್ಟು ಪರಿಣಾಮಕಾರಿಯಾಗಿ ... ಮಾಡುವ ಅವಕಾಶ ಝಾ ಅ... ಅಮಿತಾಭ್ ಬಚ್ಚನ್ ... ಅನುಭವಿಸಿ ಅಭಿನಯಿಸಿದ್ದಾರೆ. ದೇವಗನ್, ಕರೀನಾಕಪೂರ್ ... ನ್ಯಾಯ ನೀಡಿದ್ದಾರೆ. ಅರ್ಜುನ್ ... ಪೋಷಣೆಯಿಲ್ಲ. ಅಮೃತಾರಾವ್ ... ಚಿತ್ರದುದ್ದಕ್ಕೂ ಕಣ್ಣೀರು ಹಾಕು... ಚಿತ್ರದ ಉದ್ದೇಶ ಚೆನ್ನಾಗಿದೆ. ಈ ... ಕ್ಕಾಗಿ ಚಿತ್ರವನ್ನು ಒಮ್ಮೆ ನೋ... ಯಾವುದೇ ಅಡ್ಡಿಯಿಲ್ಲ.



ಇವರು ಯಾರು?
ಏನಾಗಿದೆ ಇವರಿಗೆ?
ವಿವರಗಳಿಗೆ ಓದಿ ಪುಟ 10 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**